ನಮ್ಮ ಸಾಂಸ್ಕೃತಿಕ ಚಿಂತಕರು

ಶಿಕ್ಷಣ ಸಿರಿ

ಡಾ. ಪೂರ್ಣಿಮಾ ಜಿ.





ಲೇಖಕರು :

ಡಾ. ರಘುಶಂಖ ಭಾತಂಬ್ರಾ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ.

Email : kasapabidar@gmail.com - www.kasapabidar.in



ಡಾ. ರಘುಶಂಖ ಭಾತಂಬ್ರಾ



ರಘುಶಂಖ ಎಂಬ ಕಾವ್ಯನಾಮದಿಂದ ಖ್ಯಾತರಾದ ಡಾ. ರಘುನಾಥ ಖರಾಬೆಯವರು ಈ ಭಾಗದ ಅಪರೂಪದ ಚಿಂತಕರು. ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಭಾತಂಬ್ರಾ ಗ್ರಾಮದ ಪ್ರತಿಷ್ಠಿತ ಖರಾಬೆ ಮನೆತನದ ಶ್ರೀಮತಿ ಗುರಮ್ಮ ಶ್ರೀ ಶಂಕರೆಪ್ಪಾ ಅವರ ಮಗನಾಗಿ 01-01-1970ರಲ್ಲಿ ಜನಿಸಿರುವ ಇವರು ಎಂ.ಎ; ಎಂ.ಫಿಲ್; ಪಿಎಚ್.ಡಿ. ಪದವಿಧರರು. ವಿದ್ಯಾರ್ಥಿ ದೆಸೆಯಲ್ಲಿಯೇ 'ಎರಡು ಮುಖ' ಎನ್ನುವ ಕವನ ಸಂಕಲನ ಪ್ರಕಟಿಸಿ, ಸಾಹಿತ್ಯಲೋಕ ಪ್ರವೇಶ ಮಾಡಿರುವ ಇವರು ನಿರಂತರ ಸಂಶೋಧನೆ, ವಿಶ್ಲೇಷಣೆ, ವಿಮರ್ಶೆಗೆ ತೊಡಗಿಸಿಕೊಂಡವರು. ವಿವಿಧ ಪದವಿ ಕಾಲೇಜುಗಳಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ಸದ್ಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗರ್ಮಾತಾಂಡಾದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಂಸ್ಕೃತಿ ಚಿಂತನೆ, ವಚನ ಸಾಹಿತ್ಯ ಇವರ ಆಸಕ್ತಿಯ ವಲಯವಾಗಿದ್ದರಿಂದ 'ವಚನಕಾರರ ವೃತ್ತಿ ಮೌಲ್ಯಗಳು' ಕುರಿತು ಪಿಎಚ್.ಡಿ. ಸಂಶೋಧನೆ ಮಾಡಿರುವರು. ಶರಣ ಚಳವಳಿಯ ಮೂಲ ಜೀವಧಾತುವಾದ 'ಕಾಯಕ' ತತ್ವಕ್ಕೆ ಹೊಸ ವಿಭಿನ್ನ ಆಲೋಚನಾಸ್ಪರ್ಶ ನೀಡಿ ವಚನ ಅಧ್ಯಯನ ಜಿಜ್ಞಾಸುಗಳಿಗೆ ಬಹುದೊಡ್ಡ ಆಕರ ಒದಗಿಸಿರುವರು. ವಚನ ಸಾಹಿತ್ಯ ಕುರಿತು ಅಧಿಕೃತವಾಗಿ ಬರೆವ ಬೆರಳಣಿಕೆಯ ವಿದ್ವಾಂಸರಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ. ಯಾವುದೇ ಸಂಗತಿಯಾಗಿದ್ದರೂ ಕರಾರುವಕ್ಕಾಗಿ ಸಾಧಾರವಾಗಿ, ಪ್ರತಿಪಾದಿಸುವ ಮೂಲಕ ಆಯಾ ವಿಷಯಗಳಿಗೆ ಪರಿಪೂರ್ಣತೆ, ಸ್ಪಷ್ಟತೆ ತಂದುಕೊಡುವ ಪ್ರಾಜ್ಞತೆ ಇವರ ಒಟ್ಟು ಸಂಶೋಧನ ಬರವಣಿಗೆಯ ಮೂಲಸೆಲೆಯಾಗಿದೆ. ಅಧ್ಯಯನ, ಅಧ್ಯಾಪನ, ಸಂಶೋಧನೆ ಇವರ ಸಾಂಸ್ಕೃತಿಕ ಜೀವನದ ಅಂತಃಶಕ್ತಿಗಳು. ಸದಾ ಹೊಸತನ್ನು ಆಲೋಚಿಸುವ, ಪರಿಶೋಧಿಸುವ ಗುಣ ಹೋದಿದ್ದು ಎರಡು ಮುಖ (ಕಾವ್ಯ), ಹೃದಯಾಳದ ನೋವುಗಳು (ಕಾವ್ಯ), ವಚನ ಸಾಹಿತ್ಯದ ಹೊಸ ಪರಿಕಲ್ಪನೆ, ಕರ್ನಾಟಕೇತರ ಶರಣ ಶರಣೆಯರು, 'ಶ್ರೀಗಂಧ' ಪ್ರಭುರಾವ ಕಂಬಳಿವಾಲೆ, ವಚನಕಾರರ ವೃತ್ತಿ ಮೌಲ್ಯಗಳು, ವಚನ ಸಂವಾದ, ಭೂಮಿಕೆ, ಮಹಾದಾಸೋಹ ಪಥಿಕ, ಅಟ್ಟಳೆನಾಡಿನ ಅಣಿಮುತ್ತುಗಳು, ವರ್ತಮಾನದೊಡಲು ಇತ್ಯಾದಿ ಕೃತಿಗಳು ಇವರಿಗೆ ಹೆಸರು ತಂದಿವೆ. ಷಣ್ಮುಖ ಶಿವಯೋಗಿಯ ವಚನಗಳು, ಕಾಯಕಜೀವಿ ಶಿವಶರಣ ನುಲಿಯ ಚಂದಯ್ಯ, ಕಲ್ಯಾಣ ಕಲಾ ಪ್ರತಿಭೆ, ಚಿತ್ರ ಪಲ್ಲವಿ, ಚೇತನ ಶಿಲ್ಪಿ (ದೇಶಾಂಶ ಹುಡಗಿ ಅಭಿನಂದನ ಗ್ರಂಥ), ಶರಣ ಸೌರಭ, ಶರಣದೀಪ್ತಿ ಮುಂತಾದ ಸಂಪಾದಿತ ಕೃತಿಗಳನ್ನು ಹೊರತಂದು ಪ್ರಕಟಿಸಿದ್ದಾರೆ. ಹೀಗೆ 15 ಸ್ವತಂತ್ರ, 25 ಸಂಪಾದಿತ ಮೌಲಿಕ ಕೃತಿಗಳನ್ನು ನೀಡಿ ಕನ್ನಡ ಸಾಹಿತ್ಯದ ಸಾರಸ್ವತಲೋಕ ಶ್ರೀಮಂತಗೊಳಿಸಿರುವರು. ಸರಳತೆ ಅವರ ಹುಟ್ಟುಗುಣವಾದರೆ, ಜೀವಕಾರುಣ್ಯ ಅವರ ಸಾಹಿತ್ಯದ ಗುಣವಾಗಿದೆ. ಚೇತನ ತರಂಗ ಮಾಸಿಕ ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದಾರೆ. ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕಲಬುರ್ಗಿ ಆಕಾಶವಾಣಿಯಲ್ಲಿ ಭಾಷಣ, ರೂಪಕ, ಚಿಂತನ, ಕವನಗಳು ಪ್ರಸಾರಗೊಂಡಿವೆ. ಅನೇಕ ವಿಚಾರ ಸಂಕಿರಣ, ಸಮ್ಮೇಳನದಲ್ಲಿ ಭಾಗವಹಿಸಿ ಮೌಲಿಕ ಉಪನ್ಯಾಸಗಳನ್ನು ಮಂಡಿಸಿದ್ದಾರೆ. 100ಕ್ಕೂ ಹೆಚ್ಚು ಲೇಖನಗಳು ನಾಡಿನ ಖ್ಯಾತ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ದಕ್ಷಿಣ ಭಾರತ ಪ್ರಾದೇಶಿಕ ಭಾಷಾ ಸಂಸ್ಥಾನ, ವಿವಿಧ ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಪ್ರಾಯೋಜಿತ ಫೆಲೋಶಿಪ್ ಅಡಿಯಲ್ಲಿ "ಬೀದರ ಪ್ರದೇಶದ ಸ್ವಾತಂತ್ರ್ಯ ಸಂಗ್ರಾಮ" ಕುರಿತ ಸಂಶೋಧನ ಪ್ರಬಂಧ ಸಲ್ಲಿಸಿದ್ದಾರೆ.

ಶ್ರೀಯುತರ ಸೇವೆ ಸಾಧನೆಗಳನ್ನು ಗೌರವಿಸಿ ವಿಶ್ವಭಾರತಿ ಸಮಾಜ ಸೇವಾ ಪ್ರಶಸ್ತಿ, ತಾಲೂಕಾ-ಜಿಲ್ಲಾಢಳಿತದ ರಾಜ್ಯೋತ್ಸವ ಪ್ರಶಸ್ತಿ, ಸುವರ್ಣ ಕನ್ನಡಿಗ ಪ್ರಶಸ್ತಿ, ಉತ್ತಮ ಓದುಗ ಪ್ರಶಸ್ತಿ ಅಲ್ಲದೇ ವಿವಿಧ ಸಂಘ ಸಂಸ್ಥೆಗಳ ಇವರಿಗೆ ಗೌರವ ಪುರಸ್ಕಾರಗಳಿಗೂ ಭಾಜನರಾಗಿರುವರು. ಸಂಶೋಧನ, ಸಂಪಾದನೆ, ವಿಮರ್ಶೆ, ಸೃಜನಶೀಲ ನೆಲೆಯ ಆಯಾಮಗಳನ್ನು ಮುಖಾಮುಖಿಯಾಗಿಸುವ ಇವರದ್ದು ಶುದ್ಧ ವೈಚಾರಿಕ ಮನೋಭಾವವಾಗಿದ್ದು ಲೋಕಕಲ್ಯಾಣವೇ ಇವರ ಬರವಣಿಗೆಗಳ ಕೇಂದ್ರ ಆಶಯ. ಪ್ರಸ್ತುತ ಶಿಕ್ಷಣ ಸಿರಿ ಡಾ. ಪೂರ್ಣಿಮಾ ಜಿ. ಕೃತಿ ಡಾ. ಪೂರ್ಣಿಮಾ ಜಿ. ಅವರ ಜೀವನ ಸಾಧನೆ ಕೇಂದ್ರಿತವಾಗಿದ್ದು ಸಾಮಾನ್ಯ ಜನರಿಗೆ ಚೇತೋಹಾರಿಯಾಗಿ ಸತ್ಪ್ರೇರಣೆ ಒದಗಿಸುತ್ತದೆ. ಇಂಥ ಸೃಜನಶೀಲ ಬರಹಗಾರರು, ಪ್ರಬುದ್ಧ ಸಂಶೋಧಕರಾದ ಡಾ. ರಘುಶಂಖ ಭಾತಂಬ್ರಾ ಅವರಿಂದ ಇನ್ನಷ್ಟು ಉತ್ತಮ ಕೃತಿಗಳು ಹೊರಬರಲೆಂದು ಶುಭಹಾರೈಸುವೆ.

ವಿದ್ಯಾವತಿ ಬಲ್ಲೂರ

ಬೀದರ ಜಿಲ್ಲಾ ೧೭ನೇ ಕನ್ನಡ ಸಾಹಿತ್ಯ ಸಮ್ಮೇಳನ ನಿಮಿತ್ತ
ಸಾಂಸ್ಕೃತಿಕ ಚಿಂತಕರು ಮಾಲಿಕೆ

ಶಿಕ್ಷಣ ಸಿರಿ

ಡಾ. ಪೂರ್ಣಿಮಾ ಜಿ.

ಲೇಖಕರು
ಡಾ. ರಘುಶಂಖ ಭಾತಂಬ್ರಾ

ಪ್ರಕಾಶಕರು
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

ಶಿಕ್ಷಣ ಸಿರಿ : ಡಾ. ಪೂರ್ಣಿಮಾ ಜಿ.
ಲೇಖಕರು: ಡಾ. ರಘುಶಂಖ ಭಾತಂಬ್ರಾ, "ಬಸವಾಶ್ರಯ" ಪ್ಲಾಟ್ ಸಂಖ್ಯೆ ೧೪-೧೫ ಮುಕ್ತಿಧಾಮ ರಸ್ತೆ, ಮಾಧವನಗರ, ಬೀದರ-೨
ಸಂಚಾರಿ : ೯೯೧೬೪೨೪೪೧೧; ೭೬೭೬೧೦೯೬೦೯
ಪ್ರಕಾಶಕರು : ಸುರೇಶ ಚನಶೆಟ್ಟಿ,
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ. ಮೊ: ೯೯೮೬೭೯೨೩೨೩
E-mail:kasapabidar@gmail.com, web: www.kasapabidar.in
ಪ್ರಥಮ ಮುದ್ರಣ : ೨೦೧೯
ಹಕ್ಕುಗಳು : ಪ್ರಕಾಶಕರು
ಪುಟಗಳು : ೯೨+xii=೧೦೪
ಬೆಲೆ : ೧೦೦/-
ಅಕ್ಷರ ಜೋಡಣೆ : ವಚನಚೇತನ ಕಂಪ್ಯೂಟರ್ಸ್, ಬೀದರ.
ಪುಸ್ತಕ ವಿನ್ಯಾಸ : ಆರ್.ವ್ಹಿ. ಕುಂಬಾರ, ಬೀದರ.
ಮುಖಪುಟ ವಿನ್ಯಾಸ : ಅಕ್ಷಯ ಗ್ರಾಫಿಕ್ಸ್, ಬೀದರ
ಮುದ್ರಕರು : ವಿಶ್ವಾಸ ಪ್ರೆಸ್ ಬೆಂಗಳೂರು

ವಿ.ಸೂ. : ಈ ಕೃತಿಯಲ್ಲಿ ಬರುವ ಅಭಿಪ್ರಾಯಗಳು ಹಾಗೂ ವಿವರಗಳು ಲೇಖಕರಿಗೆ ಸಂಬಂಧಿಸಿದವುಗಳಾಗಿರುತ್ತವೆ. –ಪ್ರಕಾಶಕರು

ಪುಸ್ತಕ ಪ್ರಕಟಣೆ ಸಲಹಾ ಸಮಿತಿ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಸುರೇಶ ಚನಶೆಟ್ಟಿ

ಗೌರವಾಧ್ಯಕ್ಷರು
ಪಂಚಾಕ್ಷರಿ ಪುಣ್ಯಶೆಟ್ಟಿ

ಗೌರವ ಕಾರ್ಯದರ್ಶಿ
ಡಾ.ಬಸವರಾಜ ಬಲ್ಲೂರ
ಡಾ. ರಾಜಕುಮಾರ ಹೆಬ್ಬಾಳೆ

ಗೌರವ ಕೋಶಾಧ್ಯಕ್ಷರು
ಟಿ.ಎಂ.ಮಚ್ಚೆ

ಉಪಾಧ್ಯಕ್ಷರು
ಜಯದೇವಿ ಯದಲಾಪೂರೆ
ವಿಜಯಕುಮಾರ ಗೌರೆ,
ವಿರುಪಾಕ್ಷ ಗಾದಗಿ

ಮಹಿಳಾ ಪ್ರತಿನಿಧಿ
ಕಸ್ತೂರಿ ಪಟಪಳ್ಳಿ
ಮಹಿಳಾ ಸಾಹಿತಿ
ಮೇನಕಾ ಪಾಟೀಲ

ಪರಿಶಿಷ್ಟ ಜಾತಿ ಪ್ರತಿನಿಧಿ
ಡಾ.ಮಲ್ಲಿಕಾರ್ಜುನ ನಿಂಗದಳ್ಳಿ

ಪರಿಶಿಷ್ಟ ಪಂಗಡ ಪ್ರತಿನಿಧಿ
ಡಾ. ರಾಜಕುಮಾರ ಅಲ್ಲೂರೆ

ಸಂಘ ಸಂಸ್ಥೆ ಪ್ರತಿನಿಧಿ
ಸುಬ್ರಹ್ಮಣ್ಯ ಪ್ರಭು

ಜಿಲ್ಲಾ ವಾರ್ತಾಧಿಕಾರಿ
ಗವಿಸಿದ್ದಪ್ಪ ಹೊಸಮನಿ

ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು
ಸಿದ್ರಾಮ ಸಿಂಧೆ

ನಿಕಟಪೂರ್ವ ಅಧ್ಯಕ್ಷರು
ಪ್ರೊ. ಸಿದ್ರಾಮಪ್ಪ ಮಾಸಿಮಾಡೆ

ಜಿಲ್ಲಾ ಶಿಕ್ಷಣಾಧಿಕಾರಿ
ಶಿವಕುಮಾರ ಸ್ವಾಮಿ

ಗಡಿ ಪ್ರತಿನಿಧಿ
ಪ್ರೊ. ಶಿವಕುಮಾರ ಕಟ್ಟೆ
ವಸಂತ ಹುನಸನಾಳೆ,

ಅಧ್ಯಕ್ಷರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು
ಎಂ. ಎಸ್. ಮನೋಹರ, ಬೀದರ
ಜಗನ್ನಾಥ ಮೂಲಗೆ, ಔರಾದ
ಸಚ್ಚಿದಾನಂದ ಮಠಪತಿ, ಹುಮನಾಬಾದ
ಡಾ. ರುದ್ರಮಣಿ ಮಠಪತಿ, ಬಸವಕಲ್ಯಾಣ
ಶಶಿಧರ ಕೊಸಂಬೆ ಭಾಲ್ಕಿ
ಪ್ರಶಾಂತ ಮಠಪತಿ ಕಮಾಲನಗರ
ಡಾ. ಶಿವಲೀಲಾ ಮಠಪತಿ, ಹುಲಸೂರ
ಅನಿಲಕುಮಾರ ಸಿಂಧೆ, ಚಿಟಗುಪ್ಪ

ಸಂಘಟನಾ ಕಾರ್ಯದರ್ಶಿ

ಉಮಾಕಾಂತ ವಾರದ,
ಶಾಂತಲಿಂಗ ಮಠಪತಿ
ವೀರಶೆಟ್ಟಿ ಪಟ್ನೆ

ಸಂಚಾಲಕರು

ಶಿವಶಂಕರ ಟೋಕರೆ

ಗೌರವ ಸಲಹೆಗಾರರು

ಕಾಶೆಪ್ಪಾ ಬಾಲಕಿಲೆ
ಶರಣಪ್ಪಾ ಮಿಠಾರೆ
ವೈಜಿನಾಥ ಕಮಠಾಣೆ
ಬಸವರಾಜ ಧನ್ನೂರ
ಪ್ರೊ. ಎಸ್. ವಿ. ಕಲ್ಮಠ
ಝಾಕೀರ ಹುಸೇನ್
ಡಾ.ಜಗನ್ನಾಥ ಹೆಬ್ಬಾಳೆ
ಪ್ರೊ. ಶಂಭುಲಿಂಗ ಕಾಮಣ್ಣಾ
ಎಸ.ಎಮ್.ಜನವಾಡಕರ್
ಡಾ.ಮನ್ಮಥ ಡೋಳೆ
ಶಿವಯ್ಯಾ ಸ್ವಾಮಿ

ವಿಶೇಷ ಆಹ್ವಾನಿತರು

ರಾಜೆಂದ್ರಕುಮಾರ ಗಂದಗೆ
ಡಾ.ಸಿ ಆನಂದರಾವ
ಬಾಲಾಜಿ ಬಿರಾದಾರ
ಪಾಂಡುರಂಗ ಬೆಲ್ದಾರ್
ರವೀಂದ್ರ ರೆಡ್ಡಿ
ಪ್ರೊ.ರಾಜಕುಮಾರ ಅಲ್ಲೂರೆ
ಡಾ. ಬಂಡಯ್ಯಾ ಸ್ವಾಮಿ

ಕಾರ್ಯಕಾರಿ ಸದಸ್ಯರು

ಜಗನ್ನಾಥಕಮಲಾಪೂರೆ
ಯೋಗೇಶ ಮಠ
ಸಚೀನ ವಿಶ್ವಕರ್ಮ
ದೇವೆಂದ್ರ ಕರಂಜೆ
ಅನೀಲಕುಮಾರ ದೇಶಮುಖ
ಸಿದ್ಧಾರೂಢ ಕಂದಗೂಳ
ಶಿವಾನಂದ ಪಾಟೀಲ
ಗಿರಿರಾಜ ವಾಲೆ
ಆನಂದ ಪಾಟೀಲ

ಮುನ್ನುಡಿ

ಸಾಹಿತ್ಯವು ಯಾವಾಗಲೂ ಒಂದು ವಿಶಿಷ್ಟ ಅನುಭವ ಪರಂಪರೆಯನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತದೆ. ಒಂದು ಕೃತಿಯನ್ನು ಓದುತ್ತಿದ್ದಂತೆ ಅದರ ಅನುಭವಗಳು ನಮ್ಮೊಳಗೆ ಸೇರಿಕೊಳ್ಳುತ್ತ, ಅಲ್ಲಿನ ಅನುಭವ ಸಾರ್ವತ್ರಿಕರಣಗೊಳ್ಳುತ್ತ ಹೋಗುತ್ತದೆ. ಸಾಹಿತ್ಯಕೃತಿ ನಮ್ಮನ್ನು ತಟ್ಟಬೇಕು ಎಂದರೆ ಅಲ್ಲಿನ ಅನುಭವಗಳು ಗಾಢವಾಗಿರಬೇಕು, ಅಲ್ಲಿನ ಸೃಜನಶೀಲತೆಯ ಸೆಲೆಗಳು ನಮ್ಮನ್ನು ಸೆಳೆಯುವಂತೆ ಇರಬೇಕು. ಆ ಕೃತಿ ತನ್ನ ಸುತ್ತಲಿನ ಜೀವನವನ್ನು, ಪರಿಕರಗಳನ್ನು ಒಳಗೊಂಡಿದ್ದಾಗ ಇದು ಸಾಧ್ಯವಾಗುತ್ತದೆ.

ತಲೆ ತಲಾಂತರಗಳಿಂದ ಕೆಲವರು ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿ, ಜಲ, ಜನ ಸಮುದಾಯವನ್ನು ತಮ್ಮದೇ ರೀತಿಯಲ್ಲಿ ಶ್ರೀಮಂತಗೊಳಿಸಲು ಶ್ರಮಿಸಿರುತ್ತಾರೆ. ಅವರ ಶ್ರಮ ಮುಂದಿನ ತಲೆಮಾರಿಗೆ ತಿಳಿಯದೇ ಹೋಗಬಾರದು. ಜನ ಸಮುದಾಯದ ಶ್ರೇಯಸ್ಸಿಗೆ ಅವರುಕೊಟ್ಟ ಕೊಡುಗೆಯನ್ನು ಜನ ನೆನಪಿಸಿಕೊಳ್ಳುವಂತೆ ಆಗಬೇಕು, ಹಾಗೆ ನೆನಪಿಸಿಕೊಂಡರೆ ಅದು ಒಂದು ಸಮುದಾಯದಲ್ಲಿ ಇರುವ, ಇರಬೇಕಾದ ಕೃತಜ್ಞತೆಯ ಕುರುಹು.

ಬೀದರ್ ಜಿಲ್ಲೆಯಲ್ಲಿ ಅಂಥ ಹಿರಿಯರ ಕೊಡುಗೆಯನ್ನು ದಾಖಲು ಮಾಡುವ ಕಾರ್ಯ ನಡೆದು ಅದು ಇದೀಗ ಕಾರ್ಯರೂಪಕ್ಕೆ ಬಂದಿರುವುದು ಶ್ಲಾಘನೀಯ ಕೆಲಸ. ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕದ ಅಧ್ಯಕ್ಷರಾದ ಶ್ರೀ ಸುರೇಶ ಚನಶೆಟ್ಟಿಯವರಿಗೆ ಇಂಥ ವಿಚಾರವೊಂದು ಹೊಳೆದು ಅದನ್ನು ಅವರು ಸ್ವಯಂಸ್ಫೂರ್ತಿಯಿಂದ ಕೈಗೆತ್ತಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಅವರ ಜೀವಿತಾವಧಿಯಲ್ಲಿಯೇ ಅವರು ಪ್ರತಿಪಾದಿಸಿದ ಜೀವನಮೌಲ್ಯಗಳನ್ನು ಅಕ್ಷರರೂಪಕ್ಕೆ ಇಳಿಸಬೇಕು ಎಂದು ಅವರು ಒಂದು ಯೋಜನೆಯನ್ನೂ ರೂಪಿಸಿದರು.

ಅದಕ್ಕೆ ಪೂರಕವಾಗಿ "ಸಾಂಸ್ಕೃತಿಕ ಚಿಂತಕರು' ಎಂಬ ಸರಣಿಯಲ್ಲಿ ೧೭ ಜನ ಸಾಧಕರನ್ನು ಕುರಿತು ಅಷ್ಟೇ ಸಂಖ್ಯೆಯ ಲೇಖಕಿಯರು ಕೃತಿ ರಚಿಸಿದ್ದಾರೆ. ಅದರ ಜೊತೆಗೆ ಜಿಲ್ಲೆಯಲ್ಲಿ "ಕನ್ನಡ ಕಟ್ಟಿದವರು' ಕುರಿತ ಸರಣಿಯಲ್ಲಿ ೧೭ ಜನ ಸಾಧಕರ ಬಗೆಗೆ ಅಷ್ಟೇ ಸಂಖ್ಯೆಯ ಬರಹಗಾರರು ಕೃತಿಗಳನ್ನು ರಚಿಸಿದ್ದಾರೆ. ಇದೆಲ್ಲ ಆಗಿರುವುದು ಜಿಲ್ಲೆಯ ೧೭ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಂಗವಾಗಿ ಎಂಬುದು ಇಲ್ಲಿ ಉಲ್ಲೇಖನಾರ್ಹ.

ಇದು ಒಂದು ಅಪರೂಪದ ದಾಖಲೆಯ ಕಾರ್ಯ; ನಮ್ಮ ಸಮಾಜದ ಏಳಿಗೆಗೆ ದುಡಿದ ಮಹನೀಯರನ್ನು, ಮಹಿಳೆಯರನ್ನು ನೆನಪಿಸಿಕೊಳ್ಳುವ ಕಾರ್ಯ. ಆದರೆ, ಇದು ಕೇವಲ ಒಂದು ದಾಖಲೀಕರಣದ ಕೆಲಸ ಮಾತ್ರ ಅನಿಸದೇ ಆಸಕ್ತರು ಈ ಕೃತಿಗಳನ್ನು ಓದಿದರೆ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹಾಗೂ ಪದಾಧಿಕಾರಿಗಳ ಕಾರ್ಯ ಸಾರ್ಥಕ ಎನಿಸುತ್ತದೆ. ಇದಕ್ಕಾಗಿ ದುಡಿದ ಎಲ್ಲರಿಗೂ ನನ್ನ ಅಭಿನಂದನೆಗಳು.

ನಾಡೋಜ ಡಾ. ಮನು ಬಳಿಗಾರ್

ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಅಕ್ಷರ ಪ್ರೀತಿಯ ನುಡಿ
(ಪ್ರಕಾಶಕರ ಮಾತು)

ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆ ಹಾಗೂ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ.

ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ.

ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಲಾಗಿದ್ದು ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು.

ನಮ್ಮ ಮಧ್ಯದ ಅಪರೂಪದ ಸಂಶೋಧಕರು, ಸಾಹಿತಿಗಳಾದ **ಡಾ. ರಘುಶಂಖ ಭಾತಂಬ್ರಾ** ಅವರು ಬರೆದ **ಶಿಕ್ಷಣ ಸಿರಿ ಡಾ. ಪೂರ್ಣಿಮಾ ಜಿ. ಜೀವನ ಸಾಧನೆ** ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. **ಡಾ. ಪೂರ್ಣಿಮಾ ಜಿ.ಯವರು ಬೀದರನಲ್ಲಿ ಬಹುದೊಡ್ಡ ಶೈಕ್ಷಣಿಕ ಕ್ರಾಂತಿಗೈದವರು. ಸಮಸಮಾಜ ರೂಪಿಸಬೇಕೆಂಬ ದೇಶಿಚಿಂತನೆಯ ಸಾಂಸ್ಕೃತಿಕ ರಾಯಭಾರಿಗಳಾಗಿದ್ದಾರೆ. ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಮೂಲಕ** ಅನೇಕರ ಬದುಕಿಗೆ ಬೆಳಕಾಗಿದ್ದಾರೆ. ಜೊತೆಗೆ ಕಲೆ ಸಾಹಿತ್ಯಕ್ಕೆ ಉದಾರ ಪ್ರೋತ್ಸಾಹ ನೀಡುತ್ತ ಬಂದಿದ್ದಾರೆ. ಅವರ ಜೀವನ ಸಾಧನೆ ಕುರಿತು ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ.

ಪ್ರಸ್ತುತ ಪುಸ್ತಕಕ್ಕೆ ಮೌಲಿಕ ಮುನ್ನುಡಿ ಬರೆದು ಕೃತಿಯ ಮೌಲ್ಯ ಹೆಚ್ಚಿಸಿದ ನಾಡೋಜ ಡಾ. ಮನು ಬಳಿಗಾರ ಅವರನ್ನು ತುಂಬು ಹೃದಯದಿಂದ ನೆನೆಯುತ್ತೇವೆ. ಈ ಕೃತಿಯನ್ನು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಲು ಅನುಮತಿ ನೀಡಿರುವ ಲೇಖಕರಿಗೂ ಮತ್ತು **ಡಾ. ಪೂರ್ಣಿಮಾ ಜಿ.** ಅವರಿಗೂ ವಿಶೇಷವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೂ ವಂದನೆಗಳು.

ಸುರೇಶ ಚನಶೆಟ್ಟಿ
ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

ಸಾಂಸ್ಕೃತಿಕ ಚಿಂತಕರು

ಹಿಂದಣ ಹೆಜ್ಜೆಯನರಿತಲ್ಲದೆನಿಂದ ಹೆಜ್ಜೆಯನರಿಯಬಾರದೆಂಬ ಅಲ್ಲಮ ಪ್ರಭುದೇವರ ಮಾತು ಇತಿಹಾಸದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ. ಇತಿಹಾಸವೆಂದರೆ ಕೇವಲ ರಾಜ ಮಹಾರಾಜರ ವೈಭವದ ಬದುಕು, ಕೋಟೆ ಕೊತಲಗಳೇ ಅಲ್ಲ, ರಾಜ ಪರಿವಾರದ ಪರಿಸರ, ಅರಸರ ಸುತ್ತಲಿನ ಜನ ಸಾಮಾನ್ಯರ ಬದುಕಿನ ಏಳುಬೀಳುಗಳು, ಸಮಕಾಲೀನ, ಕಲೆ, ಸಾಹಿತ್ಯ, ಸಂಸ್ಕೃತಿ ಅವುಗಳ ಬೆಳವಣಿಗೆಗೆ ಪೂರಕವಾದ ಅಂಶಗಳೆಲ್ಲ ಸೇರಿ ಇತಿಹಾಸವಾಗುತದೆ. ಚಾರಿತ್ರಿಕವಾದ ಒಂದು ಕೋಟೆಗೆ ಎಷ್ಟು ಮಹತ್ವವೋ ಒಂದೂರಿನ ಹಳೆ ವಾಡೆ(ಘೂಡೆ)ಗಳಿಗೂ ಅಷ್ಟೇ ಮಹತ್ವವಿರುತ್ತದೆ. ಒಬ್ಬ ರಾಜ ರಾಣಿಗೆ ಇರುವಷ್ಟೆ ಮಹತ್ವ ಒಂದೂರಿನ ಜನಪರ ಕಾಳಜಿಯ ವ್ಯಕ್ತಿಗಳಿಗೂ ಇರುತ್ತದೆ. ಅಂಥ ಸಾಂಸ್ಕೃತಿಕ ವ್ಯಕ್ತಿಗಳ ಕಾರ್ಯ ಸಾಧನೆ ಕಾಲಗತಿಯಲ್ಲಿ ಮರೆಯಾಗಬಾರದೆಂಬ ಕಾರಣವಾಗಿ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿ ಸಮಾಜಕ್ಕೆ ಬೆಳಕಾದ ಸಾಧಕರ ಜೀವನ ಸಾಧನೆ ದಾಖಲಿಸಬೇಕಾಗಿರುವುದು ಪ್ರಜ್ಞಾವಂತ ಸಮಾಜದ ಹೊಣೆಗಾರಿಕೆ ಎಂದರಿತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತು ಈ **ಸಾಂಸ್ಕೃತಿಕ ಚಿಂತಕರು ಮಾಲಿಕೆ** ಆರಂಭಿಸಿದೆ. ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು. ಹಿತಲೆ ಗಿಡ ಮದ್ದಲ್ಲ, ತಮ್ಮ ತಮ್ಮ ನೆಲದಲ್ಲಿ ಸಾಧಕರಿಗೆ ಮನ್ನಣೆ ದೊರೆಯಲಾರದು ಎಂಬ ತೆಳು ಗ್ರಹಿಕೆಯ ಮಾತಿವೆ. ಅದನ್ನು ಹುಸಿಗೊಳಿಸಲು ಸಾಧಕರ ಜೀವನ ಚರಿತ್ರೆ ಈ ಯೋಜನೆ ರೂಪಿಸಲಾಗಿದೆ. ಸಾಮಾನ್ಯವಾಗಿ ಜೀವನ ಚರಿತ್ರೆಗಳು ವಿವರಗಳ ಕಟ್ಟಾಗಿರುತ್ತವೆ. ಆದರೆ ಈ ಮಾಲಿಕೆಯ ಕೃತಿಗಳು ಹಾಗಲ್ಲ. ನಮ್ಮೆಲ್ಲರ ಅಂತಃಶಕ್ತಿ, ಪ್ರೇರಣೆಯಾಗಿದ್ದು, ಸತ್ಯ, ದಕ್ಷತೆ, ಪ್ರಾಮಾಣಿಕತೆ, ಕಾಯಕ ನಿಷ್ಠೆ, ದಾಸೋಹ ಜೀವನ, ಸಮಯ ಪ್ರಜ್ಞೆ ಇವುಗಳಿಗೆ ವ್ಯಾಖ್ಯಾನ ಬರೆದಂತೆ ಬದುಕಿದವರ ಚರಿತ್ರೆಗಳನ್ನು ಆಯ್ದುಕೊಳ್ಳಲಾಗಿದೆ. ಇದೊಂದು ಅಪರೂಪದ ಮಾಲಿಕೆ. ಈ ಪುಸ್ತಕಗಳಲ್ಲಿ ಏಕಕಾಲಕ್ಕೆ ಹಲವು ವ್ಯಕ್ತಿಗಳ ಸಂಬಂಧಗಳನ್ನು ಜೋಡಿಸುವ, ಸಮಕಾಲೀನ ಸಾಂಸ್ಕೃತಿಕ ಚಿಂತನೆಗಳನ್ನು ಸಂಕ್ಷಿಪ್ತವಾಗಿ ದಾಖಲಿಸುವ ಮೂಲಕ ಪರಿಪೂರ್ಣ ರೂಪದ ಜೀವನ ಚರಿತ್ರೆ ಕಟ್ಟಿಕೊಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಸಾಧಕರ ಕುರಿತು ಅಧ್ಯಯನ ಮಾಡುವವರಿಗೆ ಈ ಕೃತಿ ಮೂಲ ಆಕರವಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಡಾ. ಬಸವರಾಜ ಬಲ್ಲೂರ

ಲೇಖಕರ ನುಡಿ

ಈ ಹಿಂದೆ ಬೀದರ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾಗಿದ್ದ ಡಾ. ರಾಜೇಂದ್ರ ಯರನಾಳೆಯವರ ಜೊತೆ ನಾನು ಕಾರ್ಯಕ್ರಮವೊಂದರ ಆಯೋಜನೆ ಸಂಬಂಧವಾಗಿ ೨೦೦೩ರಲ್ಲಿ ನ್ಯಾಶನಲ್ ಕಾಲೇಜಿಗೆ ಭೇಟಿ ನೀಡಬೇಕಾದ ಸಂದರ್ಭ ಒದಗಿಬಂದಿತು. ಆಗ ಪೂರ್ಣಿಮಾಜೀಯವರು ಪ್ರಾಂಶುಪಾಲರಾಗಿದ್ದರು. ಆ ಭೇಟಿಯು ಅವರನ್ನು ಅರ್ಥ ಮಾಡಿಕೊಳ್ಳಲು ಒದಗಿಬಂದ ಮೊದಲು ಮೆಟ್ಟಿಲು. ಅಂದಿನಿಂದ ಇದುವರೆಗೆ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶ ಲಭಿಸಿದೆ. ಇದರ ಮುಖಾಂತರ ಶಿಕ್ಷಣತಜ್ಞೆ, ಸಂಸ್ಕೃತಿ ಚಿಂತಕರಾದ ಮೇಡಮ್‌ರ ಬಗೆಗೆ ನನ್ನಲ್ಲಿ ಗೌರವಾದರಭಾವ ಬೆಳೆಯಿತು. ಭಾವನಾತ್ಮಕ ಸಂಪರ್ಕ ಏರ್ಪಟ್ಟಿತು. ಈ ತೆರನಾದ ಹಲವಾರು ಅಂಶಗಳು ಪ್ರಸ್ತುತ ಕೃತಿಗೆ ಅಡಿಪಾಯವಾದವು.

ಅವರು ನಿರಂತರವಾಗಿ ಕಾಪಾಡಿಕೊಂಡು ಬರುತ್ತಿರುವ ಶಾಲಾ ಕಾಲೇಜಿನ ಸುವ್ಯವಸ್ಥೆ, ಶೈಕ್ಷಣಿಕ ಗುಣಮಟ್ಟದ ಸುಧಾರಣೆ, ವೃತ್ತಿ ಬಾಂಧವರು ಹಾಗೂ ವಿದ್ಯಾರ್ಥಿಗಳ ಜೊತೆ ಅವರು ಹೊಂದಿರುವ ಆತ್ಮೀಯತೆ, ತಮ್ಮ ಹುದ್ದೆಯ ಗಾಂಭೀರ್ಯ, ಸಮಾಜದೊಂದಿಗಿನ ಸ್ನೇಹಶೀಲ ಸಹೋದರಭಾವ, ವಿಷಯ ಪರಿಣಿತಿ, ಸಭಾ ನಿರ್ವಹಣೆ, ವ್ಯವಹಾರ ಕುಶಲತೆ ಇತ್ಯಾದಿ ಗುಣವಿಶೇಷತೆಗಳು ಡಾ. ಪೂರ್ಣಿಮಾರವರಲ್ಲಿ ಕಂಡುಬರುತ್ತವೆ. ಇನ್ನೂ ಎಷ್ಟೋ ಅಂಶಗಳನ್ನು ಗುರುತಿಸುವುದು ಕಷ್ಟಸಾಧ್ಯವಾದರೂ ನನಗೆ ನಿಲುಕಿದಷ್ಟು ಈ ದಿಶೆಯಲ್ಲಿ ಪ್ರಯತ್ನಿಸಿದ್ದೇನೆ.

ಇನ್ನು ಧರ್ಮಪತ್ನಿ ಶ್ರೀಮತಿ ಸಂಗೀತಾ ಅವರ ಸಂಸ್ಥೆಯಲ್ಲಿ ೨೦೦೯ರಿಂದ ಕೆಲಸ ನಿರ್ವಹಿಸುತ್ತಿದ್ದಾರೆ. ಅವರಿಂದಾಗಿ ಈ ಪುಸ್ತಕಕ್ಕೆ ಬಹಳಷ್ಟು ಬಲಬಂದಿದೆ. ಪೂರಕ ಮಾಹಿತಿ ಲಭಿಸಿದೆ. ವಿದ್ಯಾರ್ಥಿ, ಅಧ್ಯಾಪಕ, ಬೋಧಕೇತರ ಸಿಬ್ಬಂದಿಯೊಂದಿಗೆ ಮೇಡಮ್ ಹೊಂದಿರುವ ಸೇವಾಭಾವ, ಮಾರ್ಗದರ್ಶನ, ಸಾರ್ವಕಾಲಿಕ ಜೀವನ ಮೌಲ್ಯಗಳ ಕಲಿಸುವಿಕೆ, ಆತ್ಮವಿಶ್ವಾಸ ವೃದ್ಧಿಸುವ ಸಕಾಲಿಕ ಪ್ರೋತ್ಸಾಹ, ಕರ್ತವ್ಯನಿಷ್ಠೆಯನ್ನು ನೆನಪಿಸಿಕೊಂಡು ಗುಣಗಾನ ಮಾಡುತ್ತಾರೆ. ಅವರಲ್ಲಿ ಕೆಲಸ ಮಾಡುವುದು ಅಭಿಮಾನದ ಸಂಗತಿ ಎಂದೆನ್ನುತ್ತ ವಾರಕ್ಕೆ ಒಂದೆರಡಾವೃತ್ತಿ ಪತ್ನಿ ಸೇರಿದಂತೆ ಮಕ್ಕಳಾದ ಗಣೇಶ ಮತ್ತು ಯೋಗೇಶ ನೆನಪಿಸಿಕೊಂಡು ಮೇಡಮ್ ಬಗ್ಗೆ ಹೆಮ್ಮೆ ವ್ಯಕ್ತಪಡಿಸುತ್ತಾರೆ.

ಎಳೆಯ ಮಕ್ಕಳೊಂದಿಗೆ ಎಳೆಯರಾಗಿ ಸ್ಪಂದಿಸುತ್ತಾರೆ. ಅಧ್ಯಾಪಕರಿಗೆ ನೀಡುವ ಸೃಜನಶೀಲ ಕೌಶಲಗಳಂತೂ ಯಾವ ಕಾಲಕ್ಕೂ ಪ್ರಸ್ತುತವೆನಿಸಿಕೊಳ್ಳುತ್ತವೆ. ವೈಯಕ್ತಿಕ ಹಾಗೂ ಬೋಧನಾ ವಿಷಯ ಸಂಬಂಧಿ ಸಮಸ್ಯೆಗಳನ್ನು ಅವರಷ್ಟು ಸರಳವಾಗಿ ಬಗೆಹರಿಸುವ ಜಾಣ್ಮೆ ಕಂಡುಬರುವುದು ಬಹಳ ಅಪರೂಪವೆನ್ನುತ್ತಾರೆ. ಅವರ ಪ್ರತಿಯೊಂದು ತರಗತಿಯ ಪಾಠವು ವಿನೂತನವಾಗಿರುತ್ತದೆಂದು ವಿದ್ಯಾರ್ಥಿಗಳು ಸಹ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಗೊತ್ತಿರದ ವಿಷಯವನ್ನು ಗೊತ್ತುಮಾಡಿ, ಮನವರಿಕೆ ಮಾಡಿಕೊಡುವ ವ್ಯವಧಾನ ಅವರಲ್ಲಿ ಅಂತರ್ಗತವಾಗಿದೆ. ಇಂತಹ ಗುಣವಿಶೇಷತೆ ಕೆಲವರಲ್ಲಿ ಮಾತ್ರ ಕಾಣಲು ಸಾಧ್ಯ.

ಹೀಗೆ ಒಂದಲ್ಲ ನೂರಾರು ಪ್ರಕ್ರಿಯೆಗಳ ಬಗ್ಗೆ ಆಲೋಚಿಸುವ, ವಿಮರ್ಶಿಸುವ, ಮುರಿದುಕಟ್ಟುವ ಸಂದರ್ಭಕ್ಕೆ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ ಚನಶೆಟ್ಟಿ, ಕಾರ್ಯದರ್ಶಿ ಡಾ. ಬಸವರಾಜ ಬಲ್ಲೂರ ಕಾರಣರಾದದ್ದು ಯೋಗಾಯೋಗವೆನ್ನಬಹುದು. ಸಾಧಕರನ್ನು ಗುರುತಿಸುವುದು, ಅಜ್ಞಾತರನ್ನು ಸಮಾಜಕ್ಕೆ ಪರಿಚಯಿಸುವುದು, ವಿಶಿಷ್ಟ ವ್ಯಕ್ತಿತ್ವದವರನ್ನು ಗುರುತಿಸಿ ಪಠ್ಯವಾಗಿಸುವುದು ಒಂದಿಷ್ಟು ಪ್ರಯಾಸದ ಕೆಲಸವಾದರೂ ಅದನ್ನು ಸಮರ್ಥವಾಗಿ

ನಿಭಾಯಿಸುವುದು ಮಹತ್ವದ ಕಾರ್ಯವಾಗಿದೆ. ಇದನ್ನು ಸಾಧುವಾಗಿಸಲು ಪ್ರಯತ್ನಿಸುತ್ತಿರುವ ಕಸಾಪ ಅಧ್ಯಕ್ಷರಿಗೂ, ಎಲ್ಲ ಪದಾಧಿಕಾರಿಗಳಿಗೂ, ಕನ್ನಡ ಮನಸ್ಸುಗಳಿಗೂ ಈ ಸಂದರ್ಭದಲ್ಲಿ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ.

'ಶಿಕ್ಷಣ ಸಿರಿ : ಡಾ. ಪೂರ್ಣಿಮಾ ಜಿ' ಅವರ ಜೀವನ ಚರಿತ್ರೆಗೆ ಪೂರಕ ಮಾಹಿತಿ ಒದಗಿಸಿದ ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶ್ರೀ ಮುನೇಶ್ವರ ಲಾಖಾ, ಸಾಂದರ್ಭಿಕವಾಗಿ ಮಾರ್ಗದರ್ಶನ ನೀಡಿದ ಡಾ. ಪೂರ್ಣಿಮಾ, ಬಹಳಷ್ಟು ಚಿಂತನಾಂಶಗಳನ್ನು ಹರಿಯಬಿಟ್ಟ ಅವರ ಮಕ್ಕಳಾದ ಪೂಜಾ ಜಾರ್ಜ್, ಅಮೋಘ ಜಾರ್ಜ್ ಅವರಿಗೂ, ನನ್ನೆಲ್ಲ ಸ್ನೇಹಿತರಿಗೂ, ಬಂಧು ಬಳಗದವರಿಗೂ ನಾನು ಆಭಾರಿಯಾಗಿರುವೆ.

ಬದುಕನ್ನು ಕಟ್ಟಿಕೊಳ್ಳುವ, ಆತ್ಮವಿಶ್ವಾಸ ವೃದ್ಧಿಸುವ, ಕಷ್ಟ ಬಂದಾಗ ಎದೆಗಾರಿಕೆಯಿಂದ ನಿಭಾಯಿಸುವ ಕರ್ತವ್ಯಪ್ರಜ್ಞೆಗೆ ಪೂರಕವಾಗುವ, ರಚನಾತ್ಮಕ ಚಟುವಟಿಕೆಗೆ ಆಕರವಾಗುವ ದಿಶೆಯಲ್ಲಿ ಈ ಪುಸ್ತಕವು ಸಹಾಯಕವಾದರೆ ನನ್ನ ಶ್ರಮ ಸಾರ್ಥಕವಾದೀತು. ಕೃತಿ ರಚನೆಯಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಾಯ ಸಹಕಾರ ನೀಡಿದ, ಮಾಹಿತಿಯ ಮೂಲಗಳನ್ನು ಒದಗಿಸಿದ ಎಲ್ಲ ಮಹನೀಯರಿಗೂ ಅನಂತ ಧನ್ಯವಾದಗಳು.

– ಡಾ. ರಘುಶಂಖ ಭಾತಂಬ್ರಾ
ಪ್ರಧಾನ ಕಾರ್ಯದರ್ಶಿ
ಪ್ರಭುರಾವ ಕಂಬಳಿವಾಲೆ ಕನ್ನಡ ಸೇವಾ ಪ್ರತಿಷ್ಠಾನ, ಬೀದರ

ಪರಿವಿಡಿ

ಚೇತೋಹಾರಿ ವ್ಯಕ್ತಿತ್ವ

ಪೀಠಿಕೆ:

ವ್ಯಕ್ತಿಯೊಬ್ಬನ ಚರಿತ್ರೆಯ ಬರವಣಿಗೆ ಸರಳ ರೇಖೆಯದ್ದಲ್ಲ. ಅದು ಸಂಕಟದೊಳಗೆ ಸಂಭ್ರಮ, ತಳಮಳದೊಳಗೆ ಸುಖ, ಜಡದೊಳಗೆ ಚೈತನ್ಯವನ್ನು ಒಳಗೊಂಡಿರುವ ವಿಭಿನ್ನ ನೆಲೆಗಳ ಸಂಕೀರ್ಣ ಬಲೆ. ಅದನ್ನು ವಿವಿಧ ಹಂತಗಳಲ್ಲಿ ವ್ಯವಸ್ಥಿತವಾಗಿ ಹೆಣೆಯಬೇಕಾಗುತ್ತದೆ. ಅದಕ್ಕೆ ಒಂದಿಷ್ಟು ತಾಳ್ಮೆ, ಸಮಕಾಲೀನ ಪ್ರಜ್ಞೆ ಅವಶ್ಯಕ. ಅದರಲ್ಲೂ ಜೀವಂತ ವ್ಯಕ್ತಿ ಹಾಗೂ ಅವರ ಸುತ್ತಲಿನ ಪರಿಸರ, ಅವರ ಒಡನಾಡಿಗಳ ಸಂದರ್ಭಗಳನ್ನು, ಸಾಂದರ್ಭಿಕ ಬಿಕ್ಕಟ್ಟುಗಳನ್ನು ಕಟ್ಟಿಕೊಡುವಾಗ ಬಹಳಷ್ಟು ಎಚ್ಚರವಹಿಸಬೇಕಾಗುತ್ತದೆ. ಮಾತಿಗೆ ಸಿಗುವ ಎಷ್ಟೋ ಸಂಗತಿಗಳನ್ನು ತೇಲಿಸಿಕೊಂಡು ಇಲ್ಲವೆ ಜಾರಿಕೊಳ್ಳುತ್ತ ಮೆಲ್ಲಮೆಲ್ಲಗೆ ಸಾಗುವುದು ಅನಿವಾರ್ಯವಾಗುತ್ತದೆ. ಚರಿತ್ರೆಯನ್ನು ದಾಖಲಿಸುವಾಗ ಆಯಾ ವ್ಯಕ್ತಿಯ ಸಾಮಾಜಿಕ ಸ್ವಾಸ್ಥ್ಯ, ನೈತಿಕ ನೆಲೆಗಟ್ಟು, ಸಾಂಸ್ಕೃತಿಕ ವಾರಸುದಾರಿಕೆ, ಜೀವನ ಸಾಧನೆಗಳ ಫಲಶ್ರುತಿಗಳನ್ನು ಕಟ್ಟಿಕೊಡುವಾಗ ಇವೆಲ್ಲ ಗಮನಿಸುವುದು ಅನಿವಾರ್ಯ. ಈ ಹಿನ್ನೆಲೆಯಲ್ಲಿ ಪ್ರೊ. ಪೂರ್ಣಿಮಾ ಜಿ. ಅವರ ಆಸಕ್ತಿದಾಯಕವಾಗಿರುವ ಸೈದ್ಧಾಂತಿಕ ಜೀವನ ವಿಧಾನ, ಹೋರಾಟದ ಬದುಕು, ಸಾಧನೆಯ ಮೆಟ್ಟಿಲುಗಳನ್ನು ಒಂದೊಂದಾಗಿ ಕ್ರಮಿಸಿದ ಪರಿ ಮಹಿಳಾ ಸಮಾಜಕ್ಕೆ ಮಾದರಿಯಾಗಿದೆ. ಬಾಲ್ಯದಿಂದ ಇದುವರೆಗಿನ ಕಥಾನಕಗಳು ನೋವು–ನಲಿವುಗಳ ಮೇಳವಾಗಿರುವಂತೆ ಚೈತನ್ಯದಾಯಕ ಘಟನಾವಳಿಗಳ ತಳಪರಿಗೆಯಾಗಿದೆ.

ಜನನ:

ಬಿಜಾಪುರ ಜಿಲ್ಲೆಯ ಹೆಣ್ಣುಮಗುವೊಂದು ತಾಲೂಕಿನ ಕಲಮಡಿ ಗ್ರಾಮದ ಡಾ. ವೆಂಕಟೇಶ್ವರರಾವ ಕುಲಕರ್ಣಿ ಹಾಗೂ ಶ್ರೀಮತಿ ಪದ್ಮಾವತಿಯವರ ಮಗಳಾಗಿ ೧೯೭೧ರ ಮಾರ್ಚ್ ೧೩ರಂದು ಜನಿಸಿದರು. ಅಂದು ಶನಿವಾರವಾಗಿತ್ತು. ರಾತ್ರಿ ೮ ಗಂಟೆ ೩೦ ನಿಮಿಷಕ್ಕೆ ಜನಿಸಿದ ಬೆಳದಿಂಗಳಿನಂತಿರುವ ಮಗಳಿಗೆ ಪೂರ್ಣಿಮಾ ಎಂದು ನಾಮಕರಣ ಮಾಡಿದರು. ಇವರಿಗಿಂತ ಮೊದಲು ಜನಿಸಿದ ಗಿರೀಶ, ಉಮೇಶರವರು ಪೂರ್ಣಿಮಾಗೆ ಅಣ್ಣಂದಿರಾದರೆ ಆಮೇಲೆ ಜನಿಸಿದ ಹರೀಶ ನನಗೆ ಪ್ರೀತಿಯ ತಮ್ಮನಾಗಿದ್ದ ಎನ್ನುತ್ತಾರೆ. ವೆಂಕಟೇಶರಾವ ಕುಲಕರ್ಣಿಯವರ ಕುಟುಂಬದಲ್ಲಿ ಮೂವರು ಗಂಡುಮಕ್ಕಳ ನಡುವೆ ಮುದ್ದಾಗಿರುವ ಪೂರ್ಣಿಮಾ ನಿಜಕ್ಕೂ ಆ ಕುಟುಂಬದಲ್ಲಿ ಬೆಳಕಾಗಿದ್ದರು. ವೈದ್ಯಕೀಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಚಿಕ್ಕಪ್ಪಂದಿರಾದ ಡಾ. ಎಂ.ಆರ್. ಕುಲಕರ್ಣಿ ಮತ್ತು ಪಶುವೈದ್ಯರಾದ ಡಾ. ಎಚ್.ಆರ್. ಕುಲಕರ್ಣಿಯವರು ಪೂರ್ಣಿಮಾ ಅವರನ್ನು ಪ್ರೀತಿಯಿಂದ ಕಾಣುತ್ತಿದ್ದರು. ವಿದ್ಯಾವಂತ, ಸುಸಂಸ್ಕೃತ ಕುಟುಂಬದ ಗೌರವಾರ್ಹತೆಗೆ ಪಾತ್ರರಾಗಿದ್ದರು.

ಧರ್ಮಾಚಾರ:

ಪೂರ್ಣಿಮಾ ಅವರ ಅಜ್ಜ ಅಂದರೆ ತಂದೆಯ ತಂದೆ ಶ್ರೀ ರಾಮಚಂದ್ರರಾವ ಬಹಳ ಮೊದಲೆ ತೀರಿಕೊಂಡಿದ್ದರು. ಅಜ್ಜನ ವಾತ್ಸಲ್ಯದಿಂದ ಇವರು ವಂಚಿತರಾಗಿದ್ದರು. ಅಜ್ಜಿ ಶ್ರೀಮತಿ ಜಾನಕಿ ರಾಮಚಂದ್ರರಾವ ಹೆಸರಿಗೆ ತಕ್ಕಂತೆ ಧೈರ್ಯ, ಸತ್ಯದ ಮೂರ್ತಿಯಂತಿದ್ದರು. ಇಳಿವಯಸ್ಸಿನಲ್ಲೂ ಉತ್ಸಾಹದಿಂದಿದ್ದರು. ಮೊಮ್ಮಗಳಿಗೆ ತನ್ನೆಲ್ಲ ಪ್ರೀತಿಯನ್ನು ಧಾರೆ ಎರೆಯುತ್ತಿದ್ದರು. ರಾಮಾಯಣ, ಮಹಾಭಾರತ, ಪುರಾಣಗಳಲ್ಲಿನ ಸಣ್ಣಸಣ್ಣ ಕಥೆಗಳನ್ನು ಹೇಳಿ, ಕುತೂಹಲವನ್ನುಂಟು ಮಾಡುತ್ತಿದ್ದರು. ನಾಗಪಂಚಮಿ, ಮಹಾಶಿವರಾತ್ರಿ, ಏಕಾದಶಿಯಂತಹ ವಿಶೇಷ

ಹಬ್ಬ ಹುಣ್ಣಿಮೆಗಳಂದು ಮನೆಯಲ್ಲಿ ಧಾರ್ಮಿಕ ಗ್ರಂಥಗಳ ಪಠಣ ಕಡ್ಡಾಯವಾಗಿತ್ತು. ತಾಯಿ ಪದ್ಮಾವತಿ ದೈವಸ್ತೋತ್ರಗಳನ್ನು ಪಠಿಸುತ್ತಿದ್ದರು. ತಾಯಿಯ ಅನುಪಸ್ಥಿತಿಯಲ್ಲಿ ಆ ಕೆಲಸವನ್ನು ಪೂರ್ಣಿಮಾ ಮಾಡುತ್ತಿದ್ದರು. ಪ್ರೌಢಶಾಲೆಗೆ ಬಂದಾಗ ಅದರ ಜವಾಬ್ದಾರಿ ಮತ್ತಷ್ಟು ಹೆಚ್ಚಾಯಿತು.

ಅಜ್ಜಿಯ ತಿಳುವಳಿಕೆಯ ಮಾತು, ಧಾರ್ಮಿಕ ಗ್ರಂಥಗಳ ಪಠಣದಿಂದಾಗಿ ಇವರಿಗೆ ಧಾರ್ಮಿಕತೆಯ ಬಲ ಬಂದಿತು. ಬದುಕಿನಲ್ಲಿ ಸತ್ಯ, ನಿಷ್ಠೆ, ಪ್ರಾಮಾಣಿಕತೆ, ದೈವಭಕ್ತಿ, ಧರ್ಮಾಚಾರಗಳು ಮುಖ್ಯವೆಂಬುದು ಅರಿವಿಗೆ ಬಂದಿತು. ಮೂಢನಂಬಿಕೆ, ಡಂಭಾಚಾರಗಳು ತೋರಿಕೆಯ ಸಾಧನಗಳಾಗಿದ್ದು, ಅವುಗಳಿಂದ ಮನಶ್ಶಾಂತಿ ಸಿಗುವುದಿಲ್ಲ. ದೈವಶ್ರದ್ಧೆ ಬಲಗೊಳ್ಳುವುದಿಲ್ಲ. ದೇವರಿಗೆ ಸಲ್ಲಿಸುವ ಪೂಜೆ ಪುನಸ್ಕಾರಗಳು ತೋರಿಕೆಯಿಂದ ಹೊರತಾಗಿರಬೇಕು. ದೇವರಿಗೆ, ಸಮಾಜಕ್ಕೆ ಮಾಡಿದೆನೆಂಬುದು, ನೀಡಿದೆನೆಂಬುದು ಮನದಲ್ಲಿ ಹೊಳೆಯಬಾರದು. ಹಾಗೊಂದು ವೇಳೆ ಡಾಂಭಿಕತೆಯ ಭ್ರಮೆಗೊಳಗಾಗಿರುವ ವ್ಯಕ್ತಿ ಎಷ್ಟೇ ವಿಧವಿಧವಾಗಿ ಪೂಜೆ ಸಲ್ಲಿಸಿದರೂ ಅದು ವ್ಯರ್ಥ ಎಂಬುದು ಪೂರ್ಣಿಮಾ ಅವರ ಅಚಲ ನಂಬಿಕೆಯಾಗಿದೆ.

ಪ್ರತಿ ಗುರುವಾರ ಸರತಿಯಂತೆ ಒಬ್ಬೊಬ್ಬರ ಮನೆಯಲ್ಲಿ ಭಜನೆ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದರು. ಭಜನೆ ಮಾಡುವುದರಲ್ಲಿಯೂ ಪೂರ್ಣಿಮಾ ಮುಂದು. ಸುಗಮ ಹಾಡುಗಾರಿಕೆಯಿಂದ ಎಲ್ಲರ ಮೆಚ್ಚುಗೆ ಗಳಿಸಿದ್ದರು. ಬಿಜಾಪುರಿನ ಗುಜ್ಜರ ಗಲ್ಲಿಯ ರಾಘವೇಂದ್ರ ಮಠದಲ್ಲಿ ಭಜನೆ ಇದ್ದಾಗ ಮೊದಲ ಬಾರಿಗೆ ಕೈಗೆ ಮೈಕ್ ಸಿಕ್ಕಿತ್ತು. ಚೆನ್ನಾಗಿ ಹಾಡಬಹುದಾಗಿತ್ತು. ಆದರೆ ಸಭಾಕಂಪನದಿಂದಾಗಿ ಮೈಯಲ್ಲಿ ಬೆವರಿಳಿದು ನಡುಕ ಉಂಟಾಯಿತು. ಧ್ವನಿ ಕಟ್ಟುವಿಕೆಯಿಂದ ಹಾಡು ಹಾಡಲಾಗಲಿಲ್ಲವೆಂದು ಮೈಕಿನೊಡನೆ ಆದ ಮೊದಲ ಅನುಭವವನ್ನು ನೆನಪಿಸಿಕೊಳ್ಳುತ್ತಾರೆ.

ಕುಟುಂಬದ ವಿಶೇಷತೆ:

ಪೂರ್ಣಿಮಾ ಅವರದು ಬ್ರಾಹ್ಮಣ ಮನೆತನವಾಗಿದ್ದರೂ ಕರ್ಮಠತನದಿಂದ ಮುಕ್ತವಾಗಿತ್ತು. ಜಾತೀಯತೆಯ ಮಡಿವಂತಿಕೆಯಿಂದ ದೂರಾಗಿತ್ತು. ಯಾರೆ ಅತಿಥಿಗಳು ಮನೆಗೆ ಬರಲಿ, ಯಾವುದೇ ಜಾತಿಯವರಾಗಿರಲಿ ಅವರೆಲ್ಲರನ್ನು ಸಮಾನವಾಗಿ ಕಾಣಲಾಗುತ್ತಿತ್ತು. ಎಲ್ಲರಿಗೂ ಮನೆಯಲ್ಲಿ ಉಪಯೋಗಿಸುತ್ತಿದ್ದ ತಟ್ಟೆ, ಗ್ಲಾಸುಗಳಲ್ಲಿ ಊಟ, ತಿಂಡಿ, ನೀರು, ಚಹಾ ಸರಬರಾಜು ಮಾಡಲಾಗುತ್ತಿತ್ತು. ಯಾರೂ ಮೇಲಲ್ಲ. ಯಾರೂ ಕೀಳಲ್ಲವೆಂಬುದು ಅವರ ಕುಟುಂಬದ ನಂಬಿಕೆಯಾಗಿತ್ತು. ಉಪಾಹಾರ, ಊಟದ ತರುವಾಯ ತಾಯಿ ಇಲ್ಲವೆ ಮಗಳು ಕಸ ಮುಸುರೆ ಬಳಿದು, ಬಾಂಡೆಗಳನ್ನು ಸ್ವಚ್ಛಗೊಳಿಸುತ್ತಿದ್ದರು.

ಪೂರ್ಣಿಮಾ ವಾಸವಾಗಿದ್ದ ನಿಜಲಿಂಗಪ್ಪ ಕಾಲೋನಿ ಸ್ಥಿತಿವಂತರ ಬಡಾವಣೆಯಾಗಿತ್ತು. ಬಡಾವಣೆಯವರ ಮನೆ ಟಾಯ್ಲೆಟ್ ಸ್ವಚ್ಛಗೊಳಿಸುವ ಸಲುವಾಗಿಯೇ ಕೆಲವು ಭಂಗಿಗಳು ಬರುತ್ತಿದ್ದರು. ಆದರೆ ವೆಂಕಟೇಶ್ವರರಾವ ಕುಲಕರ್ಣಿಯವರ ಕುಟುಂಬ ಭಂಗಿಗಳ ಸಹಾಯ ಪಡೆಯುತ್ತಿರಲಿಲ್ಲ. ತಾವು ಉಪಯೋಗಿಸುತ್ತಿದ್ದ ಶೌಚಾಲಯವನ್ನು ಖುದ್ದಾಗಿ ತಾವೇ ಶುಚಿಗೊಳಿಸಿ ಕೊಳ್ಳುತ್ತಿದ್ದರು. 'ನಾವು ಹೊಲಸು ಮಾಡಿದ್ದನ್ನು ನಾವೇ ತೊಳೆದು ಕೊಳ್ಳಬೇಕೆಂಬುದು' ಆ ಕುಟುಂಬದ ನಿಯಮವಾಗಿತ್ತು. ಹಾಗಾಗಿ ಶೌಚಾಲಯ ಸ್ವಚ್ಛಗೊಳಿಸುವ ವಿಷಯದಲ್ಲಿ ಯಾವೊಂದು ಮಡಿವಂತಿಕೆ ಇರಲ್ಲಿಲ್ಲ. ಗಂಡು ಹೆಣ್ಣು ಎಂಬ ಭೇದವಿರಲಿಲ್ಲ. ಸರತಿಯಂತೆ ಎಲ್ಲರೂ ತಮಗೆ ನೀಡಿದ್ದ ಜವಾಬ್ದಾರಿಯನ್ನು ನಿಭಾಯಿಸಿಕೊಳ್ಳುತ್ತಿದ್ದರು.

ತಂದೆಯ ವೃತ್ತಿ ವೈಶಿಷ್ಟ್ಯ:

ಡಾ. ವೆಂಕಟೇಶ್ವರರಾವ ಕುಲಕರ್ಣಿಯವರು ಪಶುವೈದ್ಯರಾಗಿದ್ದರು. ಅದರಲ್ಲೂ ದನಗಳು ಸಿಡಿಗಾಲು ಶಸ್ತ್ರಚಿಕಿತ್ಸೆಯಲ್ಲಿ ಪರಿಣಿತರಾಗಿದ್ದರು. ಡಾ.

ವೆಂಕಟೇಶ್ವರರಾವ ಕಲಿತದ್ದು ಬಿಜಾಪುರ ಜಿಲ್ಲೆಯಲ್ಲಾದರೂ ವೈದ್ಯಕೀಯ ಸೇವೆ ಸಲ್ಲಿಸಿದ್ದು ಬೀದರ ಜಿಲ್ಲೆಯಲ್ಲಿಯೇ ಹೆಚ್ಚು. ಸಂತಪುರ, ಬೀದರ, ಹುಮನಾಬಾದ ಮತ್ತು ಔರಾದ (ಬಿ.)ಯಲ್ಲಿ ೧೫ರಿಂದ ೧೭ ವರ್ಷಗಳವರೆಗೆ ಕರ್ತವ್ಯ ನಿರ್ವಹಿಸಿದ್ದಾರೆ. ಔರಾದ ಬಿ.ಯಲ್ಲಿ ಸೇವೆಯಲ್ಲಿದ್ದಾಗ ಕರ್ತವ್ಯದ ಬಗೆಗೆ ಹೆಚ್ಚಿನ ಒತ್ತಡದಲ್ಲಿ ಇರುತ್ತಿದ್ದರು. ಏಕೆಂದರೆ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮನೆ ಬೀದರನಲ್ಲಿದ್ದರೆ ಕರ್ತವ್ಯದ ನಿಮಿತ್ತ ದಿನಾಲೂ ಔರಾದಿಗೆ ಹೋಗಬೇಕಾಗುತ್ತಿತ್ತು. ಸಾರಿಗೆ ವ್ಯವಸ್ಥೆಯೂ ಅಷ್ಟಕ್ಕಷ್ಟೇ. ರಸ್ತೆಗಳೂ ಕೂಡ ಹೆಸರಿಗೆ ಎಂಬಂತಿದ್ದವು. ಔರಾದ ತಾಲೂಕಿನಲ್ಲಿ ಬಹಳಷ್ಟು ದನಕರುಗಳು ಸಿಡಿಗಾಲು ರೋಗಕ್ಕೆ ತುತ್ತಾಗುತ್ತಿದ್ದವು. ಸಿಡಿಗಾಲ ರೋಗಕ್ಕೆ ತುತ್ತಾದ ದನಗಳು ಕಾಲಿನ ವೈಕಲ್ಯದಿಂದ ನರಳುತ್ತಿದ್ದವು. ಊನತೆಗೊಳಗಾದ ದನದ ಯಾವುದಾದರೂ ಕಾಲೊಂದರಲ್ಲಿ ಶಕ್ತಿ ಇರುತ್ತಿರಲಿಲ್ಲ. ಶಸ್ತ್ರಚಿಕಿತ್ಸೆಯ ಮೂಲಕ ಸಿಡಿಗಾಲನ್ನು ಸರಿಪಡಿಸುತ್ತಿದ್ದರು.

ಇದನ್ನರಿತ ಔರಾದ ತಾಲೂಕಿನ ಪ್ರತಿಯೊಂದು ಹಳ್ಳಿಯವರು, ತಾಂಡಾ ಜನರು ಇವರಲ್ಲಿಗೆ ಬಂದು ತಮ್ಮ ದನಗಳ ಸಮಸ್ಯೆಗಳನ್ನು ನಿವೇದಿಸಿಕೊಳ್ಳುತ್ತಿದ್ದರು. ಡಾ. ವೆಂಕಟೇಶ್ವರರಾವ್‌ರವರು ಔಷಧ, ಹಣಕಾಸಿನ ಚೌಕಾಸಿ ಮಾಡದೆ, ಅವರ ಮನವಿಗಳಿಗೆ ಸ್ಪಂದಿಸುತ್ತಿದ್ದರು. ರೈತರು, ಕೃಷಿ ಕೂಲಿಕಾರ್ಮಿಕರು ಸ್ವಂತ ಹಣ ಖರ್ಚು ಮಾಡಿ, ವಾಹನಗಳಲ್ಲಿ ಆಸ್ಪತ್ರೆಗೆ ತಂದ ದನಗಳಿಗೆ ಸ್ಥಳದಲ್ಲಿಯೇ ಸೂಕ್ತ ಚಿಕಿತ್ಸೆ ನೀಡುತ್ತಿದ್ದರು. ವಾಹನ ಸೌಲಭ್ಯವಿಲ್ಲದವರು ತಮ್ಮ ಸಮಸ್ಯೆ ನಿವೇದಿಸಿಕೊಂಡಾಗ ತಮ್ಮ ಸ್ವಂತ ದ್ವಿಚಕ್ರ ವಾಹನ ಬಳಸಿಕೊಂಡು ಮೂಕಪ್ರಾಣಿಗಳ ನೋವುಗಳನ್ನು ಶಮನಗೊಳಿಸುತ್ತಿದ್ದರು. ಎಷ್ಟೋ ಸಲ ತಾಂಡಾದ ಯಾಡಿಗಳನ್ನು ತಮ್ಮ ದ್ವಿಚಕ್ರ ವಾಹನದ ಹಿಂಬದಿಯಲ್ಲಿ ಕುಳ್ಳಿರಿಸಿಕೊಂಡು ದನಗಳು ಇದ್ದಲ್ಲಿಗೆ ಹೋಗಿ ಉಚಿತ ಚಿಕಿತ್ಸೆ ನೀಡುತ್ತಿದ್ದರು.

ನಮ್ಮ ಶಾಲೆಗೆ ರಜೆ ಇದ್ದಾಗ ಸಹಕುಟುಂಬವಾಗಿ ಔರಾದಿಗೆ ಹೋಗುತ್ತಿದ್ದೆವು. ಆಸ್ಪತ್ರೆಯ ಪಕ್ಕದಲ್ಲೊಂದು ಪಶು ವೈದ್ಯಕೀಯ ಇಲಾಖೆಗೆ ಸೇರಿದ ಗೋದಾಮು

ಇತ್ತು. ಅದರಲ್ಲಿಯೆ ನಮ್ಮೆಲ್ಲರ ವಸತಿ, ಊಟೋಪಚಾರಕ್ಕೆ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ನಮ್ಮ ತಂದೆ ಸರ್ಕಾರಿ ವೈದ್ಯರಾಗಿದ್ದರೂ ಸರಳ ಜೀವಿಗಳಾಗಿದ್ದರು. ಒಂದು ಸ್ಟೇಟಸ್ ಮೆಂಟೈನ್ ಮಾಡಬೇಕೆಂಬ ಮನೋಭಾವದವರಾಗಿರಲಿಲ್ಲ. ಅದನ್ನು ನಾನಿಂದಿಗೂ ಪಾಲಿಸುತ್ತಿದ್ದೇನೆ. ನನ್ನ ಮಗ ಅಮೋಘ ಒಂದೊಂದು ರೂಪಾಯಿ ಖರ್ಚು ಮಾಡಲು ಕೂಡ ಹಿಂದೆಮುಂದೆ ವಿಚಾರ ಮಾಡುತ್ತಾನೆ. ಮಗಳು ಪೂಜಾ ಸಹ ಅದೇ ಜಾಯಮಾನದವಳಾಗಿದ್ದಾಳೆಂದು ಹೇಳುತ್ತಾರೆ.

ಶಿಕ್ಷಣ:

ಶಿಕ್ಷಣ ಕಲಿಕೆಯ ವಿಷಯವಾಗಿರುವಂತೆ ವ್ಯಕ್ತಿತ್ವ ವಿಕಸನದ ಮೆಟ್ಟಿಲು ಹೌದು. ವ್ಯಕ್ತಿಯ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗಿದೆ. ಪುರಾಣ ಕಾಲದಲ್ಲಿದ್ದ ಗುರುಕುಲ ಪದ್ಧತಿಯಿಂದ ಹಿಡಿದು ಸ್ವಯಂಕಲಿಕೆಗೆ ಆಸ್ಪದವಿರುವ, ಬುದ್ಧಿ, ಕೌಶಲಗಳಿಗೆ ಮನ್ನಣೆ ನೀಡುತ್ತಿರುವ ಪ್ರಸ್ತುತ ಸಂದರ್ಭದಲ್ಲಿನ ಶೈಕ್ಷಣಿಕ ಬೆಳವಣಿಗೆಗಳು ಹಲವಾರು ಮಜಲುಗಳನ್ನು ದಾಟುತ್ತ, ವಿವರಗಳನ್ನು ದಾಖಲಿಸುತ್ತಲಿವೆ. ಸಾವಿರಾರು ಮಹತ್ತರ ಘಟನೆಗಳಿಗೆ, ದಾಖಲಾಂಶಗಳಿಗೆ ಶಿಕ್ಷಣ ಕ್ಷೇತ್ರದಲ್ಲಿ ಸ್ಪಷ್ಟ ನಿದರ್ಶನಗಳಿವೆ.

ಗುರುವಿನ ಮರ್ಜಿಗೆ ಒಳಪಟ್ಟಿದ್ದ ಅಂದಿನ ಶಿಕ್ಷಣ ವ್ಯವಸ್ಥೆಯು ಗುರುವಿನ ಮನಸ್ಸು, ಅವನ ಬುದ್ಧಿ ಮಟ್ಟ, ಇಷ್ಟಾನಿಷ್ಟಗಳಿಗೆ ಸೀಮಿತವಾಗಿತ್ತು. ಆದರೆ ಸ್ವಾತಂತ್ರ್ಯೋತ್ತರ ಕಾಲದಿಂದ ಮಗುಕೇಂದ್ರಿತ ಶಿಕ್ಷಣ ವ್ಯವಸ್ಥೆಗೆ ಆದ್ಯತೆ ನೀಡಲಾಗುತ್ತಿದೆ. ಗುರು ಕೇವಲ ಮಾರ್ಗದರ್ಶಕ. ಮಗುವಿನಲ್ಲಿ ಹುದುಗಿದ್ದ ಪ್ರತಿಭೆಗೆ ಸೂಕ್ತ ಅವಕಾಶಗಳನ್ನು ಒದಗಿಸುತ್ತ, ಕಲಿಕಾಂಶಗಳನ್ನು ಒದಗಿಸಿಕೊಟ್ಟು ವಿದ್ಯಾರ್ಥಿಯ ತಪ್ಪು ಒಪ್ಪುಗಳಿಗೆ ಸಾರಣಿಗೆ ಹಿಡಿಯುವುದಷ್ಟೇ ಶಿಕ್ಷಕನ ಕರ್ತವ್ಯ. ಶಿಕ್ಷಕನ ಕರ್ತವ್ಯಾದೇಶದಂತೆ ವಿದ್ಯಾರ್ಥಿಗಳು ನಡೆದುಕೊಂಡರೆ ಉಜ್ವಲ ಭವಿಷ್ಯ ಕಟ್ಟಿಟ್ಟ ಬುತ್ತಿ ಎಂಬುವುದಕ್ಕೆ ಪೂರ್ಣಿಮಾ ಉತ್ತಮ ಉದಾಹರಣೆ.

ಪ್ರಾಥಮಿಕ: ಪೂರ್ಣಿಮಾಳನ್ನು ಓದಿಸಲು ಮೊದಲಿಗೆ ಡಾ. ವೆಂಕಟೇಶ್ವರರಾವ ಕುಲಕರ್ಣಿಯವರು ಬೀದರನಲ್ಲಿರುವ ನಾರ್ಮಾ ಫ್ರೆಡರಿಚ್ ಸ್ಕೂಲ್‌ನಲ್ಲಿ ಸೇರ್ಪಡೆಗೊಳಿಸಿದರು. ಎಲ್.ಕೆ.ಜಿ.ಯಲ್ಲಿ ದಾಖಲಾದ ಪೂರ್ಣಿಮಾ ಒಂದು ವರ್ಷದ ತರುವಾಯ ಯು.ಕೆ.ಜಿ.ಗೆ ಕುಳಿತುಕೊಳ್ಳಬೇಕಾಗಿತ್ತು. ಆದರೆ ಇವರ ಬುದ್ಧಿಮತ್ತೆಯನ್ನು ಕಂಡ ಪಾಲಕರು ಮತ್ತೆ ಅದೇ ವಿಷಯದ ಕಲಿಕೆಗಾಗಿ ಯು.ಕೆ.ಜಿ.ಯಲ್ಲಿ ಮುಂದುವರೆಸಲು ಮನಸ್ಸು ಮಾಡಲಿಲ್ಲ.

ಬೀದರ ನಗರದ ಚೌಬಾರ ರಸ್ತೆಯಲ್ಲಿರುವ ಚಿತ್ರಲೇಖಾ ಚಿತ್ರಮಂದಿರದ ಸಮೀಪದಲ್ಲಿದ್ದ ರಾಘವೇಂದ್ರ ಶಿಶುವಿಹಾರದಲ್ಲಿ ಒಂದನೇ ತರಗತಿಗೆ ೧೯೭೫-೭೬ನೆಯ ಶೈಕ್ಷಣಿಕ ವರ್ಷದಲ್ಲಿ ದಾಖಲಿಸಿದರು. ಇದೀಗ ಆ ಶಾಲೆ ಪರಿಮಳಾ ಶಾಲೆಯಾಗಿ ನಾಮಾಂತರಗೊಂಡಿದೆ. ಪಾಟಿ, ಬಳಪ ಹಿಡಿದು ಪೂರ್ಣಿಮಾ ಬರವಣಿಗೆಗೆ ಅಣಿಯಾದರು. ಶಾಲೆಯ ಶಿಕ್ಷಕಿಯರು ದುಂಡುಬರಹಕ್ಕೆ ಆದ್ಯತೆ ನೀಡುತ್ತಿದ್ದರು. ದುಂಡುಬರಹವನ್ನು ಚೆನ್ನಾಗಿ ರೂಢಿಸಿಕೊಂಡ ಪೂರ್ಣಿಮಾ ಅಲ್ಲಿಯ ಶಿಕ್ಷಕಿಯರ ಮೆಚ್ಚುಗೆಗೆ ಪಾತ್ರರಾದರು. ಅದಕ್ಕಾಗಿ ಪ್ರತಿವರ್ಷ ಬಹುಮಾನ ಪಡೆದರು. ಶಾಲೆಗೆ ಹೋಗುತ್ತ ಬರುತ್ತ ಎಲ್ಲ ಅಂಗಡಿಗಳ ಬೋರ್ಡ್ ಓದುವುದೆಂದರೆ ಆ ಪುಟ್ಟ ಮಗುವಿಗೆ ಆಟವಾಗಿತ್ತು. ಹಾಗಾಗಿಯೇ ಇಂದಿಗೂ ಕೂಡ ಬಹಳ ಬೇಗ ಗ್ರಹಿಸಿಕೊಳ್ಳುತ್ತೇನೆ ಎನ್ನುತ್ತಾರೆ ಪೂರ್ಣಿಮಾ.

ತಂದೆಯ ವರ್ಗಾವಣೆಯಿಂದಾಗಿ ಬೀದರದಿಂದ ಬಿಜಾಪುರಕ್ಕೆ ವಸತಿ ಬದಲಾಯಿಸಬೇಕಾಯಿತು. ಪೂರ್ಣಿಮಾಳ ಮೂರನೆಯ ತರಗತಿಯ ಪ್ರವೇಶವನ್ನು ಬಿಜಾಪುರ ನಗರದ ಗೋಪಾಳಪುರ ಓಣಿಯ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಮಾಡಲಾಯಿತು. ನಾಲ್ಕನೆಯ ತರಗತಿಯವರೆಗೆ ಅಭ್ಯಾಸ ಮಾಡಿ ಅಲ್ಲಿಂದ ಮತ್ತೆ ಐದನೆಯ ತರಗತಿಗೆ ದರಬಾರ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ತರಗತಿಗಳು ಸಂಯುಕ್ತವಾಗಿರುವ ಶಾಲೆಯಲ್ಲಿ ಸೇರ್ಪಡೆಗೊಂಡರು. ಕಲಿಕೆಗೆ ಮುಂದಾಗಿರುವಂತೆ ತುಂಟುತನಕ್ಕೂ ಹೆಸರಾಗಿದ್ದರು. ಸಂಗೀತ ಶಿಕ್ಷಕಿ ಥೀಟೆ

ಮೆಡಮ್ ಅವರ ಪ್ರಭಾವಕ್ಕೊಳಗಾಗಿ ಹಾಡುಗಾರಿಕೆಯನ್ನು ರೂಢಿಸಿಕೊಂಡರು. ಆಗಾಗ ಶಾಲೆಯಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನೃತ್ಯ ರೂಪಕಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಎಂಜೆಲ್ ವೇಷಭೂಷಣ ಧರಿಸಿ ಹಾಡು ಹಾಡುತ್ತ ನೃತ್ಯ ಮಾಡಿ ಶಾಲಾ ಸಿಬ್ಬಂದಿಗಳ, ಪಾಲಕರ ಮೆಚ್ಚುಗೆಗೆ ಪಾತ್ರರಾದರು.

ಪಶುವೈದ್ಯ ವೆಂಕಟೇಶ್ವರರಾವ ಕುಲಕರ್ಣಿಯವರು ...ಪುರದಿಂದ ರಾಯಚೂರಕ್ಕೆ ವರ್ಗಾವಣೆಯಾದ ಮೇಲೆ ಜಿಲ್ಲಾ ಕ್ರೀಡಾಂಗಣ ಸಮೀಪವಿರುವ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ೬ನೆಯ ತರಗತಿಯಲ್ಲಿ ಅಭ್ಯಾಸ ಮುಂದುವರೆಸಿದರು. ೭ನೆಯ ತರಗತಿಯನ್ನು ಅಲ್ಲಿಯೇ ಪೂರ್ಣಗೊಳಿಸಿದರು.

ಚೂರ್ಗಾಲು-ಚಿಪ್ಪರ್ಗಾಲು:

ರಾಯಚೂರಿನ ನಿಜಲಿಂಗಪ್ಪ ಬಡಾವಣೆಯು ಬಹುತೇಕ ಶ್ರೀಮಂತರಿಂದ ಕೂಡಿತ್ತು. ಸರಕಾರಿ ನೌಕರದಾರರು, ಸ್ಥಿತಿವಂತರು ಅಲ್ಲಿನ ನಿವಾಸಿಗಳಾಗಿದ್ದರು. ಪಕ್ಕದಲ್ಲೊಂದು ಸ್ಲಮ್ ಏರಿಯಾ ಇತ್ತು. ಆರ್ಥಿಕ ಸ್ಥಿತಿವಂತರ ಮಕ್ಕಳಿಗೂ ಬಡ-ದಲಿತ-ಕೂಲಿಕಾರ್ಮಿಕರ ಮಕ್ಕಳಿಗೂ ಒಂದೇ ಶಾಲೆಯಲ್ಲಿ ವಿದ್ಯಾಭ್ಯಾಸಕ್ಕೆ ಅವಕಾಶವಿತ್ತು. ಅದು ಸರಕಾರಿ ಶಾಲೆ ಆಗಿರುವುದರಿಂದ ವಿದ್ಯಾರ್ಥಿಗಳ ಮಧ್ಯ ತಾರತಮ್ಯ ಮಾಡುವ ಹಾಗಿರಲಿಲ್ಲ.

ಶ್ರೀಮಂತರ ಮಕ್ಕಳು ತಮ್ಮ ತಮ್ಮ ಮನೆತನದ ಅಂತಸ್ತು ಕಾಪಾಡಿಕೊಂಡಿದ್ದರು. ಬಡವಿದ್ಯಾರ್ಥಿಗಳ ಜೊತೆಗೆ ಬೆರೆಯುತ್ತಿರಲಿಲ್ಲ. ಅಸ್ಪೃಶ್ಯತೆ ಮಡಿವಂತಿಕೆಯನ್ನು ಕಾಯ್ದುಕೊಂಡಿದ್ದರು. ಆದರೆ ಪೂರ್ಣಿಮಾ ಶಾಲೆಯಲ್ಲಿನ ಬಹುತೇಕ ವೇಳೆಯನ್ನು ಸ್ಥಿತಿವಂತರಲ್ಲದ ಮಕ್ಕಳೊಂದಿಗೆ ಇರುತ್ತಿದ್ದರು. ಅವರೊಂದಿಗೆ ಆಟ ಆಡುವುದು, ಕೂಡುವುದು, ಊಟಾದಿ ಕ್ರಿಯೆಗಳನ್ನು ಮಾಡುತ್ತಿದ್ದರು. ಮೇಲು-ಕೀಳೆಂಬ ಭಾವ ಅವರಲ್ಲಿರಲಿಲ್ಲ. ಇದನ್ನು ಇತರ ವಿದ್ಯಾರ್ಥಿಗಳು ಸಹಿಸುತ್ತಿರಲಿಲ್ಲ.

ಪೂರ್ಣಿಮಾ ಸ್ಲಮ್ ವಿದ್ಯಾರ್ಥಿಗಳೊಂದಿಗೆ ಊಟ ಮಾಡಿದರೆ, ಆಟ ಆಡಿದರೆ ಇತರ ವಿದ್ಯಾರ್ಥಿಗಳು ಚೂರ್ಗ್ಗಾಲು ಚಿಪ್ಪರ್ಗ್ಗಾಲು ಎಂದು ಜೋರಾಗಿ ಹೇಳುತ್ತಿದ್ದರು. ಮೊಳಕಾಲಿನ ಕೆಳಭಾಗದಿಂದ ಹಿಮ್ಮಡಿಯ ಮೇಲ್ಭಾಗದಲ್ಲಿ ತಮ್ಮ ಉಗುರುಗಳಿಂದ ತಮ್ಮ ಕಾಲುಗಳಿಗೆ ಗೀಚು ಹಾಕಿಕೊಳ್ಳುವುದಕ್ಕೆ ಚಿರ್ಗ್ಗಾಲು ಚಿಪ್ಪರ್ಗ್ಗಾಲು ಎನ್ನುತ್ತಿದ್ದರು. ಚೂರ್ಗ್ಗಾಲು ಚಿಪ್ಪರ್ಗ್ಗಾಲು ಹಾಕಿಸಿಕೊಂಡವರನ್ನು ಇತರ ವಿದ್ಯಾರ್ಥಿಗಳು ಮುಟ್ಟುವ ಹಾಗಿರಲಿಲ್ಲ. ಜೊತೆಯಲ್ಲಿ ಆಟ ಆಡುವಂತಿರಲಿಲ್ಲ. ಇದೊಂದು ರೀತಿಯಲ್ಲಿ ವಿದ್ಯಾರ್ಥಿಗಳಲ್ಲಿರುವ ಅಸ್ಪೃಶ್ಯತೆಯ ಭಾವ ಕಟ್ಟಿಕೊಡುತ್ತದೆ.

ಆದರೆ ಪೂರ್ಣಿಮಾ ಸಹಪಾಠಿಗಳ ವರ್ತನೆಗೆ ಸೊಪ್ಪು ಹಾಕದೆ ಕೊಳಗೇರಿ ಮಕ್ಕಳೊಂದಿಗೆ ಬೆರೆಯುತ್ತಿದ್ದರು. ತಾವು ತಂದಿದ್ದ ಊಟವನ್ನು ಅವರೊಂದಿಗೆ ಹಂಚಿಕೊಂಡು ತಿನ್ನುತ್ತಿದ್ದರು. ಇದೆಲ್ಲವೂ ಮಡಿವಂತಿಕೆಯಿಂದ ಅವರು ದೂರಾಗಿದ್ದರು. ಆತ್ಮೀಯ ಒಡನಾಟ, ಮನುಷ್ಯತ್ವಕ್ಕೆ ಬೆಲೆ ನೀಡುತ್ತಿದ್ದರು. ಸಮಾನತೆಯ ಪ್ರತೀಕವಾಗಿದ್ದರು ಎಂಬುವುದನ್ನು ಸೂಚಿಸುತ್ತದೆ.

ಗಣೇಶ ವೀಕ್ಷಣೆ:

ಬಿಜಾಪುರದ ಗೋಪಾಳಪುರದಲ್ಲಿ ವಾಸಿಸುತ್ತಿದ್ದಾಗ ನಡೆದಿರುವ ಘಟನೆ. ಆಗ ಪೂರ್ಣಿಮಾ ೫ನೆಯ ತರಗತಿಯಲ್ಲಿ ವ್ಯಾಸಂಗದಲ್ಲಿ ನಿರತರಾಗಿದ್ದರು. ಆ ವರ್ಷ ಗಣೇಶ ವೀಕ್ಷಣೆ ಮಾಡಿದ್ದನ್ನು ನೆನಪಿಸಿಕೊಂಡ ಘಟನೆಯು ಅವರ ಧೈರ್ಯ ಸಾಹಸಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಆ ವರ್ಷದ ಗಣೇಶನ ವಿಶೇಷತೆ ಏನೆಂದರೆ ಆನೆಯ ಬಾಯಿಯ ಮುಖಾಂತರ ಹೋಗಿ, ಹೊಟ್ಟೆಯ ಭಾಗದಲ್ಲಿರುವ ಗಣೇಶನ ದರ್ಶನ ಪಡೆಯಬೇಕಾಗಿತ್ತು. ಆನೆಯ ಪ್ರತಿಕೃತಿ, ಸೊಂಡಿಲು, ಬಾಯಿ ಇವೆಲ್ಲವುಗಳ ವೀಕ್ಷಣೆಯೊಂದಿಗೆ ಮಕ್ಕಳಿಗೆ ಕೌತುಕದ ವಿಷಯವಾಗಿತ್ತು. ಸಹಪಾಠಿ ಗೆಳತಿಯರ ಸಲಹೆಯಂತೆ ಗಣೇಶನನ್ನು ನೋಡಿಕೊಂಡು ಬರಲು ತಮ್ಮನೊಂದಿಗೆ ಹೋಗಲು

ನಿರ್ಧರಿಸಿದ್ದರು. ಮನೆಗೆ ಬಂದು ಅಮ್ಮನ ಹತ್ತಿರ ಅಲ್ಲಿಗೆ ಹೋಗುವ ಆಸೆಯನ್ನು ಅವಲತ್ತುಕೊಂಡಳು. ಅಮ್ಮ ತುಂಬಾ ದೂರವಿದೆ ಬೇಡ ಎಂದರು. ಮನೆಯಿಂದ ಗಣೇಶ ಪ್ರತಿಷ್ಠಾಪನೆ ಮಾಡಿದ್ದ ಸ್ಥಳದ ಅಂತರ ಐದಾರು ಕಿಲೋಮೀಟರ್ ಇತ್ತು. ಅಷ್ಟು ದೂರದ ದಾರಿಯನ್ನು ಕಾಲ್ನಡಿಗೆಯಿಂದಲೇ ಹೋಗಬೇಕಾಗಿತ್ತು. ಹೋಗಲೇಬೇಕೆಂಬ ಉತ್ಕಟ ಆಸೆ. ಆದರೆ ಹೋಗಲು ಯಾರು ಜೊತೆಯಲ್ಲಿ ಇರಲಿಲ್ಲ. ಹಾಗಿದ್ದರೂ ಧೈರ್ಯ ಮಾಡಿ ಮನೆಯಲ್ಲಿ ಯಾರಿಗೂ ತಿಳಿಸದೆ ತಮ್ಮನೊಂದಿಗೆ ಪ್ರಯಾಣ ಬೆಳೆಸಿದರು. ದೂರವಿದ್ದರೂ ಉತ್ಸಾಹವಿತ್ತು. ಅದೆಲ್ಲವನ್ನು ನೋಡಿಕೊಂಡು ಮನೆಗೆ ಮರಳಿದಾಗ ರಾತ್ರಿ ಏಳು ಗಂಟೆಯಾಗಿತ್ತು. ಹಿರಿಯರಿಂದ ಚೆನ್ನಾಗಿ ಮಂಗಳಾರತಿ ಮಾಡಿಸಿಕೊಳ್ಳಬೇಕಾಯಿತೆಂದು ನೆನಪಿಸಿಕೊಳ್ಳುತ್ತಾರೆ.

ಸೈಕಲ್ ಕಲಿಕೆಯ ಛಲ:

ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಸೈಕಲ್ ಕಲಿಸಲು ಅಣ್ಣಂದಿರಾದ ಗಿರೀಶ, ಉಮೇಶರನ್ನು ದುಂಬಾಲು ಬಿದ್ದರು. ಆದರೆ ಅವರು ಅಷ್ಟಾಗಿ ಆಸಕ್ತಿ ತೋರದಿದ್ದಾಗ 'ನೀವು ಸೈಕಲ್ ಆಡುತ್ತೀರಾ, ನಾನು ಮಾತ್ರ ಆಡಬಾರದಾ?' ಎಂದು ಅಡವುಗಚ್ಚಿ ಯಾರ ಸಹಾಯವಿಲ್ಲದೆ ಸೈಕಲ್ ಕಲಿಕೆಗಾಗಿ ಮನಸ್ಸು ಮಾಡಿದರು. ಅವರಿಗೆ ಮತ್ತೆಂದು ಸೈಕಲ್ ಕೊಡಿ ಎಂದು ಕೇಳಲಿಲ್ಲ.

ತಂದೆಯವರ ಸಹೋದ್ಯೋಗಿ ಹೊನವಾಡ ಕಾಕಾ ಅವರಿಂದ ಸೈಕಲ್ ಪಡೆದು ಪೂರ್ಣಿಮಾ ಒಂಟಿಗಾಲು ಚಕ್ರಬಳಸಿ ಸೈಕಲ್ ತುಳಿದರು. ಯಾವಾಗ ಬೇಕಾದರೂ ಅವರಿಂದ ಸೈಕಲ್ ಪಡೆಯುವ ತುಳಿಯುವ ಸ್ವಾತಂತ್ರ್ಯ ಸಿಕ್ಕಿತು. ಉತ್ಸಾಹದಿಂದ ಆಡಿದರು. ಸೈಕಲ್ ವಿಷಯದಲ್ಲಿ ಹೊನವಾಡ ಕಾಕಾ ಪೂರ್ಣಿಮಾಗೊಂದು ಷರತ್ತು ಹಾಕಿದ್ದರು. 'ಪೂರ್ಣಿಮಾ ನೀನು ಬೇಕಾದಷ್ಟು ಸೈಕಲ್ ಆಡು. ಅದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಅದಕ್ಕೆ ಕೀಲಿ ಹಾಕಬಾರ್ದು. ಕೀಲಿ ಹಾಕಿದರೆ ಅದನ್ನು ತೆಗೆಯಲು ಬೇಕಾದ ಕೀ ನನ್ನಲ್ಲಿಲ್ಲ. ನನ್ನ ಮಕ್ಕಳು ಬರಬೇಕಾಗುತ್ತದೆ' ಎಂದು ಎಚ್ಚರಿಸಿದ್ದರು. ಅದರಂತೆ ಎಚ್ಚರವಹಿಸಿ ಹಠಹಿಡಿದು

ಕಲಿತರು. ಅಣ್ಣಂದಿರಿಂದ ಸಹಕಾರ ಸಿಗದಿದ್ದಾಗ ಸ್ವಯಂ ಆಸಕ್ತಿವಹಿಸಿ ಸೈಕಲ್ ತುಳಿದು ಓರಗೆಯವರಿಗೆ ಆಸಕ್ತಿದಾಯಕವಾದರು.

ಸೈಕಲ್ ಕಲಿಯುವ ವಿಷಯ ಕುಟುಂಬದವರಿಗೆ ಗೊತ್ತಾಗಲಿಲ್ಲ. ಎಂದಾದರೂ ಗೊತ್ತು ಮಾಡಬೇಕಲ್ಲವೇ? ಅದಕ್ಕಾಗಿ ಪ್ರದರ್ಶನಕ್ಕೆ ಸಿದ್ಧಮಾಡಿಕೊಂಡು ಅಣ್ಣಂದಿರನ್ನು, ತಾಯಿ ಪದ್ಮಾವತಿಯವರನ್ನು ಇಂತಿಷ್ಟು ಹೊತ್ತಿಗೆ ಹಿತ್ತಲಲ್ಲಿ ಬಂದು ನಿಲ್ಲುವಂತೆ ಹೇಳಿ ಮನೆಯಿಂದ ಹೊರಗಾದರು. ನೇರವಾಗಿ ಹೊನವಾಡ ಕಾಕಾರಿಂದ ಉದ್ರಿ ಸೈಕಲ್ ಪಡೆದು ವಿಶಾಲವಾದ ಗ್ರ್ಯಾಂಡ್ ಆಟದ ಮೈದಾನದಿಂದ ಮನೆಯ ಹಿಂದಿನ ರೋಡಿನ ಇನ್ನೊಂದು ಕೊನೆಯವರೆಗೆ ಸೈಕಲ್ ಪ್ರದರ್ಶನ ನಡೆಯಿತು. ಇದುವರೆಗೂ ಆ ವಿಷಯವು ಹೊನವಾಡ ಕಾಕಾ, ಓರಗೆಯ ಗೆಳತಿಯರನ್ನು ಬಿಟ್ಟು ಬೇರೆ ಯಾರಿಗೂ ಗೊತ್ತಿರಲಿಲ್ಲ. ಗೊತ್ತಾದ ಮೇಲೆ ಕುಟುಂಬದವರ ಮೆಚ್ಚುಗೆ ಸಿಕ್ಕಿತು. ಅದರಲ್ಲೂ ತಾಯಿಯ ಅಕ್ಕರೆಯ ಮಾತು. ಪ್ರೋತ್ಸಾಹದಾಯಕ ನುಡಿಗಳಿಂದ ಪ್ರೇರಣೆಗೊಂಡರು. "ಅಣ್ಣಂದಿರಿಂದ ಪ್ರೋತ್ಸಾಹ ಸಿಗದಿದ್ದರೂ ಛಲ ಹಿಡಿದು ಕಷ್ಟಪಟ್ಟು ಸೈಕಲ್ ಕಲಿತೆ. ಅಣ್ಣಂದಿರ ಬೆರಗುನೋಟ, ತಮ್ಮನ ಉತ್ಸಾಹ, ತಾಯಿಯ ಆನಂದಭಾಷ್ಪದ ಕ್ಷಣಗಳು ಇವತ್ತಿಗೂ ಕಣ್ಮುಂದೆ ಬರುತ್ತವೆ" ಎಂದು ಪೂರ್ಣಿಮಾ ಸ್ಮರಿಸಿಕೊಳ್ಳುತ್ತಾರೆ.

ಪ್ರೌಢ ಶಾಲೆ: ಮುಂದೆ ಬಾಲಕಿಯರ ಸರಕಾರಿ ಪ್ರೌಢ ಶಾಲೆಯಲ್ಲಿ ೮ನೇ ತರಗತಿಗೆ ದಾಖಲಾತಿ ಪಡೆಯಲಾಯಿತು. ಪ್ರೌಢ ಶಿಕ್ಷಣವನ್ನು ಮುಗಿಸಿಕೊಂಡು ೧೯೮೭ರಲ್ಲಿ ಎಸ್.ಎಸ್.ಎಲ್.ಸಿ. ಪಾಸಾದರು.

ಹೈಸ್ಕೂಲ್ ಓದುವಿಕೆಯ ಜೊತೆ ಪೂರ್ಣಿಮಾ ಹಾಡು, ನಾಟಕ, ಹಿನ್ನೆಲೆಗಾಯನ ಮತ್ತು ಆಟೋಟಗಳಲ್ಲಿ ಎಲ್ಲರ ಗಮನ ಸೆಳೆದಿದ್ದರು. ಅದರೊಂದಿಗೆ ಪೋಲಿಹುಡುಗರ ಕೀಟಲೆಗಳು ಪ್ರಾರಂಭವಾದವು. ಅಣ್ಣಂದಿರು ಉದ್ಯೋಗವನ್ನರಸಿ ಪುಣೆ ಸೇರಿದ್ದರು. ತಮ್ಮ ಸಣ್ಣವನಾಗಿದ್ದನು. ತಂದೆ

ಉದ್ಯೋಗದಲ್ಲಿ ವ್ಯಸ್ತರಾಗಿರುತ್ತಿದ್ದರು. ತಾಯಿ ಮುಗ್ಧೆಯಾಗಿದ್ದರು. ಮನೆ ಬಿಟ್ಟು ಅವರಿಗೆ ಬೇರೊಂದು ಪ್ರಪಂಚ ಗೊತ್ತಿರಲಿಲ್ಲ. ಇದನ್ನು ಗಮನಿಸಿದ್ದ ಯುವಕನೊಬ್ಬ ಚುಡಾಯಿಸಿದ್ದನು. ಈ ಸಂಗತಿಯನ್ನು ಮನೆಯವರಿಗೆ ಹೇಳಿದಾಗ ರಾಮಾಯಣವೇ ನಡೆದುಹೋಯಿತು. ಶಾಲೆಗೆ ಹೋಗಬಾರದೆಂದು ನಿರ್ಬಂಧಿಸಿದರು. ಮುಂದೆ ಪರಿಸ್ಥಿತಿ ತಿಳಿಯಾದ ಮೇಲೆ ಅಭ್ಯಾಸ ಮುಂದುವರೆಸಿದರು. ಆ ಮೇಲೆ ನಡೆದಿರುವ ಯಾವೊಂದು ಹುಡುಗರ ಕೀಟಲೆಗಳನ್ನು ಮನೆಯವರಿಗೆ ಹೇಳದೇ ಸ್ವತಃ ನಿಭಾಯಿಸಿದರು. ಏಳುತ್ತ, ಬೀಳುತ್ತ, ಅಳುತ್ತ ಕಣ್ಣೀರೊರೆಸಿಕೊಳ್ಳುತ್ತ ಅವುಡುಗಚ್ಚಿ ಎದ್ದುನಿಲ್ಲುತ್ತಿದ್ದಳು ಆ ಬಾಲಕಿ.

ರಾಯಚೂರಿನ ಪ್ರೌಢ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಹಿಂದಿ ಶಿಕ್ಷಕಿ ಪರ್ವಿನ್ ಬಾನು ಮತ್ತು ಕನ್ನಡ ಅಧ್ಯಾಪಕಿ ಲೀಲಾ ಪಂಪಯ್ಯ ಹಿರೇಮಠ ಇವರ ಮೇಲೆ ಪ್ರಭಾವ ಬೀರಿದ ಗುರುಗಳಾಗಿದ್ದಾರೆ. ಅವರಿಬ್ಬರಲ್ಲಿನ ಗುಣಾದರ್ಶಗಳನ್ನು ಆಹ್ವಾನಿಸಿಕೊಂಡು ಬೆಳೆದರು. ಸಾಹಿತ್ಯ ಮತ್ತು ಸಂಗೀತ ಕ್ಷೇತ್ರದಲ್ಲಿ ಹೆಜ್ಜೆಗುರುತುಗಳನ್ನು ದಾಖಲಿಸುತ್ತ ಅವರ ಮೆಚ್ಚುಗೆಗೆ ಪಾತ್ರರಾದರು.

ಬಾಲ್ಯದಲ್ಲಿ ಪೂರ್ಣಿಮಾ ಅಮ್ಮನ ಸೋದರತ್ತೆಯ ಮಹಡಿ ಮನೆಯಲ್ಲಿದ್ದ ಕಿಟಕಿಯಲ್ಲಿ ಕುಳಿತು ಓದುತ್ತಿದ್ದರು. ಅದು ಓದುವ ಸಲುವಾಗಿಯೇ ಮಾಡಿಸಿದಂತಿತ್ತು ಎನ್ನುತ್ತಾರೆ. ಉತ್ತಮ ಬೆಳಕು, ಸ್ವಚ್ಛವಾದ ಗಾಳಿ ಇವರ ಓದುವಿಕೆಗೆ ಪ್ರೇರಣೆಯನ್ನೊದಗಿಸಿತು. ಮನಸ್ಸಿನ ಪ್ರಫುಲ್ಲತೆಗೆ ಚುಂಬಕಗಾಳಿ ಬೀಸುತ್ತಿತ್ತು ಎಂದು ಆ ಆನಂದ ಉಲ್ಲಾಸದ ಕ್ಷಣಗಳನ್ನು ಮೆಲುಕು ಹಾಕುತ್ತಾರೆ.

ಆಟೋಟ:

ಬಾಲ್ಯದಲ್ಲಿ ಪೂರ್ಣಿಮಾ ಓದು, ಸಂಗೀತ, ನೃತ್ಯದಲ್ಲಿ ಅಡ್ವಾನ್ಸ್ ಆಗಿರುವಂತೆ ಬಳೆಚೂರು, ಹುಣಚೆಪಕ್ಕ, ಚೌಕಾಬಾರ, ಕಣ್ಣುಮುಚ್ಚಾಲೆ, ಪಗಡೆ ಆಟಗಳಲ್ಲೂ

ಆಸಕ್ತರಾಗಿದ್ದರು. ವಾಲಿಬಾಲ್ ಆಟದಲ್ಲೂ ಪೂರ್ಣಿಮಾ ಸೈ ಎನಿಸಿಕೊಂಡಿದ್ದರು. ಭೀಮಾಶಂಕರ ಇವರಿಗೆ ಕೋಚ್ ಆಗಿದ್ದರು. ಭೀಮಾಶಂಕರ ಮೂಲತಃ ಬಾಸ್ಕೆಟ್ ಬಾಲ್ ಕೋಚ್ ಆಗಿದ್ದರೂ ವಾಲಿಬಾಲ್ ಕಲಿಸುತ್ತಿದ್ದರು. ವಾಲಿಬಾಲ್‌ನಲ್ಲಿ ರಾಜ್ಯಮಟ್ಟದವರೆಗೂ ಆಟವಾಡಿ ಬಂದಿರುವ ಹಿರಿಮೆ ಪೂರ್ಣಿಮಾರವರದು.

ಇದೇ ಸಂದರ್ಭದಲ್ಲಿ ರಾಯಚೂರಿನಲ್ಲಿ ಓದುತ್ತಿದ್ದ ಜಾರ್ಜ್ ಕ್ರಿಸ್ಟಿ ಪರಿಚಯವಾಯಿತು. ಪೂರ್ಣಿಮಾಳ ಚುರುಕುತನಕ್ಕೆ ಮನೆಯವರ ಸಹಕಾರ ಕಡಿಮೆಯಾದಾಗ ಜಾರ್ಜ್ ಸಹಾಯಕನಾಗಿ ಕಾಣಿಸಿಕೊಂಡರು. ಅದರಲ್ಲೂ ಮುಖ್ಯವಾಗಿ ಉಡಾಳ ಹುಡುಗರ ತುಂಟಾಟಕ್ಕೆ ಬ್ರೇಕ್ ಹಾಕಿದ್ದರು. ಇದರಿಂದ ಇವರಿಬ್ಬರ ನಡುವೆ ಗೆಳೆತನ ಏರ್ಪಟ್ಟಿತು. ಅದು ಮುಂದೆ ಪ್ರೇಮವಿವಾಹಕ್ಕೆ ಕಾರಣವಾಯಿತು. ಪರಸ್ಪರ ಅರ್ಥ ಮಾಡಿಕೊಂಡು ಬೆಳೆಯಲು ಸಹಚರ ಜೀವನಕ್ಕೆ ನಾಂದಿ ಹಾಡಿತು.

ಸ್ಮಶಾನ ವರದಿ:

೧೯೮೦ರ ವೇಳೆಗೆ ಕಲಬುರ್ಗಿಯ ಚಿಕ್ಕಪ್ಪನ ಮನೆಯಲ್ಲಿ ಅಜ್ಜಿ ಜಾನಕಿ ಸಾವನ್ನಪ್ಪಿದ್ದರು. ಅಂತ್ಯಸಂಸ್ಕಾರದಲ್ಲಿ ಕುಲಕರ್ಣಿ ಕುಟುಂಬದ ಎಲ್ಲ ಸದಸ್ಯರು, ಬಂಧುಗಳು ಭಾಗವಹಿಸಿದ್ದರು. ಶವ ಸಂಸ್ಕಾರ, ತಿಥಿ, ಆರಾಧನೆಯ ಕಾರ್ಯಕ್ರಮಗಳೆಲ್ಲ ಕ್ರಮವಾಗಿ ಪೂರ್ಣಗೊಂಡವು.

ಒಂದು ದಿನ ಮಧ್ಯಾಹ್ನದಲ್ಲಿ ವೆಂಕಟೇಶ್ವರರಾವ ಎಲ್ಲ ಸಣ್ಣ ಮಕ್ಕಳೊಂದಿಗೆ ಮಾತನಾಡುತ್ತ, ಈ ಮನೆಯ ಹಿಂದುಗಡೆ ಸ್ಮಶಾನಭೂಮಿ ಇದೆ. ಮಧ್ಯರಾತ್ರಿ ಏಕಾಂಗಿಯಾಗಿ ಮಾಳಿಗೆಯ ಮೇಲೆ ನಿಂತು ಹೆಣ ಸುಡುವುದನ್ನು ಯಾರು ನೋಡುತ್ತೀರಿ? ಅದರ ಸವಿವರವಾದ ವರದಿಯನ್ನು ನನಗ್ಯಾರು ಒಪ್ಪಿಸುತ್ತೀರಿ? ಯಾರಲ್ಲಿ ನಿಮಗೆ ಅಂತಹ ಧೈರ್ಯವಿದೆ, ಎಂಬುದನ್ನು ನೋಡುತ್ತೇನೆ" ಎಂದು ಸವಾಲು ಹಾಕಿದರು.

ಮಕ್ಕಳೆಲ್ಲ ಭೂತ, ದೆವ್ವದ ಬಗ್ಗೆ ಹೆದರಿ ಮಾತನಾಡದೆ ಸುಮ್ಮನೆ ಕುಳಿತರು. ಯಾರೊಬ್ಬರಾಗಲಿ ಸ್ಮಶಾನದಲ್ಲಿನ ಚಿತ್ರಣ ನೋಡಿಕೊಂಡು ಬರಲು ಒಪ್ಪಿಕೊಳ್ಳಲಿಲ್ಲ. ಆದರೆ ೧೧ನೇ ವರ್ಷದಲ್ಲಿದ್ದ ಪೂರ್ಣಿಮಾ ಅಂದಿನ ಮಧ್ಯರಾತ್ರಿ ವಾಳಿಗೆ ಮೇಲೆ ನಿಂತು ಹೆಣ ಸುಡುವುದನ್ನು ನೋಡಿದರು. ಹೆದರಿಕೆಯಾಗುತ್ತಲಿದ್ದರೂ ಎಂದಾದರೂ ಒಂದು ದಿನ ಎಲ್ಲರೂ ಸಾಯಲೇಬೇಕಲ್ಲ. ಏಕೆ ಹೆದರಬೇಕು ಎಂದು ಮನಕ್ಕೆ ಸಮಜಾಯಿಷಿ ಹೇಳಿಕೊಂಡರು. ತಾವು ನೋಡಿದ ಎಲ್ಲ ಪ್ರಕ್ರಿಯೆಗಳನ್ನು ಸವಿವರವಾಗಿ ಮುಂಜಾನೆ ತಂದೆಗೆ ಒಪ್ಪಿಸಿದರು. ತಂದೆ ನಿಬ್ಬೆರಗಾಗಿ ಮಗಳ ಧೈರ್ಯಕ್ಕೆ ಮೆಚ್ಚಿಕೊಂಡರು.

ಮನೆ ಜವಾಬ್ದಾರಿ:

ತಾಯಿಯ ಅಡುಗೆ ಕಾರ್ಯದಲ್ಲಿ ಭಾಗಿಯಾಗುತ್ತ, ಓದುತ್ತ ಮನೆಯ ಜವಾಬ್ದಾರಿಯನ್ನು ಪೂರ್ಣಿಮಾ ನಿಭಾಯಿಸಿದ್ದುಂಟು. ದಿನಾಲು ಮನೆಗೆ ಹಾಲು ತರುವುದು. ಹಿಟ್ಟಿನ ಗಿರಣಿಗೆ ಹೋಗಿ ಬೀಸ್ಕೊಂಡು ಬರುವುದು, ತರಕಾರಿ ತಂದು ಅಡುಗೆಗೆ ಸಿದ್ಧಮಾಡಿಕೊಳ್ಳುವುದನ್ನು ಮಾಡುತ್ತಿದ್ದರು. ಈ ಎಲ್ಲ ಕೆಲಸಗಳ ಸಲುವಾಗಿ ಸೈಕಲ್ ಸಿಗುವುದೆಂಬ ಖುಷಿ ಅವರಲ್ಲಿರುತ್ತಿತ್ತು.

ತನಗೆ ಮತ್ತು ತಮ್ಮ ಹರೀಶನಿಗೆ ಬೇಕಾಗುತ್ತಿದ್ದ ಪಠ್ಯಪುಸ್ತಕ, ವಿದ್ಯಾ ಲೇಖಕ್ ನೋಟ್‌ಬುಕ್‌ಗಳನ್ನು ತೀನ್ ಕಂದಿಲ್ ಹತ್ತಿರವಿರುವ ಜನತಾ ಬಜಾರದಿಂದ ಖರೀದಿಸುತ್ತಿದ್ದರು. ಆಗ ವಿದ್ಯಾ ಲೇಖಕ್ ನೋಟ್‌ಬುಕ್ ಜನಪ್ರಿಯವಾಗಿತ್ತು. ಉತ್ತಮ ಗುಣಮಟ್ಟ ಹೊಂದಿತ್ತು. ಪಠ್ಯಪುಸ್ತಕ ಮತ್ತು ನೋಟ್‌ಬುಕ್‌ಗಳಿಗೆ ಕವರ್ ಹಚ್ಚುವ ಕೆಲಸ ಇವರದ್ದಾಗಿತ್ತು. ಸ್ವಲ್ಪವೂ ಹೆಚ್ಚು ಕಡಿಮೆಯಾಗದಂತೆ ನೀಟಾಗಿ ಅದನ್ನು ಮಾಡುತ್ತಿದ್ದರು.

ಟ್ರಾವೇಲರ್ಸ್ ಚೆಕ್:

ಪೂರ್ಣಿಮಾ ಕುಲಕರ್ಣಿಯವರ ಮನೆದೇವರು ಬಿಜಾಪುರ ಜಿಲ್ಲೆಯ ಸಿದ್ಧನಾಥ ಗ್ರಾಮದ ಸಿದ್ಧೇಶ್ವರರು. ೧೯೮೫ರಲ್ಲಿ ಮನೆದೇವರ ಅಭಿಷೇಕ ಮಾಡುವ ಸಲುವಾಗಿ ರಾಯಚೂರಿನಿಂದ ಬಿಜಾಪುರಕ್ಕೆ ಬರಬೇಕಾಗಿತ್ತು. ತಂದೆ ನೀಡಿದ್ದ ೧೦ ಸಾವಿರ ರೂಪಾಯಿಗಳ 'ಟ್ರಾವೇಲರ್ಸ್ ಚೆಕ್'ನ್ನು ಎನ್‌ಕ್ಯಾಶ್ ಮಾಡಿಕೊಂಡು ದೇವರ ಪೂಜೆ, ಅಭಿಷೇಕಕ್ಕೆ ತಾಯಿ ತಯಾರಿ ಮಾಡಿಕೊಳ್ಳಬೇಕಾಗಿದ್ದ ಎಲ್ಲ ಸಾಮಗ್ರಿಗಳನ್ನು ಪೂರ್ಣಿಮಾ ಖುದ್ದಾಗಿ ಖರೀದಿಸಿ ಪೂಜೆಗೆ ಅಣಿಗೊಳಿಸಿಕೊಟ್ಟರು. ಈಗಿನ ಹಾಗೆ ಆಗ ಎಲ್ಲವೂ ಒಂದೇ ಕಡೆ ಸಿಗುತ್ತಿರಲಿಲ್ಲ. ಬಸ್ ಸೌಲಭ್ಯವೂ ಅಷ್ಟಕಷ್ಟೇ. ಅಂತಹ ವೇಳೆಯಲ್ಲಿ ಮಗಳು ಸ್ವತಂತ್ರವಾಗಿ ಬೆಳೆಯಲಿ. ಮನೆಯ ಜವಾಬ್ದಾರಿ ನಿಭಾಯಿಸಲಿ ಎಂಬ ಆಶಯ ವೆಂಕಟೇಶ್ವರರಾವ ಕುಲಕರ್ಣಿ ಹೊಂದಿದ್ದರು. ತಂದೆಯ ಮನೋಭಿಲಾಷೆಗೆ ಭಂಗ ಬರದಂತೆ ಪೂರ್ಣಿಮಾ ಇದುವರೆಗೂ ನಡೆದುಕೊಂಡು ಬಂದಿದ್ದಾರೆ.

ರಂಗಭೂಮಿಯ ಮಿಂಚು:

ರಾಯಚೂರಿನ ಪ್ರೌಢ ಶಾಲೆಯಲ್ಲಿ ಪೂರ್ಣಿಮಾ ಅಭ್ಯಾಸ ಮಾಡುತ್ತಿದ್ದಾಗ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಅದಾಗಲೇ ಪ್ರಾರಂಭವಾಗಿದ್ದ ಸಮುದಾಯ ಹವ್ಯಾಸಿ ಕಲಾ ತಂಡಕ್ಕೆ ಮೆರಗು ತಂದುಕೊಟ್ಟ ಕೀರ್ತಿ ಸಿ. ಬಸವಲಿಂಗಯ್ಯನವರಿಗೆ ಸಲ್ಲುತ್ತದೆ. ಅವರು ಎನ್.ಎಸ್.ಡಿ. (ರಾಷ್ಟ್ರೀಯ ನಾಟಕ ಶಾಲೆ)ಯಿಂದ ಪದವಿ ಪಡೆದು ರಾಯಚೂರಿಗೆ ಬಂದಿದ್ದರು. ತಾವು ಕಲಿತ ಕಲಾಭಿವ್ಯಕ್ತಿಯನ್ನು ಪ್ರಚಾರ ಪಡಿಸುವ ದಿಶೆಯಲ್ಲಿ ಮೊದಲಿಗೆ ಕನ್ನಡದಲ್ಲಿ ಪ್ರಸಿದ್ಧವಾಗಿದ್ದ 'ಕೆರೆಗೆ ಹಾರ' ಪಠ್ಯವನ್ನು 'ಸತಿಯೊಡನೆ ಸಹಗಮನ'ವನ್ನಾಗಿ ಮಾರ್ಪಾಡು ಮಾಡಿಕೊಂಡಿದ್ದರು. ಅಲ್ಲಿ ಭಾಗೀರಥಿಯು ಬಲಿಯಾಗಿ ಕೆರೆಗೆ ನೀರು ಬಂದರೆ ಇಲ್ಲಿ ಭಾಗೀರಥಿ ಹಾಗೂ ಗಂಡ ಮಹಾದೇವ ಇಬ್ಬರ ಬಲಿಯಾದರೂ ಕೆರೆಗೆ ನೀರು ಬರದಿರುವುದು ಮುಖ್ಯವಾಗಿ ಅವರ

ಬಲಿದಾನ ವ್ಯರ್ಥವಾಗುತ್ತದೆ. ಮೂಢನಂಬಿಕೆಗಳಿಂದ ಎಷ್ಟೋಂದು ಜೀವಗಳು ಬಲಿಯಾಗುತ್ತವೆ ಎನ್ನುವ ಸಂದೇಶ ಸಾರುವ ಈ ನಾಟಕದಲ್ಲಿ ಪೂರ್ಣಿಮಾ ಭಾಗೀರಥಿಯ ಪಾತ್ರವಹಿಸಿದ್ದರು.

ಒಂದು ತಾಸಿನ 'ಸತಿಯೊಡನೆ ಸಹಗಮನ'ದ ಬಹುತೇಕ ದೃಶ್ಯಗಳಿಗೆ ಪೂರ್ಣಿಮಾ ಕೇಂದ್ರಶಕ್ತಿಯಾಗಿದ್ದರು. ಮಹಾದೇವನ ಪಾತ್ರಧಾರಿಯಾಗಿ ಪ್ರಖ್ಯಾತ ಬರಹಗಾರ, ಕವಿ ಶಾಂತರಸರ ಮಗ ಎಚ್.ಎಸ್. ಬಸವಪ್ರಭು ನಟಿಸಿದ್ದರು. ಕೆರೆಗೆ ಬಲಿಯಾಗುವ ಮುನ್ನಿನ ರಾತ್ರಿ ಭಾಗೀರಥಿಯು ಸ್ವಗತದಲ್ಲಿ ಮಾತಾಡುವ, ತಂದೆ-ತಾಯಿ, ಗೆಳತಿಯರ ಜೊತೆಗಿನ ಸಂಭಾಷಣೆ, ಪ್ರೀತಿಯ ಗಂಡನೊಡನೆ ಕಳೆದ ದಾಂಪತ್ಯ ಜೀವನದ ರಸನಿಮಿಷಗಳ ಮನಮಂಥನ ಮತ್ತು ಗರ್ಭದಲ್ಲಿರುವ ಮಗುವಿನ ಕುರಿತಾದ ಮಾತೃವಾತ್ಸಲ್ಯದ ಮಾತುಗಳು ಪ್ರೇಕ್ಷಕರ ಮನಸ್ಸಿಗೆ ಮುದನೀಡಿದ್ದವು. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪೂರ್ಣಿಮಾ ಅಭಿವ್ಯಕ್ತಪಡಿಸಿದ ಸಂಭಾಷಣೆಯ ಶೈಲಿ, ಮನೋಜ್ಞ ಅಭಿನಯದಿಂದ ಪ್ರಭಾವಿತರಾದ ಸಿ. ಬಸಲಿಂಗಯ್ಯನವರು ಇವರನ್ನು ತಬ್ಬಿಕೊಂಡು 'ನನ್ನನ್ನು ಗೆಲ್ಲಿಸಿ ಬಿಟ್ಟೆ, ನನ್ನನ್ನು ಗೆಲ್ಲಿಸಿ ಬಿಟ್ಟೆ' ಎಂದು ಕುಣಿದಾಡಿದರು. ಅವರ ಉಲ್ಲಾಸಕ್ಕೆ ಮಿತಿಯೇ ಇರಲಿಲ್ಲ ಎಂದು ನೆನಪಿಸಿಕೊಳ್ಳುತ್ತಾರೆ.

'ಸತಿಯೊಡನೆ ಸಹಗಮನ' ನಾಟಕವು ಸಿ. ಬಸವಲಿಂಗಯ್ಯನವರ ನಿರ್ದೇಶನದಲ್ಲಿ ರಾಯಚೂರು, ಯರಮರಸ್, ಹೊಸಪೇಟೆ, ಹೂವಿನಹಡಗಲಿ, ಹರಪನಹಳ್ಳಿ, ಗೌರಿಬಿದನೂರು, ದಾವಣಗೆರೆ ಸೇರಿದಂತೆ ಕೆಲವು ಕಡೆಗಳಲ್ಲಿ ಪ್ರದರ್ಶನಗೊಂಡು ಕೊನೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನಗೊಳ್ಳುವುದಿತ್ತು. ಈ ನಾಟಕದ ಮೇಲೆ ಸಿ. ಬಸವಲಿಂಗಯ್ಯನವರ ಭವಿಷ್ಯ ರೂಪುಗೊಳ್ಳುವುದಿತ್ತು. ಅದಕ್ಕಾಗಿ ಶಕ್ತಿಮೀರಿ ಶ್ರಮಿಸಿದ್ದರು. ಬಸಲಿಂಗಯ್ಯನವರ ಶ್ರಮಕ್ಕೆ ಪೂರ್ಣಿಮಾ ಕಲಾಭಿವ್ಯಕ್ತಿ ಸಾರ್ಥಕ್ಯ ತಂದುಕೊಟ್ಟಿತು. ಇವರಿಬ್ಬರ ಪರಿಶ್ರಮವು ಕಲಾರಸಿಕರಿಗೆ ಆನಂದವನ್ನುಂಟು ಮಾಡಿತು.

ಇದಾದ ಮೇಲೆ ಬರ್ಟೋಲ್ಡ್ ಬ್ರೇಕ್ಟ್‌ನ 'ಕಕೇಶಿಯನ್ ಚಾಕ್ ಸರ್ಕಲ್' ನಾಟಕವನ್ನು ರೂಪಾಂತರಗೊಳಿಸಿ 'ಅಲಾಮನ ಅದ್ಭುತ ನ್ಯಾಯ' ಎಂಬ ಸಂಗೀತ ಪ್ರಧಾನ ನಾಟಕವೊಂದರಲ್ಲಿ ಪೂರ್ಣಿಮಾ ಮುದುಕಿಯ ಪಾತ್ರವಹಿಸಿದ್ದರು. ನಾಯಕಿಯಾಗಿ ಸಹಗೆಳತಿ ಮುಕ್ತಾಯಕ್ಕ ಅಭಿನಯಿಸಿದ್ದರು. ಹೆತ್ತತಾಯಿಗಿಂತ ಮಗುವನ್ನು ಸಲುಹಿ ಬೆಳೆಸಿದ ಸಾಕುತಾಯಿಗೆ ಮಗುವನ್ನೊಪ್ಪಿಸುವ, ಹಡೆದಾಕೆಗಿಂತ ಪಡೆದಾಕೆಯ ಮಾತೃವಾತ್ಸಲ್ಯಕ್ಕೆ ಜಯವೆನ್ನುವ ಅಲಾಮನ ನ್ಯಾಯವು ಸಮಾಜದಲ್ಲಿ ಮಾದರಿಯಾಗಿ ನಿಲ್ಲುತ್ತದೆ. ಇಲ್ಲಿ ಪಾತ್ರಕ್ಕೆ ಸಿಕ್ಕ ಅವಕಾಶ ಗೌಣವಾಗಿದ್ದರೂ ಇಡೀ ನಾಟಕಕ್ಕೆ ಧ್ವನಿ, ಹಿನ್ನೆಲೆ ಗಾಯನ, ಪಾತ್ರಗಳ ಸಂಭಾಷಣೆಗೆ ಅನುವು ಮಾಡಿಕೊಡುವ ಕಾರ್ಯದಲ್ಲೂ ಯಶಸ್ವಿಯಾಗಿ ಪೂರ್ಣಿಮಾ ನಿಂತರು. ನಾಟಕದ ಆಧಾರಸ್ತಂಭವಾಗಿದ್ದನ್ನು ನೆನಪಿಸಿಕೊಳ್ಳುತ್ತಾರೆ. ಆದರೂ ಅವರಲ್ಲಿ ತಮ್ಮ ಕಲಾವಂತಿಕೆಯ ಬಗ್ಗೆ ದುರಾಭಿಮಾನವಿದ್ದಂತಿಲ್ಲ. ಸಹ ಕಲಾವಿದರ ಬಗ್ಗೆ ತಾತ್ಸರವೂ ಇಲ್ಲ. ಶಾಲೆಯವರು ಹಮ್ಮಿಕೊಳ್ಳುತ್ತಿದ್ದ ಅಂತರ್‌ಶಾಲಾ ಪ್ರತಿಯೋಗಿತೆಗಳಲ್ಲಿ ಪೂರ್ಣಿಮಾ ಸದಾ ಮುಂಚೂಣಿಯಲ್ಲಿದ್ದರು.

ಪದವಿಪೂರ್ವ: ಪಿ.ಯು.ಸಿ. ವಿಜ್ಞಾನ ವ್ಯಾಸಂಗಕ್ಕಾಗಿ ಬೆಂಗಳೂರಿನ ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಸೈನ್ಸ್ ಕಾಲೇಜಿನಲ್ಲಿ ಪ್ರವೇಶ ಪಡೆದರು. ಚೆನ್ನಾಗಿ ಓದಿ ಪ್ರಥಮ ದರ್ಜೆಯಲ್ಲಿ ಪಾಸಾದರು. ಪಿ.ಯು.ಸಿ. ಓದು ಇವರ ಪಾಲಿಗೆ ಸಾಂಸ್ಕೃತಿಕ ಹೊಡೆತ ಕೊಟ್ಟಿತು.

"ರಾಯಚೂರಿನಿಂದ ನಾನು ಬೆಂಗಳೂರಿಗೆ ಹೋದಾಗ ಅಲ್ಲಿಯ ಭಾಷಿಕ ಪರಿಸರ, ಕಲಿಕಾ ವಾತಾವರಣಕ್ಕೆ ಹೊಂದಿಕೊಳ್ಳಲು ಮೂರ್‍ನಾಲ್ಕು ತಿಂಗಳು ಬೇಕಾಯಿತು. ಅಲ್ಲಿಯ ಸೈನ್ಸ್ ಕಾಲೇಜಿನ ಬಹುತೇಕ ವಿದ್ಯಾರ್ಥಿಗಳು ಆಂಗ್ಲಮಾಧ್ಯಮದಿಂದ ಬಂದವರಾಗಿದ್ದರು. ಇಂಗ್ಲಿಷಿನಲ್ಲಿ ಅವರು ಪರಫೆಕ್ಟ್ ಇದ್ದರು. ನಾನಷ್ಟು ಪರಿಣಿತಳಾಗಿರಲಿಲ್ಲ. ಕನ್ನಡ ಮಾಧ್ಯಮದಿಂದ ಕಾಲೇಜಿನಲ್ಲಿ ಪ್ರವೇಶ ಪಡೆದವರ ಸಂಖ್ಯೆ ಬೆರಳೆಣಿಕೆಯಷ್ಟು. ಅದರಲ್ಲಿ ನಾನೊಬ್ಬಳು. ಕನ್ನಡದಲ್ಲಿ

ಯಾರೊಬ್ಬರೂ ಮಾತನಾಡಲೊಲ್ಲರು. ಯಾರೂ ನನ್ನೊಂದಿಗೆ ಸರಿಯಾಗಿ ಮಾತನಾಡುತ್ತಿರಲಿಲ್ಲ" ಎಂದು ಹಿಂದಿನ ನೆನಪುಗಳನ್ನು ಮೆಲುಕು ಹಾಕುತ್ತಾರೆ.

ಯಲಹಂಕದಲ್ಲಿ ಮನೆ ಮಾಡಲಾಗಿತ್ತು. ಅಪ್ಪನ ಜಾಬ್ ಮತ್ತು ನಾನು ಓದುತ್ತಿದ್ದ ಕಾಲೇಜು ಇದ್ದದ್ದು ಬೆಂಗಳೂರಿನ ಮಲ್ಲೇಶ್ವರಂನಲ್ಲಿ. ಹಾಗಿದ್ದರೂ ಜೊತೆಯಾಗಿ ಎಂದು ಹೋದವರಲ್ಲ. ಅವರ ಕಚೇರಿ ವೇಳೆ, ನನ್ನ ಕಾಲೇಜಿನ ಕಲಿಕಾ ಸಮಯ ಬೇರೆ ಬೇರೆಯಾಗಿತ್ತು. ನಾನು ಮಾತ್ರ ಎರಡೆರಡು ಬಸ್ ಚೆಂಜ್ ಮಾಡುತ್ತ ಹೋಗಬೇಕಾಗಿತ್ತು. ಅದಕ್ಕಾಗಿ ಮನೆಯಿಂದ ಮುಂಜಾನೆ ೬.೧೫ಕ್ಕೆ ಬಿಟ್ಟು ಕಾಲೇಜು ತಲುಪಲು ಹರಸಾಹಸ ಮಾಡಬೇಕಾಗುತ್ತಿತ್ತು.

ಐದು ತಿಂಗಳ ನಂತರ ಮೆಕ್ರಿ ಸರ್ಕಲ್‌ನಲ್ಲಿಳಿದು ಸ್ನೇಹಿತೆಯಾಗಿದ್ದ ಮಮತಾ ಕೆರಳಿಯನ್ ಜೊತೆ ರಾತ್ರಿ ನೋಡಿದ್ದ 'ಬುನಿಯಾದ್'ಗಳಂತಹ ಕೆಲವೊಂದು ಧಾರವಾಹಿಗಳ ಚರ್ಚೆ ಮಾಡುತ್ತ ಕಾಲೇಜು ತಲುಪುತ್ತಿದ್ದೆವು. ಆಕೆ ಜೊತೆಗಿನ ನಿರಂತರ ಸಂಭಾಷಣೆಯಿಂದ ಇಂಗ್ಲಿಷ್‌ನಲ್ಲಿ ಮಾತನಾಡುವ ಸಂಭಾಷಣಾ ಕೌಶಲದಲ್ಲಿ ಪ್ರಗತಿ ಕಂಡುಕೊಂಡೆ ಎನ್ನುತ್ತಾರೆ.

ಮೇಕ್ರಿ ಸರ್ಕಲ್‌ನಿಂದ ಮಲ್ಲೇಶ್ವರಂಗೆ ಹೋಗುವ ದಾರಿಯಲ್ಲಿ ಕರ್ನಾಟಕದ ಅಂದಿನ ಮುಖ್ಯಮಂತ್ರಿಯಾಗಿದ್ದ ದಿವಂಗತ ರಾಮಕೃಷ್ಣ ಹೆಗಡೆಯವರ ಮನೆಯಿತ್ತು. ಅವರ ಮನೆಯ ಹೆಸರು 'ಕೃತಿಕಾ'. ಅಲ್ಲಿ ಜನತಾ ದರ್ಶನ ನಡೆಸುತ್ತಿದ್ದರು. ವಾಯುವಿಹಾರ ಮುಗಿಸಿಕೊಂಡು ಮುಖ್ಯಮಂತ್ರಿಯವರು ನಾವು ಕಾಲೇಜಿಗೆ ಹೋಗುವಾಗ ಬರುತ್ತಿದ್ದರು. ಅವರನ್ನು ನೋಡುವ ಆಸೆಯಿಂದ ಪ್ರತಿನಿತ್ಯ ಅವರಿಗೆ ಎದುರಾಗಿಯೇ ನಾನು ಮಮತಾ ಹೋಗುತ್ತಿದ್ದೆವು ಎಂದು ಸ್ಮರಿಸಿಕೊಳ್ಳುತ್ತಾರೆ.

ಸಲ್ಲದ ಕುಟುಂಬ ಪ್ರೀತಿ:

ಕುಲಕರ್ಣಿ ಕುಟುಂಬದ ಬಹುತೇಕ ಸದಸ್ಯರು ಪೂರ್ಣಿಮಾರನ್ನು ಕಂಡರೆ ಸೋದರತ್ತೆ (ತಂದೆಯ ತಂಗಿ ಶಶಿಕಲಾ)ಯಂತಿದ್ದಾರೆಂದು ಹೇಳುತ್ತಿದ್ದರಂತೆ! ಏಕೆಂದರೆ ಶಶಿಕಲಾ ಸುಂದರಿಯಾಗಿದ್ದರು. ಆದರೆ ಅಷ್ಟೇ ಪ್ರಮಾಣದಲ್ಲಿ ಹಠಮಾರಿಯೂ ಹೌದು. ಪೂರ್ಣಿಮಾಳ ಧೈರ್ಯ, ಹಿಡಿದ ಛಲ ಬಿಡದಿರುವ ಪ್ರವೃತ್ತಿಯು ಮನೆಯಲ್ಲಿ ಕೆಲವರಿಗೆ ಹಠಮಾರಿತನ ಎಂದೆನಿಸುತ್ತಿತ್ತು.

ಡಾ. ವೆಂಕಟೇಶ್ವರರಾವ ತಮ್ಮ ತಂಗಿಯನ್ನು ಅತಿಯಾಗಿ ಪ್ರೀತಿಸುತ್ತಿದ್ದರು. ಅವರು ಕೇಳಿದ್ದನ್ನೆಲ್ಲ ಕೊಡಿಸುತ್ತಿದ್ದರು. ನಮ್ಮ ಸೋದರತ್ತೆಯ ಮದುವೆಯಾದ ಮೇಲೂ ನಮ್ಮನ್ನು ಕಡೆಗಣಿಸಿ ಅವರನ್ನು ಪುರಸ್ಕರಿಸುವ ಅಪ್ಪನ ಮನೋವೃತ್ತಿ ಮುಂದುವರೆಯಿತು ಎಂದು ನೆನಪಿಸಿಕೊಳ್ಳುತ್ತಾರೆ. ಅದಕ್ಕೆ ನಮ್ಮ ತಾಯಿ, ಅಣ್ಣ-ತಮ್ಮಂದಿರು, ನಾನು ತುಟಿ ಬಿಚ್ಚುತ್ತಿರಲಿಲ್ಲ. ಮನೆತನದ ಹೆಣ್ಣುಮಕ್ಕಳು ಸುಖವಾಗಿರಲೆಂಬುದು ಎಲ್ಲರ ಆಶಯವಾಗಿರುತ್ತದೆ. ಅದಕ್ಕೆ ನಮ್ಮ ತಂದೆ, ಚಿಕ್ಕಪ್ಪಂದಿರು ಮತ್ತು ನಾವೆಲ್ಲರು ಹೊರತಾಗಿರಲಿಲ್ಲ ಎನ್ನುತ್ತಾರೆ.

ಡಾ. ವೆಂಕಟೇಶ್ವರರಾವ ಗಂಡುಮಕ್ಕಳಿಗಿಂತ ಹೆಚ್ಚಾಗಿ ಹೆಣ್ಣುಮಕ್ಕಳನ್ನು ಗೌರವಿಸಿ ಆದರಿಸುತ್ತಿದ್ದರು. ಅದರಂತೆ ಪೂರ್ಣಿಮಾ ತಂದೆಗೆ ಅಚ್ಚುಮೆಚ್ಚು. ಗಂಡುಮಕ್ಕಳು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸದಿದ್ದಾಗ ಸಿಟ್ಟು ಮಾಡುತ್ತಿದ್ದರು. ತಂದೆ ಅವರನ್ನು ಜರೆದರೆ ಅಣ್ಣಂದಿರ ಸಿಟ್ಟು ಪೂರ್ಣಿಮಾಳೆಡೆಗೆ ತಿರುಗುತ್ತಿತ್ತು. ವಿನಾಕಾರಣ "ನೀನು ಅತ್ತೆಯಂತಿರುವೆ" ಎಂಬ ಕುಹಕ ನುಡಿ ಪೂರ್ಣಿಮಾ ಕೇಳಬೇಕಾಗುತ್ತಿತ್ತು. ಬಾಲ್ಯದಿಂದ ಇಲ್ಲಿಯವರೆಗೂ ನನಗೂ ಮತ್ತು ನನ್ನ ಅಣ್ಣಂದಿರಿಗೂ ಅಷ್ಟಕಷ್ಟೇ ಸಂಬಂಧವಿದೆ. ವಯಸ್ಸಿನಲ್ಲಿ ನನಗೂ ಅವರಿಗೂ ಕ್ರಮವಾಗಿ ೧೦-೦೯ ವರ್ಷಗಳ ಅಂತರವಿದೆ. ಮಾನಸಿಕವಾಗಿಯೂ ಅದೇ ರೀತಿಯ ಅಂತರವನ್ನು ಇವತ್ತಿನವರೆಗೂ ಕಾಪಾಡಿಕೊಂಡು ಬಂದಿದ್ದಾರೆ. "ನಾನು ಐದನೆಯ ತರಗತಿಗೆ

ಬರುವಾಗಲೇ ಅಣ್ಣಂದಿರು ನಮ್ಮಿಂದ ಅವರ ಉನ್ನತ ವ್ಯಾಸಂಗಕ್ಕಾಗಿ ದೂರವಾದರು. ಆಮೇಲೆ ಅವರು ಪ್ರೀತಿಸುವ ಹುಡುಗಿಯರು ಪುಣೆಯಲ್ಲಿದ್ದುದರಿಂದ ಪುಣೆಗೆ ಉದ್ಯೋಗಕ್ಕಾಗಿ ಹೋದರು. ನಾನು ಜಾರ್ಜ್ ಜೊತೆ ಅಂತರ್‌ಜಾತಿ ವಿವಾಹವಾದ ಮೇಲಂತೂ ರಕ್ತಸಂಬಂಧಕ್ಕೆ ಎಳ್ಳು ನೀರು ಬಿಟ್ಟಿದ್ದಾರೆ. ಇತರ ಹೆಣ್ಣುಮಕ್ಕಳಂತೆ ನನಗೆ ತಂದೆ ತಾಯಿಗಳಿಂದ ಅತಿ ಮುದ್ದು ಸಿಗಲಿಲ್ಲ. ಅಣ್ಣ ತಮ್ಮಂದಿರು ರಕ್ತಸಂಬಂಧಗಳೇ ಹೊರತು ಸುಖ-ದುಃಖಗಳಲ್ಲಿ ಎಂದೂ ಭಾಗಿಯಾದವರಲ್ಲ"ವೆಂದು ಗದ್ಗದಿತರಾಗಿ ನೋವು ವ್ಯಕ್ತಪಡಿಸುತ್ತಾರೆ.

ಪ್ರೇಮವಿವಾಹ:

ಈ ಮಧ್ಯ ದಿನಾಂಕ ೦೭.೦೪.೧೯೮೮ರಲ್ಲಿ ಬೀದರಿನ ಜಾರ್ಜ್ ಕ್ರಿಶ್ಚಿಯವರೊಂದಿಗೆ ಪ್ರೇಮವಿವಾಹ ಜರುಗಿತು. ಇದಕ್ಕೆ ಕುಲಕರ್ಣಿ ಕುಟುಂಬದವರ ಸಹಮತಿ ಇರಲಿಲ್ಲ. ಎಲ್ಲರು ವಿರೋಧಿಸಿದರು. ಆದರೆ ಜಾರ್ಜ್ ಮನೆಯವರೆಲ್ಲರ ಒಪ್ಪಿಗೆಯಿತ್ತು. ಮೊದಲಿನಿಂದಲೂ ಜಾರ್ಜ್ ಕುಟುಂಬದವರಿಗೆ ನಮ್ಮ ಮದುವೆ ವಿಷಯ ತಿಳಿದಿತ್ತು. ಜಾರ್ಜ್ ಸ್ನೇಹಿತರೊಬ್ಬರ ಸಹಾಯದಿಂದ ಹೈದರಾಬಾದಿನ ಕಾಚಿಗುಡಾ ಕಲ್ಯಾಣ ಮಂಟಪದಲ್ಲಿ ಆರ್ಯ ಸಮಾಜದ ಪದ್ಧತಿಯಂತೆ ನಮ್ಮ ಮದುವೆ ಜರುಗಿತು. 'ನನ್ನ ರಕ್ತಸಂಬಂಧಿಗಳ ಹೊರತಾಗಿ ಉಳಿದವರೆಲ್ಲರು ನಮ್ಮ ಮದುವೆಯಲ್ಲಿ ಭಾಗವಹಿಸಿ ಆಶೀರ್ವದಿಸಿದ್ದರು' ಎನ್ನುತ್ತಾರೆ.

'ಏಲೆ ಕೆಂಪು ತಾರೆ ।
ನನ್ನ ಮನಿತನಕ ಬಾರೆ ।
ನೀ ಬಾರದೇ ಹೋದರೆ ನಾ ಕೆರೆ ಬಾವಿ ಹಾರೆ'

ಎಂಬ ಒಲವಿನ ಹಾಡು ಹೇಳುತ್ತಿದ್ದ ಜಾರ್ಜ್‌ಗೆ ಒಲಿದುಬಂದದ್ದು ಅಪ್ಪಟ ಸುಂದರ ಚಲುವೆ. ಇವರಿಬ್ಬರ ಜೋಡಿಯನ್ನು ನೋಡಿದ್ದ ಜಾರ್ಜ್ ರಕ್ತಸಂಬಂಧಿಗಳೆಲ್ಲ ಮೇಲಿಂದ ಮೇಲೆ 'ಧಿಟ್ಟಿ' ಇಳಿಸಲು (ದೃಷ್ಟಿ ತೆಗೆಯಲು) ಹೇಳುತ್ತಿದ್ದರಂತೆ!

ದಾಂಪತ್ಯ ಜೀವನ:

ದಾಂಪತ್ಯ ಜೀವನವೆಂದರೆ ಜೊತೆಗೂಡಿ ಬಾಳುವುದು. ಪರಸ್ಪರ ಸುಖ ದುಃಖಗಳನ್ನು ಹಂಚಿಕೊಳ್ಳುತ್ತ ಜೊತೆಯಾಗಿರುವುದು. ವೈಯಕ್ತಿಕ ಹಿತಾಸಕ್ತಿಯನ್ನು ಮರೆತು ಒಂದಾಗಿರುವುದು. ವ್ಯಕ್ತಿಗತ ನೆಲೆಯಲ್ಲಿ ಕೆಲವೊಂದು ನಿಬಂಧನೆಗಳಿದ್ದರೂ, ಬೇರೆ ಬೇರೆ ನಿಲುವುಗಳಿದ್ದರೂ ಮಾನವೀಯತೆಗೆ ಭಂಗಬರದಂತೆ ಜೀವನ ಪರ್ಯಂತ ಜೊತೆಯಾಗಿರುವುದು ಅವಶ್ಯಕವಾಗಿರುತ್ತದೆ. ಒಂದು ರೀತಿಯಲ್ಲಿ ಜೋಡಿ ಎತ್ತುಗಳ ತಲಾರಿ ಇದ್ದ ಹಾಗೆ. ನಾನು ನಿನಗಾಗಿ. ನೀನು ನನಗಾಗಿ. ನಾವಿಬ್ಬರೂ ಕುಟುಂಬಕ್ಕಾಗಿ, ಸಹಚರ ಜೀವನ ಧರ್ಮ ಪಾಲಿಸುವುದು. ಈ ರೀತಿಯ ಸಾರ್ವತ್ರಿಕ ತತ್ತ್ವವನ್ನು ಮನನ ಮಾಡಿಕೊಳ್ಳುತ್ತ ಮನೆತನದ ಹಿತಾಸಕ್ತಿಯ ಜೊತೆಗೆ ಸಮಾಜದೊಂದಿಗೆ ಸಹಜೀವನ ನಡೆಸುವುದು. ಎಲ್ಲೂ, ಯಾವುದೇ ಸಂದರ್ಭದಲ್ಲಿ, ಯಾರಿಗೂ ಕೇಡು ಬಯಸದೆ ಸರ್ವರ ಒಳಿತನ್ನು ಚಿಂತಿಸುವುದು. ಸರ್ವರ ಹಿತಚಿಂತನೆಗೆ ಅನುಗುಣವಾಗಿ ನಡೆಯಲ್ಲಿ ನುಡಿಯನ್ನು, ನುಡಿಯಲ್ಲಿ ನಡೆಯನ್ನು ಸಮಾವೇಶಗೊಳಿಸುವುದು. ಜೀವನದಲ್ಲಿ ವೈಯಕ್ತಿಕತೆ ಮರೆತು ಸಾರ್ವತ್ರಿಕ ಜೀವನದಲ್ಲಿ ಸಹವರ್ತಿ ಜೀವನ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ಮಾನವೀಯ ಧರ್ಮವೂ ಹೌದು. ಮನುಷ್ಯತ್ವ ಪ್ರಮುಖ ಗುಣಲಕ್ಷಣವೂ ಆಗಿರುತ್ತದೆ. ಇದನ್ನು ಯಾರು ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೆಯೊ ಅವರು ಸಮಾಜಕ್ಕೆ ಮಾದರಿಯಾಗಿರುತ್ತಾರೆ.

ದಿವಂಗತ ಜಾರ್ಜ್ ಕ್ರಿಸ್ಟಿಯವರು ಕ್ರಿಶ್ಚಿಯನ್ ಆಗಿದ್ದರೂ ಪತ್ನಿ ಶ್ರೀಮತಿ ಪೂರ್ಣಿಮಾ ಅವರ ರಕ್ತಗತ ಮನೋಭೂಮಿಕೆಗೆ ಧಕ್ಕೆ ಬರದಂತೆ ನಡೆದುಕೊಳ್ಳುತ್ತಿದ್ದರು. ಪುರುಷತ್ವದ ಅಹಂಮಿಕೆಯಿಂದ ಅವರು ದೂರನಿಂತು ಪತ್ನಿಯ ಸ್ವಾತಂತ್ರ್ಯಕ್ಕೆ ಚ್ಯುತಿಯಾಗದಂತೆ ಜೀವಿಸಿದ್ದರು. ಹತ್ತು ವರ್ಷಗಳ ಕಾಲವೂ ಪರಸ್ಪರ ಹೊಂದಾಣಿಕೆಯಿಂದಿದ್ದರು. ಹೊಂದಾಣಿಕೆ ಇಲ್ಲದೆ ನೂರು ವರ್ಷ ಬಾಳುವುದಕ್ಕಿಂತ ಹದವರಿತು ಬಾಳಿದ ಹತ್ತು ವರ್ಷದ ನನ್ನ ದಾಂಪತ್ಯ ಜೀವನವು ಉಸುರಿನ ಕೊನೆಗಾಗುವಷ್ಟು ಸಿಹಿನೆನಪುಗಳನ್ನು ಕೊಟ್ಟಿದೆ ಎನ್ನುತ್ತಾರೆ.

ಹಾಗೆ ನೋಡಿದರೆ ಭಾರತೀಯ ಪರಂಪರೆಯಲ್ಲಿ ಪತ್ನಿಯ ಅಸ್ತಿತ್ವಕ್ಕೆ ಬೆಲೆಯಿಲ್ಲ. ಮದುವೆಯಾದ ತಕ್ಷಣ ಗಂಡನ ಧರ್ಮವೇ ಪತ್ನಿಯ ಧರ್ಮವಾಗಿರುತ್ತದೆ. ಗಂಡಸ್ಸಿನ ಜಾತಿಯೇ ಆತನ ಹೆಂಡತಿಗೂ ಅನ್ವಯವಾಗುತ್ತದೆ. ಇದೊಂದು ಅಘೋಷಿತ ಸಾಮಾಜಿಕ ಕಟ್ಟಳೆಯಾಗಿ ನಮ್ಮಲ್ಲಿ ಚಲಾವಣೆಯಲ್ಲಿದೆ. ಆದರೆ ಜಾರ್ಜ್ ಕ್ರಿಶ್ಟಿಯವರು ತನ್ನಂತೆಯೇ ಪತ್ನಿ ಪೂರ್ಣಿಮಾ, ಅವರ ನಂಬಿಕೆಗಳನ್ನು ಜೀವನಪರ್ಯಂತ ಪ್ರೀತಿಸಿದರು. ಪತ್ನಿಯ ಜಾತೀಯತೆ, ದೈವೀಶ್ರದ್ಧೆ, ಧಾರ್ಮಿಕ ರೀತಿ-ರಿವಾಜುಗಳನ್ನು ಗೌರವಿಸಿದರು. ಹಿಂದು ಪ್ರಣೀತ ಹಬ್ಬ ಹುಣ್ಣಿಮೆಗಳಂದು ಪಾಪನಾಶ ದೇವಾಲಯ, ನರಸಿಂಹ ಝರಣಿ ದೇವಾಲಯಗಳಿಗೆ ಖುದ್ದಾಗಿ ಕರೆದುಕೊಂಡು ಹೋಗಿ ಪೂಜೆ ಸಲ್ಲಿಸುವಂತೆ ಒತ್ತಾಯ ಮಾಡುತ್ತಿದ್ದರು. ಇಂತಹ ದಿನಗಳಂದು ನಿಮ್ಮ ಹಬ್ಬವಿದೆ. ಅದಕ್ಕೆ ಅಣಿಯಾಗುವಂತೆ ಪ್ರೋತ್ಸಾಹಿಸುತ್ತಿದ್ದರು ಎಂದು ಪೂರ್ಣಿಮಾ ನೆನಪಿಸಿಕೊಳ್ಳುತ್ತಾರೆ.

ಪೂರ್ಣಿಮಾ ಮೂಲತಃ ಹಿಂದೂ ಬ್ರಾಹ್ಮಣ ಜಾತೀಯತೆ ಹೊಂದಿದ್ದರು. ಆದರೆ ತನ್ನದು ಶ್ರೇಷ್ಠ ಕುಟುಂಬ. ಇನ್ನುಳಿದವರೆಲ್ಲ ಕೀಳೆಂದು ತಿಳಿದುಕೊಂಡವರಲ್ಲ. ಮನುಷ್ಯತ್ವ, ಮಾನವೀಯತೆ ಎಲ್ಲ ಜಾತಿಗಳಿಗಿಂತ ಮಿಗಿಲು ಎಂಬುವುದನ್ನು ಅರ್ಥ ಮಾಡಿಕೊಂಡಿದ್ದರು. ಮಾನವೀಯತೆಯನ್ನು ಮೀರಿನಿಲ್ಲುವ ಜಾತಿಯ ಸೋಂಕಿಗೆ ತಾನೆಂದೂ ಅಂಟಿಕೊಳ್ಳಬಾರದು ಎಂದರಿತಿದ್ದರು. ಗಂಡನ ಜೊತೆಯಲ್ಲಿದ್ದಾಗಲೂ ಹಣೆಗೆ ಕುಂಕುಮ ಇಟ್ಟುಕೊಳ್ಳುತ್ತಿದ್ದೆ. ಈಗಲೂ ಕುಂಕುಮ ಧರ್ಮವನ್ನು ಪಾಲಿಸುತ್ತಿದ್ದೇನೆ. ಸಹವರ್ತಿಗಳ ಜೀವನಧರ್ಮವನ್ನು ಗೌರವಿಸುತ್ತೇನೆ. ಆದರೆ ಇಂದಿನ ಸಮಾಜವು ನನಗೆ ಹಿಂದೂ ಹಬ್ಬಗಳಿಗಿಂತ ಹೆಚ್ಚಾಗಿ ಕ್ರಿಸ್ಮಸ್‌ಗೆ ಜಾಸ್ತಿ ಶುಭಾಶಯಗಳನ್ನು ಸಲ್ಲಿಸುತ್ತಾರೆ ಎಂದು ತಮ್ಮ ಅನುಭವಗಳನ್ನು ನಿವೇದಿಸಿಕೊಂಡಿದ್ದಾರೆ.

ಗೃಹಸ್ಥ ಜೀವನ:

ಪ್ರೌಢ ಶಾಲೆಯಲ್ಲಿ ಓದುತ್ತಿದ್ದ ಆತ್ಮೀಯ ಗೆಳೆಯನೊಂದಿಗೆ ವಿವಾಹವಾಗಲು ನಿರ್ಧರಿಸಲಾಗಿತ್ತು. ಅಣ್ಣಂದಿರು ಉದ್ಯೋಗವನ್ನರಸಿ ಪುಣೆಗೆ ಹೋದಮೇಲೆ ಹುಡುಗರ ಕೀಟಲೆಗಳನ್ನು ಜಾರ್ಜ್ ನಿಯಂತ್ರಿಸಿ ಮಾನಸಿಕ ನೆಮ್ಮದಿಗೆ ಕಾರಣರಾಗಿದ್ದರಿಂದ ಸಹಜವಾಗಿ ಇಬ್ಬರ ನಡುವೆ ಒಲುಮೆ ಬೆಳೆದಿತ್ತು.

ಜಾರ್ಜ್ ತಂದೆ ಕ್ರಿಸ್ತಿ ಧರ್ಮಪ್ಪನವರು ಅಕಾಲಿಕ ಸಾವಿಗೆ ತುತ್ತಾದರು. ಅವರೊಬ್ಬ ರಾಜಕೀಯ ಧುರೀಣರಾಗಿದ್ದರು. ಜೊತೆಗೆ ಗುತ್ತಿಗೆದಾರರು ಹೌದು. ಹಳ್ಳದಕೇರಿಯಲ್ಲಿ ಸಾಕಷ್ಟು ಹೊಲವಿತ್ತು. ರೈತರಾಗಿದ್ದರು. ಇಟ್ಟಂಗಿ ಭಟ್ಟಿಯಿತ್ತು. ನಾಲ್ಕು ಜನ ಅಣ್ಣ ತಮ್ಮಂದಿರ ದೊಡ್ಡ ಕುಟುಂಬ. ನಾಲ್ವರು ಅಣ್ಣ ತಮ್ಮಂದಿರು, ಅವರ ಮಕ್ಕಳು ಸೇರಿ ಆ ಕುಟುಂಬದ ಸದಸ್ಯರ ಸಂಖ್ಯೆ ನಲವತ್ತೈದು. ಅವರೆಲ್ಲರು ಬೇರೆ ಬೇರೆ ಆಗಿದ್ದರೂ ಮನೆಯ ಮುಖ್ಯದ್ವಾರ ಒಂದೇ ಆಗಿತ್ತು. ಎಲ್ಲರ ನಡುವೆ ಆತ್ಮೀಯ ಸಂಬಂಧವಿತ್ತು. ಮನೆಯ ಹಿರಿಯರು ಸೇರಿದಂತೆ ಯಾರಾದರೂ ಹಣ್ಣು, ತರಕಾರಿ, ತಿಂಡಿಪದಾರ್ಥಗಳನ್ನು ಮನೆಗೆ ತಂದರೆ ಎಲ್ಲರೊಂದಿಗೆ ಹಂಚಿ ತಿನ್ನುತ್ತಿದ್ದರು. ಅವರೆಲ್ಲರ ಮಧ್ಯದಲ್ಲಿ ಅವಿನಾಭಾವ ಸಂಬಂಧವಿತ್ತು. ಮಾವ ಸತ್ತ ಮೇಲೆ ಮನೆತನದ ಎಲ್ಲ ಜವಾಬ್ದಾರಿ ಜಾರ್ಜ್ ಮೇಲಿತ್ತು. 'ಮದುವೆಯಾಗಿ ಆ ಮನೆಗೆ ಹೋದಾಗ ಎಲ್ಲವು ಹೊಸದು. ಮೂವರು ಮಾವಂದಿರು. ನಾಲ್ವರು ಅತ್ತೆಯಂದಿರು. ಹನ್ನೊಂದು ಜನ ನಾದಿನಿಯರು. ೧೫ ಜನ ಮೈದುನರು. ಸಣ್ಣ ಕುಟುಂಬದಿಂದ ಹೋದವಳಿಗೆ ಅವರ ಒಳಮನಸ್ಸುಗಳಲ್ಲಿನ ಜೀವನಾನುಭವ ಕಂಡು ಆಶ್ಚರ್ಯವಾಯಿತು' ಎನ್ನುತ್ತಾರೆ.

ನೀರು ತಂದದ್ದು:

ಮದುವೆಯಾದಾಗ ಹೊಸದರಲ್ಲಿ ಅತ್ತೆ ವಸಂತಾ ಅವರೊಂದಿಗೆ

ಪೂರ್ಣಿಮಾ ಸಾರ್ವಜನಿಕ ನಲ್ಲಿಯಿಂದ ನೀರು ತರಲು ಹೋಗಿದ್ದರು. ದೊಡ್ಡ ಕುಟುಂಬವಾಗಿದ್ದರೂ ಮನೆಯಲ್ಲಿ ನೀರಿನ ಸೌಲಭ್ಯವಿರಲಿಲ್ಲ. ಎಲ್ಲರು ಸಾರ್ವಜನಿ ನಲ್ಲಿಗಳನ್ನು ಅವಲಂಬಿಸಿದ್ದರು. ಕೊಡ ಹೊತ್ತು ತರುತ್ತಿದ್ದ ಪೂರ್ಣಿಮಾರನ್ನು ದೊಡ್ಡಮಾವ ಜೆಟ್ಟೆಪ್ಪ ನೋಡಿದರು. ನೇರವಾಗಿ ಮನೆಗೆ ಹೋಗಿ ಎಲ್ಲರನ್ನು ಕರೆದು ಪಂಚೇತಿ ಮಾಡಿದರು. 'ಮನೆಯಲ್ಲಿ ಮೂವತ್ತ-ನಲ್ವತ್ತ ಮಂದಿ ಇದ್ದೀರಿ ನಿಮಗೇನ್ ಧಾಡಿ ಬಡ್ದೂದ. ಹೊಸದಾಗಿ ಬಂದಾಕಿಗಿ ನೀರಿಗಿ ಕಳಿಸಿದ್ದೀರಿ ನಾಚ್ಕೆಯಾಗ್ಬೇಕು. ಇವತ್ತ ತಂದಿರುವ ನೀರಿನ ಕೊಡವೇ ಕೊನೆಯದು. ಇನ್ಮುಂದ ಅವಳೆಂದು ಹೊಸ್ತಿಲು ದಾಟಬಾರ್ದು. ಇನ್ನೊಮ್ಮೆ ಆಕೆ ನೀರು ತಂದದ್ದು ಏನಾದರೂ ಕಂಡುಬಂದರೆ ನಿಮ್ಮನ್ನೆಲ್ಲ ಕಡ್ದು ಬುಟ್ಟಿ ತುಂಬತೀನಿ' ಎಂದು ಎಚ್ಚರಿಕೆ ಕೊಟ್ಟಿದ್ದರು ಅವರ ಕಟ್ಟಪ್ಪಣೆ ಕೆಲಸ ಮಾಡಿತು. ನಾನೆಂದು ಮುಂದೆ ನೀರು ತರುವ ಪ್ರಸಂಗ ಬರಲಿಲ್ಲವೆಂದು ತುಂಬಾ ಅಕ್ಕರೆಯಿಂದ ಮಾವನವರನ್ನು ಸ್ಮರಿಸಿಕೊಳ್ಳುತ್ತಾರೆ

ಕೃಷಿಗೆಲಸ:

ಮನೆಗೆಲಸದ ಜೊತೆಗೆ ಪೂರ್ಣಿಮಾ ಹೊಲಗೆಲಸವನ್ನು ಮಾಡಿದ್ದುಂಟು ಗಂಡ ಮತ್ತು ಅತ್ತೆ ವಸಂತಾ ಅವರೊಂದಿಗೆ ಹೊಲದಲ್ಲಿ ನಿಂತು ಕೆಲ ಮಾಡಿದ್ದು ಮರೆಯಲಾಗದ ಸಂಗತಿಯಾಗಿದೆ. ಬೆಳ್ಳಕ್ಕಿಯಂತಿದ್ದ, ಸಪೂರ ದೇಹ ಹೊಂದಿದ್ದ ಪೂರ್ಣಿಮಾ ಕೆಸರುಗದ್ದೆಯಲ್ಲಿ ನಿಂತು ಭತ್ತದ ನಾಟಿ ಮಾಡುತ್ತಿದ್ದರು ಗೋಧಿ ಸಾಲುಗಳ ನಡುವೆ ಬೆಳೆಯುತ್ತಿದ್ದ ಮೆಂತ್ಯಪಲ್ಲ್ಯವನ್ನು ಕಿತ್ತುವುದು ನೀರಿನಲ್ಲಿ ತೊಳೆದು ಸೂಡು ಕಟ್ಟುವುದು; ಮಾರ್ಕೆಟ್‌ಗೆ ಕಳುಹಿಸಿ ಕೊಡುವುದು ಕಳವೆ ಭಣಮಿ ಹಚ್ಚುವುದನ್ನು ನಿಯಮಿತವಾಗಿ ಮಾಡುತ್ತಿದ್ದರು. ಇದೆಲ್ಲವನ್ನ ನೋಡಲು ಅಕ್ಕಪಕ್ಕದ ಹೊಲದವರು ಬರುತ್ತಿದ್ದರಂತೆ! ಆ ವೇಳೆಯಲ್ಲಿ ಪೂರ್ಣಿಮಾ ಎಲ್ಲರ ನಾಲಿಗೆಯ ವಸ್ತುವಾಗಿದ್ದರು. ಸ್ಥಿತಿವಂತರ ಮನೆಯಿಂದ ಬಂದರು ಕಲ್ಯಾಣನಾಡಿನ ಕಾಯಕಜೀವಿಗಳ ವ್ರತಕ್ಕೆ ಭಂಗ ತಂದವರಲ್ಲ. ಒಟ್ಟಾರೆ ಪೂರ್ಣಿಮಾ ಗೃಹಕೃತ್ಯ ಮತ್ತು ಕೃಷಿಗೆಲಸದ ಕೃರ್ತತ್ವಶಕ್ತಿಯ ಕೇಂದ್ರವಾಗಿದ್ದರು ಎಂದು ಅತಿಶಯೋಕ್ತಿಯಾಗಲಾರದು.

ರಾಜಕೀಯವಾಗಿ ಗುರುತಿಸಿಕೊಂಡಿದ್ದ ಕ್ರಿಸ್ಟಿಯವರ ಮನೆಗೆ ಕರ್ನಾಟಕದ ಮುಖ್ಯಮಂತ್ರಿ ಆಗಿದ್ದ ದೇವರಾಜ ಅರಸು ಬಂದಿದ್ದರು ಎನ್ನುವ ವಿಷಯ ರಾಜಕೀಯವಾಗಿ ಮಹತ್ವ ಪಡೆದುಕೊಳ್ಳುತ್ತದೆ. ಕ್ರಿಸ್ಟಿಯವರ ವ್ಯಕ್ತಿತ್ವ ಹಾಗೂ ಸಾಮಾಜಿಕ ಸಂಬಂಧಗಳಲ್ಲಿ ಅವರಿಗಿರುವ ಸ್ಥಾನಮಾನವನ್ನು ತಿಳಿಸಿಕೊಡುತ್ತದೆ.

ಕಲಿಕೆಗೆ ಅಡ್ಡಿಯಾಗಲಿಲ್ಲ:

ಪೂರ್ಣಿಮಾರನ್ನು ಮದುವೆ ಮಾಡಿಕೊಂಡಿದ್ದರೂ ಹೆಂಡತಿಯ ಮೊದಲ ಮನದಾಸೆಯಾಗಿದ್ದ ಶಿಕ್ಷಣಕ್ಕೆ ಚ್ಯುತಿ ಬರಬಾರದೆಂಬುದು ಜಾರ್ಜ್ ಕನಸಾಗಿತ್ತು. ಅದನ್ನು ನೆರವೇರಿಸಿಕೊಡಲು ಕಟಿಬದ್ಧರಾಗಿದ್ದರು. ಇಂಜಿನಿಯರ್ ಆಗಬೇಕೆಂಬ ಪೂರ್ಣಿಮಾ ಆಶಯಕ್ಕೆ ಬೆನ್ನೆಲುಬಾಗಿ ನಿಂತವರು ಜಾರ್ಜ್. ಬೀದರಿನ ಗುರುನಾನಕ್ ದೇವ ಇಂಜನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ಕೋರ್ಸ್‌ನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಆದರೆ ದೈವೀಚ್ಛೆಯೇ ಬೇರೆಯಾಗಿತ್ತು. ೧೯೮೮ರಲ್ಲಿ ಬೀದರನಲ್ಲಿ ಸಿಖ್‌ರ ವಿರುದ್ಧ ಬಹುದೊಡ್ಡ ಪ್ರಮಾಣದಲ್ಲಿ ದಂಗೆಯಾಯಿತು. ನಾಲ್ಕೈದು ವಿದ್ಯಾರ್ಥಿಗಳು ಸಾವನ್ನಪ್ಪಿದರು. ಅದಕ್ಕೆ ಪ್ರತಿಯಾಗಿ ಮಿನಿ ದೀಪಕ್ ಚಿತ್ರಮಂದಿರದಲ್ಲಿ ದಿಲ್ ಚಲನಚಿತ್ರ ನಡೆಯುತ್ತಿದ್ದಾಗ ಬಾಂಬ್ ಸ್ಫೋಟ ಸಂಭವಿಸಿತು. ಇದು ಸಿಖ್‌ರ ಸಾವಿಗೆ ಪ್ರತೀಕಾರವೆಂದು ಕೆಲವರು ಆ ಸಂದರ್ಭದಲ್ಲಿ ಅಭಿಪ್ರಾಯಪಟ್ಟಿದ್ದರು. ಅದು ಏನೇ ಇರಲಿ ಕೆಲವು ವರ್ಷಗಳ ವರೆಗೆ ಬೀದರ ಭಯಗ್ರಸ್ತ ನಗರವಾಗಿತ್ತು. ಸಿಖ್ ವಿದ್ಯಾರ್ಥಿಗಳ ಕುಚೇಷ್ಟೆಗೆ ಕಡಿವಾಣ ಬಿದ್ದಿದ್ದಂತು ಸತ್ಯ.

ಒಂದೊಮ್ಮೆ ದಿನ ಸಿಖ್ ವಿದ್ಯಾರ್ಥಿಯೊಬ್ಬನನ್ನು ಜನರು ಅಟ್ಟಾಡಿಸಿ ಹೊಡೆದು ತಲೆಯ ಮೇಲೆ ದೊಡ್ಡ ಬಂಡೆಗಲ್ಲು ಹಾಕಿ ಜಜ್ಜಿದ್ದರು. ಅದನ್ನು ಕಣ್ಣಾರೆ ಕಂಡ ಅತ್ತೆ ವಸಂತಾರವರು ಇಂತಹ ಭಯಭೀತ ವಾತಾವರಣದಲ್ಲಿ ಮುದ್ದಾದ ಸೊಸೆ ಸಿಖ್‌ರು ಸ್ಥಾಪಿಸಿದ ಕಾಲೇಜಿಗೆ ಹೋಗುವುದೇ ಬೇಡವೆಂದು

ಹಠಹಿಡಿದರು. ಅದಕ್ಕೆ ಜಾರ್ಜ್ ಮತ್ತು ಪೂರ್ಣಿಮಾ ಸಮ್ಮತಿಸಿದರು. ಆದರೆ ಓದಿಸುವ ಮತ್ತು ಓದುವ ಮನೋಭಿಲಾಸೆಗೆ ಭಂಗ ಬರಲಿಲ್ಲ.

ನಾರ್ಮಾ ಫ್ರೆಂಡಿಚ್ ಕಾಲೇಜಿನಲ್ಲಿ ಬಿ.ಎ.ಗೆ ಪ್ರವೇಶ ಪಡೆಯಲಾಯಿತು. ಮೊದಲ ವರ್ಷ ಕನ್ನಡ, ಇಂಗ್ಲಿಷ್, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮತ್ತು ಇತಿಹಾಸ ವಿಷಯಗಳನ್ನಾಯ್ದುಕೊಂಡು ಕಲಿಕೆಯಲ್ಲಿ ಮಗ್ನರಾದರು. ಮುಂದಿನ ವರ್ಷ ಕರ್ನಾಟಕ ಕಾಲೇಜಿಗೆ ತಮ್ಮ ಪ್ರಥಮ ವರ್ಷದ ದಾಖಲತಿಯನ್ನು ವರ್ಗಾಯಿಸಿಕೊಂಡರು. ಇವರಲ್ಲಿನ ಪ್ರತಿಭೆ, ಕಲಿಕಾಂಶ ಚಟುವಟಿಕೆಗಳಿಗೆ ಪ್ರೊ. ವಿಜಯಕುಮಾರ ಗಂಗೂ ಮತ್ತು ಪ್ರೊ. ಧರ್ಮಪಾಲ್‌ರು ಸಹಾಯಕವಾಗಿದ್ದರು. ಪೂರ್ಣಿಮಾರ ಓದುವ ಹವ್ಯಾಸಕ್ಕೆ ಆ ಉಪನ್ಯಾಸಕರಿಬ್ಬರು ತಮ್ಮ ಹೆಸರಿನಲ್ಲಿ ಗ್ರಂಥಾಲಯದಿಂದ ಪಠ್ಯಪುಸ್ತಕ ಮತ್ತು ಸಾಂದರ್ಭಿಕ ಗ್ರಂಥಗಳನ್ನು ಎರವಲು ಪಡೆದು ತನಗೆ ಓದಲು ನೀಡುತ್ತಿದ್ದರು. ಆ ಇಬ್ಬರು ಮಹನೀಯರ ಸಹಕಾರದಿಂದ ಜ್ಞಾನಕ್ಷಿತಿಜ ವಿಸ್ತರಿಸಿತು ಎಂದು ಹೆಮ್ಮೆಯಿಂದ ಹೇಳುತ್ತಾರೆ.

ಮನೆಗೆಲಸ ಮುಗಿಸುತ್ತ ಕಲಿಕೆ:

ಪೂರ್ಣಿಮಾ ಪ್ರತಿದಿನ ನಸುಕಿನಲ್ಲಿ ನಾಲ್ಕುವರೆ ಗಂಟೆಗೆ ಏಳುವ ಹವ್ಯಾಸವನ್ನಿಟ್ಟುಕೊಂಡಿದ್ದರು. ಶೌಚಾದಿ ಕ್ರಿಯೆಗಳನ್ನು ಮುಗಿಸಿಕೊಂಡು ಜಾರ್ಜ್ ಕುಟುಂಬದ ೧೪ ಜನರಿಗಾಗುವಷ್ಟು ಅಡುಗೆ ಮಾಡಿಟ್ಟು ಮುಂಜಾನೆ ೭.೩೦ಕ್ಕೆ ಗಂಡನ ಸಹಾಯದಿಂದ ಕಾಲೇಜಿಗೆ ಹಾಜರಾಗುತ್ತಿದ್ದರು. ದಿನಾಲು ಮನೆಯಲ್ಲಿ ಅಡುಗೆ ಮಾಡುವುದು ಇವರ ಜವಾಬ್ದಾರಿಯಾಗಿತ್ತು. ಒಂದು ವೇಳೆ ಅಡುಗೆ ಮಾಡದಿದ್ದರೆ ನನಗೆ ಕಾಲೇಜಿಗೆ ಕಳುಹಿಸುವುದಿಲ್ಲವೇನೋ ಎಂಬ ಅಳುಕು ಅವರ ಮನದಲ್ಲಿತ್ತು. ಆದರೆ ಹಾಗಾಗಲಿಲ್ಲ. ಇವರ ಶಿಕ್ಷಣಕ್ಕೆ ಅವರೆಲ್ಲ ಒತ್ತಾಸೆಯಾಗಿ ನಿಂತರು. ದಿನದಲ್ಲಿ ಎಷ್ಟೇ ಕಷ್ಟವಾದರೂ ಕೆಲಸ ಮಾಡುತ್ತಿದ್ದರು. ಆದರೆ ತಾನು ಕಷ್ಟಪಟ್ಟು ಕೆಲಸ ಮಾಡುತ್ತಿದ್ದೇನೆ ಎಂಬುದು ತೋರಿಸಿಕೊಳ್ಳುತ್ತಿರಲಿಲ್ಲ.

ಪ್ರತಿದಿನ ಕಟ್ಟಿಗೆಯೊಲೆ ಮೇಲೆ ರೊಟ್ಟಿ, ಪಲ್ಯ, ಸಾರು ಮಾಡಿಡುವ ದಿನಚರಿ ಇವರದ್ದಾಗಿತ್ತು. ಮಧ್ಯಾಹ್ನ ಕಾಲೇಜಿನಿಂದ ಮನೆಗೆ ಹೋದ ಮೇಲೆ ಅಡುಗೆ ಇದ್ದರೆ ಊಟ ಮಾಡುತ್ತಿದ್ದರು. ಇಲ್ಲದಿದ್ದರೆ ಮತ್ತೊಮ್ಮೆ ಸ್ವತಃ ಅಡುಗೆ ಮಾಡಿಕೊಂಡು ಒಂದಿಷ್ಟು ತಿನ್ನುತ್ತಿದ್ದರು. ಅದರಲ್ಲಿಯೇ ತೃಪ್ತಿ ಕಾಣುತ್ತಿದ್ದರು. ಯಾರ ಮೇಲೂ ರೇಗಾಡುತ್ತಿರಲಿಲ್ಲ. 'ಇದೆಲ್ಲ ಕೇವಲ ಕಲಿಕೆಗಾಗಿ, ಸ್ವಯಂ ಏಳ್ಗೆಗಾಗಿ, ಆತ್ಮತೃಪ್ತಿಗಾಗಿ' ಎಂದು ಭಾವಿಸಬೇಕಾಗುತ್ತದೆ.

ಒಂದು, ಇವಳೆಂತಹ ತಂದೆ ತಾಯಿಗಳ ಮಗಳು. ಅವರು ಈಕೆಗೆ ಅಡುಗೆ ಮಾಡಲು ಕಲಿಸಿಲ್ಲ. ಸಂಬಂಧಗಳ ಬಗ್ಗೆ ವ್ಯಾಮೋಹವಿಲ್ಲ. ಆತ್ಮಸಂಗಾತವನ್ನೇ ಬಯಸುವ ಸ್ವಾರ್ಥಿಯಾಗಿದ್ದಾಳೆಂದು ಕುಟುಂಬ ಮತ್ತು ಸಮಾಜ ಭಾವಿಸಬಾರದು. ತಂದೆ ತಾಯಿಗಳ ಗೌರವಕ್ಕೆ ಧಕ್ಕೆಯಾಗಬಾರದು. ನನ್ನ ವ್ಯಕ್ತಿತ್ವಕ್ಕೆ ಯಾರೂ ಬೊಟ್ಟು ಮಾಡಿ ತೋರಿಸಬಾರದು ಎಂಬ ಸ್ವಯಂತಿಳುವಳಿಕೆಯಿಂದ ಎಲ್ಲ ಕೆಲಸ ಮಾಡುತ್ತಿದ್ದರು. ಕುಟುಂಬದ ಜವಾಬ್ದಾರಿ ನಿರ್ವಹಣೆಯಲ್ಲಿ ಎಲ್ಲ ವಿಧದ ಕಷ್ಟಗಳನ್ನು ಸಹಿಸಿಕೊಂಡಿದ್ದರು. ದುಡಿಮೆಗಾಗಿಯೇ ಈ ಶರೀರವೆಂಬುವುದನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರು. ನಮ್ಮ ಅಮ್ಮನೂ ಕೂಡ ನಮಗಾಗಿ ನಗುನಗುತ್ತ ಎಲ್ಲ ಕೆಲಸ ಮಾಡುತ್ತಿರಲಿಲ್ಲವೇ? ಎಂದು ನೆನಪಿಸಿಕೊಳ್ಳುತ್ತಿದ್ದರು. ತಾನೆಲ್ಲವನ್ನು ಮಾಡುತ್ತಿದ್ದರೂ ಅದು ಹೊರೆಯಲ್ಲ. ಕುಟುಂಬಕ್ಕೆಂದು ತಿಳಿದಿದ್ದರು. ಆತ್ಮತೃಪ್ತಿಗೆಂದು ಅರಿತಿದ್ದರು.

ಕುಟುಂಬದ ಸದಸ್ಯರು ಸಹ ಪೂರ್ಣಿಮಾ ಕಲಿಕೆಗಾಗಿ ಸಹಕರಿಸಿದರು. ಜಾರ್ಜ್ ತನ್ನ ಬೈಕ್ ಮೇಲೆ ಕಾಲೇಜಿಗೆ ಕರೆದುಕೊಂಡು ಬರುವುದು, ಮತ್ತೆ ಕಾಲೇಜಿನಿಂದ ಮನೆಗೆ ಜೊತೆಯಲ್ಲಿ ಕರೆದುಕೊಂಡು ಹೋಗುವುದನ್ನು ವ್ರತವೆಂಬಂತೆ ಮಾಡುತ್ತಿದ್ದರು. ಅತ್ತೆ ಸೇರಿದಂತೆ ಇತರ ಸದಸ್ಯರು ಸಹ ಎಲ್ಲ ರೀತಿಯಲ್ಲಿ ಸಹಕರಿಸಿದ್ದಾರೆಂಬ ಹೆಮ್ಮೆ ಅವರಲ್ಲಿದೆ.

ಇಂಗ್ಲಿಷ್ ಎಂ.ಎ.:

ಬಿ.ಎ. ಮುಗಿದ ಮೇಲೆ ಪ್ರೊ. ಧನಪಾಲ್ ಮತ್ತು ಪ್ರೊ. ವಿಜಯಕುಮಾರ ಗಂಗೂ ಅವರ ಆಶಯದಂತೆ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಎಂ.ಎ. ಇಂಗ್ಲಿಷ್ ವಿದ್ಯಾಭ್ಯಾಸಗೈಯಲು ಅಣಿಯಾದರು. ಸಿ.ಇ.ಟಿ.ಯಲ್ಲಿ ಮೇರಿಟ್ ಗಳಿಸಿ ದಾಖಲಾತಿ ಮಾಡಿಕೊಂಡರು. ಡಾ. ಉಜ್ವಲಾ ಹಿರೇಮಠ ಆಗ ಆಂಗ್ಲ ವಿಭಾಗದ ಮುಖ್ಯಸ್ಥರಾಗಿದ್ದರು. ಅತ್ಯಂತ ಕಟ್ಟುನಿಟ್ಟಿನ ಮಹಿಳೆಯಾಗಿದ್ದ ಡಾ. ಉಜ್ವಲಾ ಮಹಿಳಾ ವಸತಿ ನಿಲಯದ ವಾರ್ಡನ್ ಕೂಡ ಆಗಿದ್ದರು.

ವಿದ್ಯಾಭ್ಯಾಸದ ವಿಷಯದಲ್ಲಿ ಸಹಪಾಠಿಗಳ ನಡುವೆ ಸ್ಪರ್ಧೆಯಿತ್ತು. ಜ್ಯೋತಿ ಮತ್ತು ಮೀನಾಕ್ಷಿ ಪೂರ್ಣಿಮಾರ ಆತ್ಮೀಯ ಸಹಪಾಠಿಗಳು. ಮಿನಿ ಎಂಬಾಕೆ ತನಗೆಲ್ಲಿ ರ್‍ಯಾಂಕ್ ತಪ್ಪುತ್ತದೊ ಎಂಬ ಅಳುಕಿನಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರ ನಡುವೆ ವೈಮನಸ್ಸು ಹುಟ್ಟುವ ಹಾಗೆ ಸಂಚು ರೂಪಿಸುತ್ತಿದ್ದರು. ಚಾಡಿಚುಗಲಿ ಕೆಲಸದಲ್ಲಿಯೇ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರವರ ಕುಟುಂಬದವರಿಗೆ ಅನಾಮಧೇಯ ಪತ್ರಗಳನ್ನು ಬರೆದು ಮಾನಸಿಕ ಶಾಂತಿ ಕದಡುತ್ತಿದ್ದರು. ಅದಕ್ಕೆ ಕೆಲವರು ಬಲಿಯಾಗಬೇಕಾಯಿತು. ಪೂರ್ಣಿಮಾ ಕೂಡ ಈ ಸಂಚಿಗೆ ಒಳಗಾದವರೇ. ಒಂದಿಷ್ಟು ಮಾನಸಿಕ ನೆಮ್ಮದಿ ಕಳೆದುಕೊಂಡರು. ಆಕೆಯ ನಿಜಸ್ಥಿತಿ ಗೊತ್ತಾಗಲು ಬಹಳ ಸಮಯ ಬೇಕಾಯಿತು.

ಪ್ರಥಮ ವರ್ಷ ಮುಗಿದ ಮೇಲೆ ಪೂರ್ಣಿಮಾ ಬಸುರಿಯಾದರು. ಮಧ್ಯಾವಧಿಯ ವೇಳೆಗೆ ಬಹಳಷ್ಟು ಪಠ್ಯವೂ ಮುಗಿದಿತ್ತು. ವಿದ್ಯಾರ್ಥಿಗಳು ತರಗತಿಯಲ್ಲಿ ಹಾಜರಾತಿ ನೀಡಿ ಗ್ರಂಥಾಲಯ ಇಲ್ಲವೆ ಮನೆಯಲ್ಲಿ ಅಭ್ಯಾಸ ಮಾಡುತ್ತಿದ್ದರು. ಪೂರ್ಣಿಮಾ ಬಸುರಿಯಾಗಿರುವುದರಿಂದ ಮುಖ್ಯಸ್ಥರ ಅನುಮತಿ ಪಡೆದು ಬೀದರಗೆ ಬಂದಿದ್ದರು. ಪರೀಕ್ಷೆಯ ವೇಳೆಗೆ ಹೋದರಾಯಿತೆಂದು ಭಾವಿಸಿದ್ದರು. ಆದರೆ ಯಾರೋ ಒಬ್ಬರ ಕುಟೀಲ ಸಂಚಿಗೆ ಪ್ರೇರಣೆಯಾಗಿ

ಡಾ. ಉಜ್ವಲಾ ಹಿರೇಮಠ ನಿಂತರು. ೪೦ ಗಂಟೆಗಳ ಕಡಿಮೆ ಹಾಜರಾತಿ ನೆಪವೊಡ್ಡಿ ಪರೀಕ್ಷೆಗೆ ಹಾಜರಾಗದಂತೆ ಮಾಡಲು ಯೋಜನೆ ರೂಪಿಸಿದ್ದರು. ಈ ವಿಷಯ ಕುರಿತಂತೆ ಮೀನಾಕ್ಷಿ ಪತ್ರ ಬರೆದು ಪೂರ್ಣಿಮಾಗೆ ತಿಳಿಸಿದರು.

ವಿಷಯ ಗೊತ್ತಾದ ತಕ್ಷಣ ಮೈಯೆಲ್ಲ ಬೆವರು. ಎಂಟು ದಿನಗಳ ಬಾಣಂತಿ ಬೇರೆ. ಮನೆಯವರೆಲ್ಲ ಹೋಗಲಿ ಬಿಡು ನಮಗೆ ಆ ಡಿಗ್ರಿಯೇ ಬೇಡ. ನಿನಗೇನು ಕಡಿಮೆ ಎಂದು ಕಡ್ಡಿ ತುಂಡಾಗುವಂತೆ ಹೇಳಿದರು. ಆದರೆ ಪೂರ್ಣಿಮಾ ಒಪ್ಪಲಿಲ್ಲ. ಯಾರ ಮಾತಿಗೂ ಸೊಪ್ಪು ಹಾಕಲಿಲ್ಲ. ೪೦ ಗಂಟೆಗಳ ಹಾಜರಾತಿ ಹೊಂದಿಸಲು ಬಾಣಂತನವಾದ ೯ನೇ ದಿನಕ್ಕೆ ತರಗತಿಗೆ ಹಾಜರಾದರು. ಮಗುವನ್ನು ನೋಡಿಕೊಳ್ಳಲು ಅತ್ತೆ ಸಹಕರಿಸಿದರು. ಈ ವೇಳೆಯಲ್ಲಿ ಒಂದುವರೆ ವರ್ಷದ ವರೆಗೆ ಮಗಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದ್ದ ತಂದೆ ವೆಂಕಟೇಶ್ವರರಾವ ಪುನಾದಲ್ಲಿದ್ದ ಗಂಡುಮಕ್ಕಳಲ್ಲಿಗೆ ಹೋಗಿದ್ದರು. ಈ ಸಂಗತಿ ಅವರಿಗೆ ಗೊತ್ತಿರಲಿಲ್ಲ.

ಮುಂಜಾನೆಯಿಂದ ಸಂಜೆಯವರೆಗೆ ಬೆಂಚ್ ಮೇಲೆ ಕುಳಿತಿರುವುದು ಪ್ರಯಾಸದ ಕೆಲಸವಾಗಿತ್ತು. ಬೆನ್ನು ನೋವು, ಕಾಲುಗಳ ಸೆಳೆತ ಅವರನ್ನು ಬಹಳಷ್ಟು ಕಾಡಿತ್ತು. ಆದರೂ ಓದಿಗಾಗಿ ಸಹಿಸಿಕೊಂಡರು. ಎದುರಾಳಿಗಳ ಸಂಚಿಗೆ ಬಲಿಯಾಗಲಿಲ್ಲ. ಕಷ್ಟಪಟ್ಟು ಅವರ ಮುಖದ ಮೇಲೆ ಹೊಡೆದಂತೆ ಹಠಹಿಡಿದು ಪರೀಕ್ಷೆ ಬರೆದು ಡಿಪಾರ್ಟಮೆಂಟ್ ಫಸ್ಟ್ ಆಗಿ ಹೊರಹೊಮ್ಮಿದರು.

ಇಡ್ಲಿ ಪುರಾಣ:

ತುಂಬುಮನೆಯ ಮೊದಲ ಸೊಸೆಯಾಗಿ ಬಂದ ಪೂರ್ಣಿಮಾ ತನ್ನ ದೈನಂದಿನ ಯಾವುದೇ ಕರ್ತವ್ಯದಿಂದ ವಿಮುಖರಾಗುತ್ತಿರಲಿಲ್ಲ. ಯಾವುದೇ ಕೆಲಸವಿರಲಿ ಉತ್ಸಾಹದಿಂದ ಮಾಡುತ್ತಿದ್ದರು. ಗಂಡನ ಮನೆ ಸ್ಥಿತಿವಂತ ಪರಿಸ್ಥಿತಿಯಿಂದ ಕೂಡಿದ್ದಾಗಿದ್ದರೂ, ಪಟ್ಟಣಗಳ ತಿಂಡಿ-ತಿನಿಸುಗಳ ಬಗ್ಗೆ ಆಸಕ್ತರಾಗಿರಲಿಲ್ಲ. ಕೃಷಿಕ ಸಮಾಜದವರಾದ ಮನೆಯ ಹೆಂಗಳೆಯರಿಗೆ

ಪಾರಂಪರಿಕ ಅಡುಗೆ ಬಿಟ್ಟರೆ ಉಳಿದ್ಯಾವ ಬಗೆಯ ಅಡುಗೆ ಮಾಡಲು ಅಷ್ಟಾಗಿ ಬರುತ್ತಿರಲಿಲ್ಲವೆಂದು ನೆನಪಿಸಿಕೊಳ್ಳುತ್ತಾರೆ.

ಒಮ್ಮೆ ಪೂರ್ಣಿಮಾ ಮನೆಯವರಿಗೆಲ್ಲ ಇಡ್ಲಿ ಮಾಡಿ ಬಡಿಸುವ ಸಂಕಲ್ಪ ಮಾಡಿಕೊಂಡರು. ಸಂಕಲ್ಪದಂತೆ ಪ್ರಾರಂಭವಾಯಿತು ತಯಾರಿ. ಏಳು ಕಿಲೋ ಇಡ್ಲಿ ಹಿಟ್ಟು ತಯಾರು ಮಾಡಿದರು. ಒಲೆಯ ಮೇಲೆ ದೊಡ್ಡ ಬಾಣಲೆಯಲ್ಲಿ ಸಾಂಬಾರು ರೆಡಿ ಮಾಡಿದರು. ಒಳ್ಕಲ್‌ನಲ್ಲಿ ಹತ್ತು ತೆಂಗುಗಳ ಚಟ್ನಿ ರುಬ್ಬಿದರು. ಇಡ್ಲಿ ಹಾಕಲು ಶುರು ಮಾಡಿದರು. ಯೌವ್ವನದ ಹೊಸ್ತಿಲಲ್ಲೇ ಇದ್ದ ಮೈದುನಂದಿರೆಲ್ಲ ಅತ್ತಿಗೆಯನ್ನು ಗೋಳು ಹೊಯ್ದುಕೊಳ್ಳಲೋ ಅಥವಾ ಇಡ್ಲಿ-ಸಾಂಬಾರು-ಚಟ್ನಿಯ ರುಚಿ ಮನಸೂರೆಗೊಂಡಿತ್ತೆಂದೋ ಅಂತೂ ಪಂಥದ ಮೇಲೆಂಬಂತೆ ಒಬ್ಬೊಬ್ಬರು ಬರೋಬ್ಬರಿ ೨೦-೨೫ ಇಡ್ಲಿಗಳನ್ನು ತಿನ್ನುತ್ತ ಅತ್ತಿಗೆ ಕೈರುಚಿಯನ್ನು ಶ್ಲಾಘಿಸುತ್ತ ದೊಡ್ಡ ಜಾತ್ರೆಯೆಬ್ಬಿಸಿದ್ದರು. ಗಂಡನ ಮನೆಯಲ್ಲಿ ಅದೊಂದು ತುಂಬ ಸಿಹಿಗಳಿಗೆಯಾಗಿತ್ತು. ಅದನ್ನು ಪೂರ್ಣಿಮಾ ತುಂಬ ಪ್ರೀತಿಯಿಂದ ನೆನಪು ಮಾಡಿಕೊಳ್ಳುತ್ತಾರೆ. ಇಂದಿಗೂ ಆ ನನ್ನ ಮೈದುನ-ನಾದಿನಿಯಂದಿರು ನನ್ನನ್ನು ಹಾಗೆಯೇ ಪ್ರೀತಿಸುತ್ತಾರೆ ಎಂಬುದನ್ನು ಹೇಳಲು ಮರೆಯುವುದಿಲ್ಲ.

ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ:

ಪೂರ್ಣಿಮಾರವರು ಎಂ.ಎ. ಮುಗಿದ ಮೊದಲ ವರ್ಷ ಅಂದರೆ ೧೯೯೪ರಲ್ಲಿ ಪುಟ್ಟಮಕ್ಕಳಿಗೆ ಪಾಠ ಮಾಡುವ ಶಿಕ್ಷಕ ವೃತ್ತಿಯನ್ನು ಆಯ್ದುಕೊಂಡರು. ಮುಂದೆ ಸ್ವಲ್ಪ ತಿಂಗಳ ನಂತರ ಅಕ್ಕಮಹಾದೇವಿ ಮಹಿಳಾ ಕಾಲೇಜು, ಬೀದರ ಹಾಗು ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಪಾರ್ಟ್‌ಟೈಮ್ ಆಂಗ್ಲ ಭಾಷಾ ಉಪನ್ಯಾಸಕರಾಗಿ ಸೇರಿಕೊಂಡರು. ಸ್ವಲ್ಪ ಸಮಯದಲ್ಲಿಯೇ ಎಲ್ಲ ವಿದ್ಯಾರ್ಥಿಗಳ ಮೆಚ್ಚುಗೆಯನ್ನು ಗಳಿಸಿಕೊಂಡರು.

ಅವರ ಗಂಡನಾದ ಜಾರ್ಜ್ ಕ್ರಿಸ್ಪಿ ಕೂಡ ಸಾಮಾಜಿಕವಾಗಿ ಹಾಗು ರಾಜಕೀಯವಾಗಿ ತಮ್ಮನ್ನು ತಾವು ಗುರುತಿಸಿಕೊಳ್ಳಲು ಪ್ರಾರಂಭಿಸಿದರು. ಗಂಡನ ವರ್ಚಸ್ಸೂ ದಿನೇ ದಿನೇ ವೃದ್ಧಿಸುತ್ತಲಿತ್ತು. ಯಾವುದೇ ಕಾರ್ಯವನ್ನು ಜಾರ್ಜ್ ಕೈಮೇಲೆ ತೆಗೆದುಕೊಂಡರೆಂದರೆ ಅದು ಎಲ್ಲರ ಮನಸ್ಸಿಗೆ ಮುದನೀಡುವಂತೆ ಮುಗಿಯಿತು ಎಂದರ್ಥವೇ. ಜಾರ್ಜ್ ಕೂಡ ಅಷ್ಟೊತ್ತಿಗೆ ಮುನಸಿಪಾಲಿಟಿ ಕೌನ್ಸಿಲರ್ ಆಗಿ ೧೯೬೭ರ ಜನವರಿಯಲ್ಲಿ ಆಯ್ಕೆಯಾದರು. ಪೂರ್ಣಿಮಾರ ಸಂತೋಷಕ್ಕೆ ಮಿತಿಯೇ ಇರಲಿಲ್ಲ.

ಹೆಂಡತಿಯನ್ನು ಬಹಳವಾಗಿ ಪ್ರೀತಿಸುತ್ತಿದ್ದ ಜಾರ್ಜ್, ಪೂರ್ಣಿಮಾರ ಅಂಗಾಲಿಗೆ ಮುಳ್ಳು ನಡದಂತೆ ತಮ್ಮ ಕಣ್ಣರೆಪ್ಪೆಯ ಮೇಲಿಟ್ಟುಕೊಂಡು ದಾಂಪತ್ಯ ಜೀವನ ನಡೆಸುತ್ತಿದ್ದರು. ಇವರಿಬ್ಬರ ಪ್ರೀತಿಯ ಮೊದಲ ಕಂದ ಪೂಜಾ ಮನೆ ಮನ ತುಂಬಿದ್ದಳು. ಹೀಗೆ ದಿನಗಳು ಸಂತಸದಿಂದ ಕಳೆಯುತ್ತಿರುವಾಗ ಮತ್ತೊಂದು ಪ್ರೀತಿಯ ಕುಡಿ ಪೂರ್ಣಿಮಾರ ಒಡಲಲ್ಲಿ ಮೂಡಿತು. ಕಂದ ಅಮೋಘನ ಜನ್ಮವಾಯಿತು. ಗಂಡ–ಹೆಂಡತಿ ತಮ್ಮೆರಡು ಪ್ರೀತಿಯ ಕಂದಮ್ಮಗಳ ಅಪ್ಪುಗೆಯಲ್ಲಿ ಮಿಂದೆದ್ದರು. ಮನೆಯಲ್ಲಿ ಮತ್ತೊಮ್ಮೆ ಮುದ್ದಾದ ಕಂದನ ಕಾಲ್ಸಪ್ಪಳ ಎಲ್ಲರ ಮನ ತಣಿಸಿತು. ಎಲ್ಲರ ಮೆಚ್ಚುಗೆಗೂ ಪಾತ್ರವಾಗಿ ಎರಡೂ ಮಕ್ಕಳು ಬೆಳೆಯುತ್ತಿದ್ದರು.

ನ್ಯಾಶನಲ್ ಕಾಲೇಜಿನ ಪ್ರಾಂಶುಪಾಲರಾಗಿ, ಗಂಡನ ಏಳ್ಗೆಯಲ್ಲಿ ಸಹಭಾಗಿಯಾಗಿ ಸುಖದ ಸುಪ್ಪತಿಗೆಯಲ್ಲಿ, ಮುದ್ದುಮಕ್ಕಳ ತಾಯಿ–ತಂದೆಯಾಗಿ ಪೂರ್ಣಿಮಾ, ಜಾರ್ಜ್ ತೇಲಾಡಿದರು. ಆ ಸುಖ ಕಾಣದ ಕೈಗೆ ಮೆಚ್ಚಲಿಲ್ಲವೇನೋ! 'ಭೂಮಿಯ ಮೇಲೆಯೇ ಇಂತಹ ಸ್ವರ್ಗ ನಿರ್ಮಾಣವಾದರೆ ನನ್ನ ಸ್ವರ್ಗವನ್ನು ನೆನೆವರಾರು' ಎಂದು ದೇವರೆಂದುಕೊಂಡನೋ ತಿಳಿಯದು.

ಕಷ್ಟಗಳ ಮಹಾಪೂರ:

೧೯೯೮ರ ಆಗಸ್ಟ್ ತಿಂಗಳು, ಜಾರ್ಜ್ ರಾಜಕೀಯದ ಸ್ನೇಹಿತರೊಡನೆ ಬೆಂಗಳೂರಿಗೆ ಹೋಗಿ ೧೨ನೆಯ ತಾರೀಖಿನ ಸಂಜೆ ೮:೩೦ಗೆ ಮನೆಗೆ ಬಂದು ತಲುಪಿದರು. ರಾಜಧಾನಿಯಿಂದ ಬೀದರಿನವರೆಗೂ ಅವರೇ ಕಾರು ಚಾಲಾಯಿಸಿದರೂ ಕೂಡ ಬಂದವರೇ ಮಕ್ಕಳೊಡನೆ ಆಟದಲ್ಲಿ ತಲ್ಲೀನರಾದರು. ಎರಡು ವರ್ಷ ಎರಡು ತಿಂಗಳಿನ ಅಮೋಘ ಅಪ್ಪನ ಹೊಟ್ಟೆಯ ಮೇಲೆ ಕುಳಿತು ಆಟವಾಡಿ ಸುಸ್ತಾದ. ನಾಲ್ಕು ವರ್ಷದ (ಆದರೆ ತುಂಬಾ ದೊಡ್ಡವಳಂತೆ ವರ್ತಿಸುವ) ಪೂಜಾ ಅಪ್ಪನ ತೋಳಸೆರೆಯಲ್ಲಿ ನಿದ್ದೆ ಹೋದಳು. ಬೆಳಿಗ್ಗೆ ಎಂದಿನಂತೆ ಪೂರ್ಣಿಮಾರವರು ಕಾಲೇಜಿಗೆ ಹೋಗಲು, ಮಗಳಿಗೆ ಶಾಲೆಗೆ ಬಿಡಲು ತಯಾರಾಗುತ್ತಿದ್ದರು. ಜಾರ್ಜ್ 'ಯಾಕೋ ಹೊಟ್ಟೆ ನೋಯುತ್ತಿದೆ' ಎಂದು ಹೇಳಿಕೊಂಡರು. 'ನಾನು ನಿಮ್ಮೊಡನಿರಲೇ' ಎಂದು ಪೂರ್ಣಿಮಾ ಕೇಳಿದ್ದಕ್ಕೆ 'ಬೇಡ ನೀನು ಮಗುವನ್ನು ಶಾಲೆಗೆ ಬಿಟ್ಟು ಹೋಗು' ಎಂದರು. ಅಂದು ಆಗಸ್ಟ್ ೧೩ ಆಗಿದ್ದರಿಂದ ಸ್ವಾತಂತ್ರ್ಯೋತ್ಸವದ ಸಂಭ್ರಮಾಚರಣೆಯ ಸಿದ್ಧತೆ ಮಾಡಿಕೊಳ್ಳಬೇಕಾಗಿತ್ತು. ಆಗಸ್ಟ್ ೧೫ರ ನಿಮಿತ್ತ ಕಾಲೇಜಿನಲ್ಲಿ ವಿವಿಧ ಪ್ರತಿಯೋಗಿತೆಗಳನ್ನು ಹಮ್ಮಿಕೊಂಡಿದ್ದರು. ಕರ್ತವ್ಯದ ಎಳೆತ ಮುಖ್ಯವಾದ್ದರಿಂದ ಅವರು ಕಾಲೇಜಿಗೆ ಹೋದರು. ಮಧ್ಯಾಹ್ನದ ಒಂದರ ಸುಮಾರಿಗೆ ಮೈದುನ ಪ್ರವೀಣ ಬಂದು "ಅತ್ತಿಗೆ ಅಣ್ಣನಿಗೆ ಹಾಸ್ಪಿಟಲ್‌ಗೆ ಸೇರಿಸಲಾಗಿದೆ ಬೇಗ ಬನ್ನಿ" ಎಂದು ಅತ್ತಿಗೆಯನ್ನು ಕರೆದುಕೊಂಡು ಹೋದ. ಆಸ್ಪತ್ರೆಗೆ ಬರುತ್ತಿದ್ದಂತೆ ಗಂಡ ಜಾರ್ಜ್ ಹೊಟ್ಟೆನೋವಿನಿಂದ ಒದ್ದಾಡುತ್ತಿದ್ದರು. ಪೂರ್ಣಿಮಾ ಡಾಕ್ಟರ್ ಬಳಿ ಓಡಿದರು. 'ಏನಿದು' ಎಂದು ಪ್ರಶ್ನಿಸಿದರು. ಡಾಕ್ಟರ ಹೇಳಿದ ಔಷಧೋಪಚಾರ ಮಾಡಿದರು. ಆದರೆ ಬೇನೆ ತಗ್ಗಲೊಲ್ಲದು. ನಲ್ಲನ ಕಷ್ಟ ನೋಡಲಾಗದು. ಆದರೂ ಕಷ್ಟ ಸಹಿಸಬೇಕು ಅವುಡುಗಚ್ಚಿದರು. ಬೀದರಿನಲ್ಲಿದ್ದ ವೈದ್ಯರು ಹೈದರಾಬಾದಿಗೆ ಕರೆದೊಯ್ಯಿರಿ ಎಂದರು.

ಇದು ಬಹುಶಃ ಪ್ಯಾಂಕ್ರಿಯಾಟೈಟಿಸ್ ಇರಬಹುದು ಎಂದು ಹೇಳಿದರು. ಮರುದಿನ ಜಾರ್ಜ್‌ರನ್ನು ಹೈದರಾಬಾದಿನ ಸೋಮಾಜಿಗುಡದ ಯಶೋದಾ ಆಸ್ಪತ್ರೆಯಲ್ಲಿ ದಾಖಲಿಸಲಾಯಿತು. ಅಲ್ಲಿಂದ ಶುರುವಾಯ್ತು ಓಡಾಟ, ಪರದಾಟ. ಏನೇನೋ ಪರೀಕ್ಷೆಗಳು. ಎಲ್ಲ ಪರೀಕ್ಷೆಗಳಿಗೂ ಒಳಗಾದ ಜಾರ್ಜ್ ಬಳಲಿ ಬೆಂಡಾದರು. ಪರಿಸ್ಥಿತಿ ಮತ್ತಷ್ಟು ಉಲ್ಬಣಿಸುತ್ತಿತ್ತು. ೧೬ನೆಯ ತಾರೀಖಿಗೆ ಅಲ್ಲಿಂದ ಬಂಜಾರಾ ಹಿಲ್ಸ್‌ನ ಅಪೋಲೋ ಆಸ್ಪತ್ರೆಗೆ ವರ್ಗಾಯಿಸಲಾಯಿತು. ಅಲ್ಲಿ ಹೊರಗೆ ಸ್ಟ್ರೆಚರ್ ಮೇಲೆ ಗಂಡ ನರಳುತ್ತಿದ್ದರೆ ಹೆಂಡತಿ ಆಸ್ಪತ್ರೆಯ ಆಫೀಸ್ ಸಿಬ್ಬಂದಿಯಲ್ಲಿ ಮರುದಿನ ಬೆಳಿಗ್ಗೆ ದುಡ್ಡು ತಂದು ಕಟ್ಟುವೆ ಎಂದು ಗೋಗರೆಯುತ್ತಿದ್ದಳು. ಅಂತು-ಇಂತೂ ಅಂದು ರಾತ್ರಿ ಜಾರ್ಜ್‌ರನ್ನು ಆ ಆಸ್ಪತ್ರೆಯಲ್ಲಿ ದಾಖಲಿಸಲಾಯಿತು. ಅಲ್ಲಿ ರೋಗಿಯನ್ನು ಐ.ಸಿ.ಯು.ನಲ್ಲಿ ಸೇರ್ಪಡೆ ಮಾಡಿಕೊಂಡರು. ಆದರೆ ರೋಗಿಯ ಜೊತೆಗಿದ್ದವರಿಗಾರಿಗೂ ಯಾವ ಸೌಲಭ್ಯವೂ ಇರಲಿಲ್ಲ. ಅಂದು ಪೂರ್ಣಿಮಾ ಐ.ಸಿ.ಯು.ನ ಹೊರಗಿರುವ ಕಲ್ಲಿನ ಬೆಂಚ್ ಮೇಲೆ ಕಾಯುತ್ತಾ ಮಲಗಿದರು. ಮರುದಿನ ಬೆಳಿಗ್ಗೆಯಿಂದ ಒಡಲಲ್ಲಿ ಬೆಂಕಿಯನ್ನಿಟ್ಟುಕೊಂಡು ಜೀವನದಲ್ಲಿ ಇಷ್ಟು ದಿನಗಳೂ ಏಳದ ಪ್ರಶ್ನೆಗಳಿಗೆ, ಕಂಡರಿಯದ ಆತಂಕಗಳಿಗೆ, ಜೀವನ್ಮರಣದ ಹೋರಾಟಕ್ಕೆ ಪೂರ್ಣಿಮಾ ತಲೆಕೊಡಬೇಕಾಯ್ತು. ಅಷ್ಟು ದೊಡ್ಡ ಆಸ್ಪತ್ರೆಯಲ್ಲಿ ಶುಶ್ರೂಷೆಗೆ ಹಣ ಒದಗಿಸಲು ಅವರ ಹತ್ತಿರ ಹಣವಿರಲಿಲ್ಲ.

ತಮ್ಮ ತಾಯಿ ಹೇಗೆ ತಮ್ಮ ತಂದೆಯನ್ನು ಎಂದೂ ಹಣಕಾಸಿನ ವಿಷಯದಲ್ಲಿ ಪ್ರಶ್ನಿಸಿರಲಿಲ್ಲವೋ ಹಾಗೆಯೇ ಪೂರ್ಣಿಮಾ ಕೂಡ ಜಾರ್ಜ್‌ರನ್ನು ಎಂದೂ ಪ್ರಶ್ನಿಸಿದ್ದಿಲ್ಲ. ಮನೆಗೆ ಹಿರಿಯ ಮಗನಾಗಿ ಅವರು ತಮ್ಮ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದರೆ, ಪೂರ್ಣಿಮಾ ಹಿರಿಯ ಸೊಸೆಯಾಗಿ ತಮ್ಮ ಜವಾಬ್ದಾರಿ ನಿಭಾಯಿಸುತ್ತಿದ್ದರು. ಹಾಗಾಗಿ ಗಂಡನ ಸಂಪಾದನೆ ಎಲ್ಲಿದೆ, ದುಡ್ಡು ಎಲ್ಲಿ ಖರ್ಚು ಮಾಡುತ್ತಿದ್ದಾರೆ ಎಂಬುದು ಪೂರ್ಣಿಮಾಗೆ ಗೊತ್ತೇ ಇರಲಿಲ್ಲ.

ಸ್ನೇಹಿತರು, ಸಂಬಂಧಿಕರು, ಪರಿಚಯದವರು ಆಸ್ಪತ್ರೆಗೆ ಬಂದು ತಮ್ಮ ಕೈಲಾದಷ್ಟು ಧನಸಹಾಯ ಮಾಡಿದರು. ಆಗ ಪೂರ್ಣಿಮಾ ತುಂಬಾ ಮುದುರಿಕೊಂಡು ನಾನು ಈ ಹಣವನ್ನು ವಾಪಸ್ಸು ತೀರಿಸುವೆ ಎಂದು ಹೇಳಿಕೊಂಡರು. ಆಗ ಬೇಡ ತಾಯಿ ಅವನನ್ನು ಬೇಗ ಗುಣಪಡಿಸಿಕೊಂಡು ಮನೆಗೆ ತಾ ಎಂದು ಕೆಲವರೆಂದರೆ ಕೆಲವರು ಸರಿ ಎಂದು ಸುಮ್ಮನಾದರು. ಜಾರ್ಜ್‌ರ ಆರೋಗ್ಯ ಹದಗೆಡುತ್ತಲೇ ಹೋಯಿತು. ಹಗಲುರಾತ್ರಿ ಪೂರ್ಣಿಮಾಗೆ ಆ ಕಲ್ಲಿನ ಬೆಂಚ್ ಗತಿಯಾಯಿತು. ಅವರನ್ನು ಐ.ಸಿ.ಯು.ನಲ್ಲಿದ್ದ ರೋಗಿಯ ಹತ್ತಿರ ಬಿಡುತ್ತಿರಲಿಲ್ಲ. ಒಂದು ಪೂರ್ತಿ ದಿನದಲ್ಲಿ ಕೆಲವು ಕ್ಷಣಗಳ ಅನುಮತಿ ಮಾತ್ರ ಇರುತ್ತಿತ್ತು. ಹಾಗಾಗಿ ಒಳಗಿನಿಂದ ಹೊರಬರುವ ಪ್ರತಿಯೊಬ್ಬರಲ್ಲಿ ತನ್ನ ಗಂಡನ ಬಗ್ಗೆ ವಿಚಾರಿಸುವುದೇ ಅವರ ದೈನಂದಿನ ದಿನಚರಿಯಾಯಿತು. ಜಾರ್ಜ್‌ಗೆ ಡಯಾಲಿಸಿಸ್ ಪ್ರಾರಂಭ ಮಾಡಿದರು. ನೋವು ತಡೆಯಲಾರದೆ ಹೃದಯವಿದ್ರಾವಕವಾಗಿ ಕೂಗಿಕೊಳ್ಳುತ್ತಿದ್ದರು. ತುಂಬಾ ನೋವಿನಿಂದ ಬುದ್ಧಿ ಭ್ರಮಿತರಾದಂತೆ ವರ್ತಿಸುತ್ತಿದ್ದರು. ದಿನಕಳೆದಂತೆ ವೈದ್ಯರ ಹತಾಶ ಮುಖಗಳನ್ನು ಕಂಡು ತನ್ನ ಮನದನ್ನನ ಜೀವ ತನ್ನ ಕೈಯಿಂದ ಜಾರಿ ಹೋಗುತ್ತಿದೆ ಎಂಬುದು ಅವರಿಗೆ ಖಚಿತವಾಯಿತು.

ನೇತ್ರದಾನ:

ಒಂದು ದಿನ ಪರಿಸ್ಥಿತಿ ಪೂರ್ತಿ ಕೈಮೀರಿ ಹೋಗುವ ಮುನ್ನ ಅರೆನಿದ್ರೆಯಲ್ಲಿದ್ದ ಗಂಡನ ಬಳಿ ಹೋಗಿ ಎದೆಯ ಮೇಲೆ ತಲೆಯಿಟ್ಟು ಮನಬಂದಂತೆ ಅತ್ತು, 'ನೀವು ಭಯಪಡಬೇಡಿ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನದು." ಎಂದು ಭಾಷೆ ಇತ್ತು ಹೊರಬಂದರು. ಗಂಡನನ್ನು ಹೇಗಾದರೂ ಉಳಿಸಿಕೊಳ್ಳಬೇಕು. ಆದರೆ ವೈದ್ಯಕೀಯ ಜಗತ್ತಿಗೂ ಸವಾಲಾಗಿ ಪರಿಣಮಿಸಿದ್ದ ಜಾರ್ಜ್‌ರ ಬೇನೆ ಆ ಅವಕಾಶ ಪೂರ್ಣಿಮಾಗೆ ಕೊಡುತ್ತಿರಲಿಲ್ಲ. ಹಾಗಾಗಿ ಅವರು ನೇರವಾಗಿ ನೇತ್ರದಾನ ಕೇಂದ್ರಕ್ಕೆ ಹೋಗಿ ಮೊದಲು ತನ್ನ ಗಂಡನ,

ನಂತರದಲ್ಲಿ ತನ್ನ ಹಾಗು ಮಕ್ಕಳ ನೇತ್ರದಾನದ ಒಪ್ಪಂದಕ್ಕೆ ಸಹಿ ಹಾಕಿ ಹೊರಬಂದರು. ಹಾಗಾಗಿ ಇಂದಿಗೂ ನನ್ನನ್ನು ಪ್ರೀತಿಸಿದ ಆ ಎರಡು ಕಂಗಳು ಇಬ್ಬರ ಕಣ್ಣಿನ ಬೆಳಕಾಗಿವೆ ಎಂದು ಪೂರ್ಣಿಮಾ ಸ್ಮರಿಸುತ್ತಾರೆ. ಕೊನೆಗೆ ೨೩ನೆಯ ಆಗಸ್ಟ್ ೧೯೯೮ರಂದು ಜಾರ್ಜ್ ತಾನು ಜೀವಕ್ಕಿಂತ ಹೆಚ್ಚು ಪ್ರೀತಿಸಿದ್ದ ಮಡದಿಯ ಪ್ರೇಮದ ಸಂಕೋಲೆಯನ್ನು ತೊಡೆದು ಕಾಣದ ಲೋಕಕ್ಕೆ ಹೊರಟೇ ಹೋದರು....

ಪೂರ್ಣಿಮಾರ ನೇತ್ರದಾನ ನಿರ್ಧಾರವನ್ನು ಗೌರವಿಸಿ ಹೈದರಾದಿನ ಅಪೋಲೋ ಆಸ್ಪತ್ರೆಯ ವೈದ್ಯರಾದ ಡಾ. ಜಗನ ಮೋಹನ ರೆಡ್ಡಿಯವರು೧೬.೦೯.೧೯೯೮ರಂದು ಪತ್ರ ಬರೆದಿದ್ದಾರೆ. ನೇತ್ರದಾನವೊಂದು ಪವಿತ್ರಕಾರ್ಯ. ಅದನ್ನು ಸಕಾಲಿಕವಾಗಿ ನಿರ್ಧರಿಸಿ ಕೈಗೊಂಡ ನಿರ್ಣಯವು ಇಬ್ಬರು ಅಂಧರ ಬಾಳಿಗೆ ಬೆಳಕು ನೀಡಿದೆ. ತಮ್ಮ ಮುಂದಾಲೋಚನೆ ಸಮಾಜಕ್ಕೆ ಮಾದರಿಯಾಗಿದೆ. ಅದಕ್ಕಾಗಿ ತಮ್ಮನ್ನು ಶ್ಲಾಘಿಸುತ್ತೇವೆ ಎಂದಿರುವರು.

ಚುಚ್ಚುಮಾತು:

ಜಾರ್ಜ್ ಸಾವಿನ ನಂತರದ ದಿನಗಳಲ್ಲಿ ಹತ್ತಿರದವರ, ಆತ್ಮೀಯರ, ಸ್ನೇಹಿತರ ಎಲ್ಲರ ಮುಖವಾಡಗಳು ಒಂದೊಂದಾಗಿ ಕಳಚತೊಡಗಿದವು. ಪೂರ್ಣಿಮಾಗೆ ನಿಲ್ಲಲು ನೆಲೆಯೇ ಇಲ್ಲದಂತಾಯಿತು. ಭೂಮಿ ಸದಾ ಬಾಯ್ಬಿಟ್ಟು ಕಬಳಿಸಲು ಸನ್ನದ್ಧವಾಗಿ ನಿಂತಿದೆಯೋ ಎಂಬಂತೆ ಭಾಸವಾಗುತ್ತಿತ್ತು. ತನ್ನೆರಡು ಪುಟ್ಟಮಕ್ಕಳು ಅಪ್ಪನನ್ನು ಕಳೆದುಕೊಂಡು ಕಂಗಾಲಾಗುವುದನ್ನು ನೋಡಿ ಮಾತೃಹೃದಯ ಜರ್ಝರಿತವಾಯಿತು. ಆ ವರ್ಷ ಕಾಲೇಜಿನ ಮಕ್ಕಳು ಇವರಲ್ಲಿಗೆ ಬಂದು ನೀವು ಬಂದರೆ ಮಾತ್ರ ಕಾಲೇಜಿನಲ್ಲಿ ನಾವು ಶಿಕ್ಷಕರ ದಿನಾಚರಣೆಯನ್ನು ಆಚರಿಸುವುದು ಎಂದು ಪಟ್ಟುಹಿಡಿದರು. ಪೂರ್ಣಿಮಾ ಮಕ್ಕಳಿಗಾಗಿ ಕಂಕಣಬದ್ಧರಾದರು. ಕಾಲೇಜಿನ ವಿದ್ಯಾರ್ಥಿಗಳ ಆಗು-ಹೋಗುಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡರು. ಅವರ ಏಳ್ಗೆಯೆಡೆಗೆ ಶ್ರಮಿಸುತ್ತ, ತನ್ನ ಎರಡು ಮಕ್ಕಳನ್ನು ಸೊಂಟಕ್ಕೆ ಕಟ್ಟಿಕೊಂಡು ಜೀವನದ ಸಂಘರ್ಷದಲ್ಲಿ ಮುನ್ನಡೆದರು.

ಇದೇ ಸಂದರ್ಭದಲ್ಲಿ ಇನ್ನು ಮುಂದೆ ನಮ್ಮ ಮನೆಗೆ ಬರಬೇಡ ಎಂದ ಗೆಳತಿಯರೆಷ್ಟೋ, ನಿನ್ನ ಗಂಡನಿಗಾಗಿ ನಾವು ಕೊಟ್ಟ ಹಣವನ್ನು ವಾಪಸ್ಸುಕೊಡು ಎಂದ ಆತ್ಮೀಯರೆಷ್ಟೋ, ಒಬ್ಬಳೆ ಇರುವೆ ಜೊತೆಗಾರ ಬೇಕೆ ಎಂದು ಕೇಳಿದ ಕಾಮುಕಿಗಳೆಷ್ಟೋ. ಪೂರ್ಣಿಮಾ ಯಾವುದಕ್ಕೂ ಹೆದರಲಿಲ್ಲ. ಇವರ ಮುಖದ ಮೇಲೆ ಮುಚ್ಚಿದ ಬಾಗಿಲುಗಳು ಇವರು ಸಾಧಿಸಿದ ಸಾಧನೆಯ ಹೊಡೆತಕ್ಕೆ ಒಡೆದುಹೋಗುವಂತೆ ತಮ್ಮ ಕಾರ್ಯ ನಿರ್ವಹಿಸುತ್ತ ಮುನ್ನಡೆದರು. "ಜಾರ್ಜ್ ಆಸ್ಪತ್ರೆಯ ಖರ್ಚಿನ ಸಾಲ ನನ್ನ ಮೈಮೇಲೆ ಇತ್ತು. ಮನೆಯವರಾರೂ ಕೊಡಲು ಮುಂದಾಗಲಿಲ್ಲ. ಹಾಗಾಗಿ ನಾನೇ ತಿಂಗಳಿಗಿಷ್ಟರಂತೆ ಎಲ್ಲರ ಹಣವನ್ನು ತೀರಿಸಿದೆ" ಎನ್ನುತ್ತಾರೆ ಪೂರ್ಣಿಮಾ. "ಆದರೆ ಹಣ ಕೇಳಿದವರಲ್ಲಿ ಮೊಟ್ಟಮೊದಲಿಗರಾಗಿ ಜಾರ್ಜ್ ಯಾರ ಮನೆಗೆ ಸ್ವಂತ ಮಗನಿಗಿಂತಲೂ ಹೆಚ್ಚಾಗಿ ಹಚ್ಚಿಕೊಂಡು ಅವರೆಲ್ಲ ಕೆಲಸಗಳನ್ನು ನಿರ್ವಹಿಸಿಕೊಡುತ್ತಿದ್ದರೋ ಅವರೇ ಕೇಳಿದ್ದು ತುಂಬಾ ಆಘಾತಕಾರಿ ವಿಷಯವಾಗಿತ್ತು ನನಗೆ" ಎಂದು ಅವರ ಹೆಸರನ್ನು ಹೇಳಲಿಚ್ಛಿಸದೆ ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತಾರೆ ಪೂರ್ಣಿಮಾ.

Spoken English Class: ಜಾರ್ಜ್ ಆಸ್ಪತ್ರೆಯ ಖರ್ಚು ಬಹಳಷ್ಟು ಸಾಲಕ್ಕೆ ದೂಡಿತ್ತು. ಆದಾಯಕ್ಕಿಂತ ಖರ್ಚು ಹೆಚ್ಚಾಗಿತ್ತು. ಅದನ್ನು ಸರಿಹೊಂದಿಸಲು, ಮಕ್ಕಳ ಪಾಲನೆ ಪೋಷಣೆ ಗೈಯಲು ಹೆಚ್ಚಿನ ದುಡಿಮೆ ಅಗತ್ಯವಾಗಿತ್ತು. ಅಲ್ಲದೆ ಭಾವೀ ಬದುಕಿನ ಆರ್ಥಿಕ ಪರಿಸ್ಥಿತಿ ಸುಧಾರಿಸಲಿ ಎಂಬ ಉದ್ದೇಶದಿಂದ ಅವರು ಆಗ 'Spoken English Class'ನ್ನು ಪ್ರಾರಂಭಿಸಿದರು. ಹಾಗೆ ಮಾಡುತ್ತ ಸಾಮಾಜಿಕ ಕಳಕಳಿಯೂ ಉತ್ಕಟವಾಗಿರುವುದರಿಂದ ಮನೆಯಲ್ಲಿ ತನಗೇ ಎಷ್ಟೇ ಕಷ್ಟವಿದ್ದರೂ ಸಹ ತೀರಾ ಬಡತನದಲ್ಲಿದ್ದ ಮಕ್ಕಳಿಗೆ ತಮ್ಮ ಮನೆಯಲ್ಲಿಯೇ ಇರಲು ವ್ಯವಸ್ಥೆ ಮಾಡಿಕೊಟ್ಟರು. ಹಾಗೆ ಇವರ ಕೈತುತ್ತು ತಿಂದು ಬೆಳೆದ ವಿದ್ಯಾರ್ಥಿಗಳಲ್ಲಿ ವಿನಯ ಮಾಳಗೆ ಸೇರಿದಂತೆ ಹಲವಾರು ವಿದ್ಯಾರ್ಥಿಗಳು ಇಂದು ಸಾಧನೆಯ ಶಿಖರಗಳನ್ನೇರಿದ್ದಾರೆ ಎಂದು ಪೂರ್ಣಿಮಾ ಹೆಮ್ಮೆಯಿಂದ ಬೀಗುತ್ತಾರೆ.

ಜಾರ್ಜ್ ಮನೆಯಿಂದ ಹೊರಗೆ: ಗಂಡನ ಸಾವಿನಿಂದ ಜರ್ಜರಿತರಾದ ಪೂರ್ಣಿಮಾರವರು ತಮ್ಮ ಬದುಕನ್ನು ಹೊಂದಿಸಿಕೊಳ್ಳಲು ಸಾಕಷ್ಟು ಪರಿಶ್ರಮ ಪಡಬೇಕಾಯಿತು. ಎಂಟು ತಿಂಗಳವರೆಗೆ ಕುಟುಂಬದವರ ಜೊತೆಗೆ ಚೆನ್ನಾಗಿಯೆ ಇದ್ದರು. ಆಸ್ಪತ್ರೆಯ ಖರ್ಚಿನ ಬಗ್ಗೆ ಯಾರು ತುಟಿ ಬಿಚ್ಚಲಿಲ್ಲ. ಹಣ ಹೊಂದಿಸಲು ಜಾರ್ಜ್ ರಕ್ತಸಂಬಂಧಿಗಳು ಮುಂದಾಗಲಿಲ್ಲ. ಹಣ ಕೊಟ್ಟವರು ಕೇಳಲು ಬಂದಾಗ ಕೊಟ್ಟವಳಿಗೆ ಕೇಳಿ ಎನ್ನುತ್ತಿದ್ದರಂತೆ.

ಇದನ್ನು ಅರ್ಥಮಾಡಿಕೊಂಡ ಪೂರ್ಣಿಮಾರವರು 'ನಿಮ್ಮನ್ನೆಲ್ಲ ನಾವು ಸಾಕುತ್ತಿದ್ದೇವೆ' ಎಂಬ ಮಾತು ಮುಂದೇ ಉದ್ಭವಿಸಬಾರದು. ತಂದೆ ಸತ್ತ ಮಕ್ಕಳು ಬೇರೆಯವರ ಹಂಗಿನಲ್ಲಿರಬಾರದು. ಅಮ್ಮನ ಆಶ್ರಯದಿಂದ ಮಕ್ಕಳು ವಂಚಿತರಾಗಬಾರದು ಎಂಬ ಕಾರಣಕ್ಕೆ ಬೇರೆ ಮನೆ ಮಾಡಲು ನಿರ್ಧರಿಸಿದರು.

ಈ ವಿಷಯ ಅತ್ತೆ ವಸಂತಾರ ಮುಂದಿಟ್ಟಾಗ ಬಹಳ ನೋವಿನ ಮಾತುಗಳನ್ನು ಕೇಳಬೇಕಾಯಿತು. ಮನೆಯಿಂದ ಹೊರಗಡೆ ಹೋಗಬಾರದೆಂದು ಅವರೆಲ್ಲ ತಾಕೀತು ಮಾಡಿದರು. ಯಾವುದಕ್ಕೂ ಸಹಕಾರ ನೀಡಲಿಲ್ಲ. ಪೂರ್ಣಿಮಾ ಯಾರ ಮಾತು ಕೇಳಲಿಲ್ಲ. ತಾವು ಕೈಗೊಂಡ ದೃಢ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. "ಅತ್ತೆ ನಾನು ನಿಮ್ಮ ಸೊಸೆ. ನಿಮ್ಮ ಮನೆಯೇ ನನಗೆ ಸ್ವರ್ಗ. ಕಷ್ಟ ಸುಖಕ್ಕೂ ಇದೇ ನನ್ನ ಮನೆ ನನಗೆ ಮತ್ತು ನಮ್ಮ ಮಕ್ಕಳಿಗೆ ಕೊನೆಯತನಕ. ಮನೆ ಎರಡಾದರೂ ಮನಸ್ಸು ಎರಡು ಮಾಡುವುದಿಲ್ಲ. ಇದನ್ನು ತೊರೆದು ನಾನೆಲ್ಲಿಗೂ ಹೋಗುವುದಿಲ್ಲ. ನಿಮ್ಮ ಕುಟುಂಬಕ್ಕೆ ಎಂದಿಗೂ ಕಪ್ಪುಚುಕ್ಕೆ ತರುವವಳಲ್ಲ. ಮನೆಯ ಹಿರಿಸೊಸೆಯಾಗಿ ಎಲ್ಲ ಜವಾಬ್ದಾರಿ ನಿಭಾಯಿಸುವೆ.

ನಾನಿನ್ನೂ ಗಂಡನಿಗೆ ನೀಡಿದ ವಾಗ್ದಾನವನ್ನು ಪೂರೈಸಬೇಕಾಗಿದೆ. ಅವರ ಕನಸನ್ನು ಸಾಕಾರಗೊಳಿಸಬೇಕಾಗಿದೆ. ಮಕ್ಕಳಿಗೆ ಚೆನ್ನಾಗಿ ಓದಿಸಿ, ವಿದ್ಯಾವಂತರನ್ನಾಗಿ ಮಾಡಬೇಕಾಗಿದೆ. ನಾನು ಎಲ್ಲೇ ಇದ್ದರೂ ಪ್ರತಿ

ರವಿವಾರದಂದು ಹಾಗೂ ಎಲ್ಲ ರಜೆಯ ದಿನದಂದು ನಿಮ್ಮಲ್ಲಿಗೆ ಬರುತ್ತೇನೆ
ಸಂಬಂಧಗಳ ಬಗ್ಗೆ ಅಪನಂಬಿಕೆ ಬರದ ಹಾಗೆ ನೋಡಿಕೊಳ್ಳುತ್ತೇನೆ. ನೀವ
ನನ್ನ ನಿಲುವಿಗೆ ಸಹಕರಿಸಬೇಕು. ತಪ್ಪು ಅಭಿಪ್ರಾಯಗಳಿಗೆ ಕಿವಿಗೊಡಬಾರದು
ನಿಮ್ಮೆಲ್ಲರ ಹಿತಚಿಂತನೆಯಲ್ಲಿಯೆ ನಾನು ಬದುಕು ಸವೆಸುತ್ತೇನೆ" ಎಂದು ಅತ್ತೆ
ವಾಗ್ದಾನ ಮಾಡಿದರು. ಒಂದೆರಡು ಗಂಗಾಳ್, ಗ್ಲಾಸು, ಹಾಸ
ಹೊದಿಕೆಗಳೊಂದಿಗೆ ಅತ್ಯಂತ ನೋವಿನಿಂದ ಮನೆಯ ಹೊರಗಾದರು.

ಈ ಘಟನೆ ನಡೆದು ಎರಡು ವರ್ಷಗಳ ವರೆಗೆ ಜಾರ್ಜ್ ಕುಟುಂಬದ
ಬಹುತೇಕ ಸದಸ್ಯರು ಪೂರ್ಣಿಮಾ ಅವರೊಂದಿಗೆ ಮಾತನಾಡಲಿಲ್ಲ. ಆದರೂ
ಎದೆಗುಂದದೆ ಜೀವಿಸಿದರು. ಏನೆಲ್ಲ ಸಮಸ್ಯೆಗಳು ಬಂದರೂ ಹೊಲ ಮನೆಯಲ್ಲ
ಪಾಲು ಕೇಳಲಿಲ್ಲ. ಗಂಡನ ಸಲುವಾಗಿ ಮಾಡಿದ್ದ ಸಾಲವನ್ನೆಲ್ಲ ಹಂತಹಂತವಾಗಿ
ತೀರಿಸಿದರು. ಇದರಿಂದ ಸಮಾಜದಲ್ಲಿ ಪೂರ್ಣಿಮಾರ ಗೌರವ ಹೆಚ್ಚಾಯಿತು.
ಇವರ ಮೈದುನರ ಹೆಂಡತಿಯರ ವರ್ತನೆಗಳನ್ನೆಲ್ಲ ಕಂಡ ಮೇಲೆ ಅತ್ತೆ ವಸಂತಾಗೂ
ನಿಜಸ್ಥಿತಿ ಅರ್ಥವಾಯಿತು. ಇವರಿಗೂ, ಇತರ ಸೊಸೆಯಂದಿರಲ್ಲಿನ ಅಂತರವನ್ನು
ಕಂಡು, ಪೂರ್ಣಿಮಾರ ಬಗ್ಗೆ ಹೊಂದಿದ್ದ ಅಗೌರವದ ಪೊರೆ ಕಳಚಿಕೊಂಡರು.
'ಶುದ್ಧಚಿನ್ನ ಯಾವಾಗಲೂ ಶುದ್ಧ' ಎಂಬುದು ಅತ್ತೆ ವಸಂತಾರವರಿಗೆ
ಮನವರಿಕೆಯಾಯಿತು.

ಪೂಜಾ ಮತ್ತು ಅಮೋಘ ಸಹ ಅಜ್ಜಿ ಹಾಗೂ ಚಿಕ್ಕಪ್ಪ, ಚಿಕ್ಕಮ್ಮ
ಜೊತೆಗೆ ಒಳ್ಳೆಯ ಸಂಬಂಧ ಹೊಂದಿರುವರು. ಅಜ್ಜಿಗೆ ರೋಗರುಜಿನಗಳು
ಬಂದರೆ ಆಸ್ಪತ್ರೆಗೆ ಕಾರಿನಲ್ಲಿ ಕರೆದುಕೊಂಡು ಹೋಗುತ್ತಾರೆ. ಅವರ ಸೇ
ಮಾಡುತ್ತಾರೆ. ಮೊಮ್ಮಕ್ಕಳ ಸೇವೆಯಿಂದ ಸಂತುಷ್ಟರಾಗಿ ಆನಂದಭಾಷ್ಪ ಸುರಿಸುತ್ತಾ
ಮಾನಸಿಕವಾಗಿ ನೆಮ್ಮದಿಯ ನಿಟ್ಟುಸಿರು ಬಿಡುತ್ತಾರೆ. ಈ ಹಿಂದಿನ ಎಲ್ಲ ಮನಸ್ತಾ
ಮರೆತು ಪ್ರೀತಿಯಿಂದ ಜೀವಿಸುತ್ತಿದ್ದಾರೆ. "ಕುಟುಂಬದ ಏನಾದರೂ ಸಮ
ಕಂಡುಬಂದಲ್ಲಿ, ವೈಮನಸ್ಸು ಉಂಟಾದಲ್ಲಿ ಅದನ್ನು ಬಗೆಹರಿಸಲ

ಪೂರ್ಣಿಮಾರನನ್ನು ಬರಮಾಡಿಕೊಳ್ಳುತ್ತಿದ್ದಾರೆ. ದಸರಾ, ದೀಪಾವಳಿ ಹಬ್ಬದಂದು ಅತ್ತೆ ವಸಂತಾ ಸೇರಿದಂತೆ, ಅವರ ಮಕ್ಕಳು, ಸೊಸೆಯರು, ಮೊಮ್ಮಕ್ಕಳು ಇವರಲ್ಲಿಗೆ ಬಂದು ತಮ್ಮ ಸಂತಸವನ್ನು ಹಂಚಿಕೊಳ್ಳುತ್ತಿದ್ದಾರೆ" ಇದರಿಂದ ನನ್ನಮನಸ್ಸಿಗೆ ಬಹಳಷ್ಟು ಸಂತಸವಾಗುತ್ತಿದೆ ಎನ್ನುತ್ತಾರೆ ಪೂರ್ಣಿಮಾ.

ಪೂರ್ಣಿಮಾರ ನಿರಂತರ ದುಡಿಮೆಯಿಂದ ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಿಸಿತು. ಸಾಲದ ಹೊರೆಯಿಂದ ಹೊರಬಂದರು. ಕಷ್ಟ ಬಂದಾಗ ಒಂದಿಷ್ಟು ಕುಗ್ಗಿ ನೋವು ಅನುಭವಿಸಿದರೂ ಅಪರಂಜಿ ಚಿನ್ನವಾಗಿ ಹೊರಹೊಮ್ಮಿದರು.

ಬೆಳೆಯುವವಳಿಗೆ ಕೊಡಲಿ ಪೆಟ್ಟು:

ಯಾರ ಹಂಗಿಗೂ ನಿಲ್ಲದೆ, ಯಾರ ಸಹಾಯಕ್ಕಾಗಿಯೂ ಕೈಚಾಚದೆ, ಯಾರ ನೆರಳಿನ ಅಪೇಕ್ಷೆಯನ್ನೂ ಮಾಡದೆ ತನ್ನ ಸ್ವಂತಿಕೆಯಿಂದ ಬೆಳೆಯುವ ವ್ಯಕ್ತಿಯನ್ನು ಬೆಳೆಯಗೊಡದಂತೆ ಮಾಡುವ, ವಿನಾಕಾರಣ ದ್ವೇಷಿಸುವ ಜನರಿಗೇನು ಸಮಾಜದಲ್ಲಿ ಕೊರತೆ ಇಲ್ಲ. ಪೂರ್ಣಿಮಾರಿಗೂ ಈ ದುರ್ದೈವ ಸುತ್ತಿಕೊಳ್ಳದೆ ಇರಲಿಲ್ಲ. "ನಾನು ತಕ್ಕಮಟ್ಟಿಗೆ ಸುಂದರಿಯಾಗಿರುವುದೇ ನನಗೆ ಮುಳುವಾಗಿದೆ" ಎಂದು ಪೂರ್ಣಿಮಾ ತುಂಬಾ ತೊಳಲಾಡುತ್ತಾರೆ. ಸ್ತ್ರೀಗೆ ನಮ್ಮ ಸಮಾಜ ಇಂದಿಗೂ ನ್ಯಾಯ ಒದಗಿಸುತ್ತಿಲ್ಲ. ಅದರಲ್ಲಿ ಆ ಹೆಣ್ಣು ಸುಂದರಿಯಾಗಿದ್ದರಂತೂ ಮುಗಿಯಿತು. ಅವಳೆಷ್ಟೇ ಕಟ್ಟುನಿಟ್ಟಿನವಳಾಗಿದ್ದರೂ ಸಮಾಜ ಆಕೆಯನ್ನು ಒಬ್ಬ ಜಾರಿಣಿಯಂತೆಯೇ ನೋಡುತ್ತದೆ. ಆಕೆಗೆ ಬಂದ ಪರಿಸ್ಥಿತಿ ತಮ್ಮ ಮಡದಿ, ಮಕ್ಕಳಿಗೆ ಯಾವ ಸಮಯಕ್ಕೂ ಬರಬಹುದು ಎಂಬುದು ಜನರು ಮರೆಯುತ್ತಾರೆ. ಇಲ್ಲದ ಸಲ್ಲದ ಆರೋಪಗಳನ್ನು ಆಕೆಯ ಮೇಲೆ ಹೊರಿಸಲು ಪೈಪೋಟಿಯಿಂದ ಮುನ್ನುಗ್ಗುತ್ತಾರೆ. ಹೀಗೆಯೇ ಪೂರ್ಣಿಮಾ ಆರೋಪಕ್ಕೆ ಒಳಗಾದರು. ೨೦೧೪ರ ಸುಮಾರಿಗೆ ಮಕ್ಕಳು ಬೆಳೆದು ಉನ್ನತ ವ್ಯಾಸಂಗಕ್ಕಾಗಿ ಬೆಂಗಳೂರಿನಲ್ಲಿರುವುದರಿಂದ ಅಂದು ಅವರು ಬೆಂಗಳೂರಿಗೆ ಒಂದು ವಾರದ ಮಟ್ಟಿಗೆ ಹೋಗಿದ್ದರು.

ಸಂತೋಷದಿಂದ ಮಕ್ಕಳೊಡನೆ ಮನೆಯಲ್ಲಿ ಲೋಕಾಭಿರಾಮವಾಗಿ ಮಾತನಾಡು ಕುಳಿತಿದ್ದರು. ಯಾರೋ ಒಬ್ಬರು ರಿಂಗಣಿಸಿ "ಮೇಡಂ, ಮದು ಮಾಡಿಕೊಂಡಿದ್ದೀರಂತಲ್ಲ? ನಮಗೆ ಸಿಹಿಸುದ್ದಿ ಹೇಳುವುದಿಲ್ಲವೇ?" ಎಂದ ಕೇಳಿದರು. ಪೂರ್ಣಿಮಾರ ಬಾಯಿಂದ ಮಾತೇ ಹೊರಡಲಿಲ್ಲ. "ಮಕ್ಕಳೊಂದಿ ಮನೆಯಲ್ಲಿದ್ದೇನೆ, ಯಾವ ಮದುವೆ? ಯಾರು ಗಂಡು?" ಎಂದ ಮರುಪ್ರಶ್ನಿಸಿದರು.

"ಹೌದಾ? ಸಾರಿ ಮೇಡಂ, ತಪ್ಪಾಯಿತು" ಎಂದು ಫೋನಾಯಿಸಿದವ ಫೋನ್ ಇಟ್ಟರು. ಆದರೆ ಪೂರ್ಣಿಮಾರ ಸುಖಕ್ಕೆ ಮತ್ತೊಮ್ಮೆ ಬೆಂಕಿ ತಾಕಿತ್ತು ಅವರು ಬೆಂಗಳೂರಿನಿಂದ ಬೀದರಿಗೆ ಬಂದಾಗ ಅವರು ಬೀದರಿಗೂ ಪರಿಚಿತರಾ ಯಾರೋ ಒಬ್ಬ ಐ.ಎ.ಎಸ್. ಅಧಿಕಾರಿಯೊಡನೆ ಮದುವೆ ಮಾಡಿಕೊಂಡಿದ್ದಾ ಎಂಬ ಸುದ್ದಿ ದಟ್ಟವಾಗಿ ಹರಡಿತ್ತು. ಪೂರ್ಣಿಮಾರ ಮಕ್ಕಳು ದುಃಖಿಸುತ್ತಿ ತಾಯಿಯನ್ನು ತಬ್ಬಿಕೊಂಡು, "ಮದುವೆ ಆಗಿದ್ದಾರೆ ಎಂದಿದ್ದಾರೆ ತಾನೆ? ಎಲ್ಲರಿಗ ಕೆಲವೇ ದಿನಗಳಲ್ಲಿ ಗೊತ್ತಾಗುತ್ತದೆ ಎಲ್ಲವೂ ಸುಳ್ಳೆಂದು. ನೀನು ಏನೆಂದ ನಮಗೆ ಗೊತ್ತು. ನೀನು ಸಮಾಜವನ್ನು ನಮಗಿಂತಲೂ ಮೇಲಿನ ದರ್ಜೆಯ ಇಡುವಿಯೋ? ನಿನ್ನ ಜೀವವಾದ ನಮ್ಮಗಳಿಗೆ ಈ ಗಾಳಿಮಾತಿನಿಂದ ಯಾ ವ್ಯತ್ಯಾಸವೂ ಉಂಟಾಗುತ್ತಿಲ್ಲ, ನೀನೇಕೆ ಚಿಂತಿಸುವೆ?" ಎಂದು ಸಮಾಧಾ ಮಾಡಿದರು. ಕಣ್ಣೊರೆಸಿದರು. ಕಣ್ಣೊರೆಸಿಕೊಂಡು, ಮಕ್ಕಳಿಗೆ ಮುತ್ತಿಕ್ಕಿ ಪೂರ್ಣಿಮಾ ಲೋಕದ ಹೊಡೆತಕ್ಕೆ ಜಗ್ಗದೇ ಮತ್ತೊಮ್ಮೆ ಅವುಡುಗಚ್ಚಿದರು. ಇಷ್ಟು ವ ತಮ್ಮ ಕಣ್ಣೆದುರಿಗೇ ಬೆಳೆದ ಪೂರ್ಣಿಮಾರನ್ನು ಇಂತಹ ಕೂಪಕ್ಕೆ ತಳ್ಳುವುದಾದ ಹೇಗೆ ಎಂಬ ಸಾಮಾನ್ಯ ಮಾನವೀಯತೆಯನ್ನು ಜನರು ತೋರಲಿಲ್ಲ ಅಥ ನನ್ನನ್ನು ಬೀಳಿಸಲು ಜನರು ಉಪಯೋಗಿಸಿದ ಇದು ಕೊನೆಯ ಅಸ್ತ್ರ ಏನೋ ಎಂದು ಪೂರ್ಣಿಮಾ ವಿಷಾದದ ನಗೆ ಚೆಲ್ಲುತ್ತಾರೆ.

ಗೃಹ ಸಹಿಷ್ಣುತೆ:

ಅವರ ಮನೆಯಲ್ಲಿ ಎಲ್ಲ ಧರ್ಮಗಳ ಸಂಗಮವಿದೆ. ಹಿಂದು ಧರ್ಮದ ಎಲ್ಲ ಹಬ್ಬ ಹರಿದಿನಗಳು ಮನೆಯಲ್ಲಿ ಆಚರಿಸಲ್ಪಡುವಂತೆ, ಕ್ರಿಶ್ಚಿಯನ್ ಹಬ್ಬದಂದೂ ಮನೆಯಲ್ಲಿ ಸಂತಸ ಉಕ್ಕುತ್ತಿರುತ್ತದೆ. ಇವರ ಬದ್ಧತೆಯನ್ನು ಕಂಡ ಮುಂದಿನ ಪೀಳಿಗೆಯ ಮಕ್ಕಳು ಅಂದರೆ ಅವರ ಮೈದುನ ನಾದಿನಿಯಂದಿರ ಮಕ್ಕಳು ಕೂಡ ಇವರಂತೆ ಸರ್ವ ಧರ್ಮಸಹಿಷ್ಣುಗಳಾಗಿದ್ದಾರೆ. ರಜೆ ಬಂದಿತೆಂದರೆ ಎಲ್ಲ ಮಕ್ಕಳು ಇವರ ಮನೆಯಲ್ಲಿಯೇ ಬೀಡುಬಿಡುತ್ತಾರೆ.

ಜೀವನದಾಶಯ:

'Forget and Forgive' ಇದು ಪೂರ್ಣಿಮಾರ ಜೀವನದ ಮೂಲಮಂತ್ರ. ತನಗೆ ತಪ್ಪು ಮಾಡಿದವರ ಬಗ್ಗೆ ಅವರೆಂದೂ ದ್ವೇಷ ಬೆಳೆಸಿಕೊಳ್ಳುವುದಿಲ್ಲ. ಅಲ್ಲದೆ ಆ ತಪ್ಪುಗಳನ್ನು ಮೆಲಕು ಹಾಕುತ್ತ ಕೂಡ ಕೂಡುವುದಿಲ್ಲ. ನೋವುಂಡಾಗ ಮೆಟ್ಟಿ ನಿಂತು ಜೀವನ್ಮುಖಿಯಾಗುವ ಗುಣಾತ್ಮಕ ಯೋಚನೆಯನ್ನೇ ಎಲ್ಲರೂ ಅವರಲ್ಲಿ ನೋಡಿದ್ದಾರೆ, ಕಂಡುಕೊಂಡಿದ್ದಾರೆ. ಸದಾ ಉಲ್ಲಾಸದಿಂದ ಮುನ್ನುಗ್ಗುವ ಮನೋಭಾವ ಅವರದ್ದಾಗಿದೆ. ಸದಾ ಕಲಿಯುತ್ತ, ಕಲಿಸುತ್ತ ತನ್ನ ಸುತ್ತಲಿನದ್ದನ್ನು ಮತ್ತಷ್ಟು ಸುಂದರಗೊಳಿಸುತ್ತ ಮುಂದುವರೆಯಬೇಕು ಎಂಬುದು ಅವರ ಜೀವನದ ಆಶಯವಾಗಿದೆ. ಬದುಕು ಯಾವತ್ತೂ ಸುಖದ ಸುಪ್ಪತ್ತಿಗೆಯಲ್ಲ, ಅಲ್ಲಿ ಮುಳ್ಳುಗಳು ಇವೆ. ಆ ಮುಳ್ಳುಗಳನ್ನು ಹೆಕ್ಕಿ ತೆಗೆದು ಹೂವುಗಳನ್ನು ಉಳಿಸಿಕೊಳ್ಳುವ ಪ್ರಯತ್ನ ಎಲ್ಲರದ್ದಾಗಬೇಕು ಎನ್ನುತ್ತಾರೆ.

OO

ಶೈಕ್ಷಣಿಕ ಚಿಂತನೆ : ಕರ್ತವ್ಯ ಪ್ರಜ್ಞೆ

ವೃತ್ತಿ–ಪ್ರವೃತ್ತಿ:

ಪೂರ್ಣಿಮಾಗೆ ಚಿಕ್ಕವಳಿದ್ದಾಗಿಂದಲೂ ತನಗೆ ತಿಳಿದಿದ್ದನ್ನು ಇನ್ನೋರ್ವರಿಗೆ ಕಲಿಸಿಕೊಡುವುದೆಂದರೆ ತುಂಬಾ ಇಷ್ಟದ ವಿಷಯವಾಗಿತ್ತು. ಶಾಲೆಯಲ್ಲಿದ್ದಾಗ ಕಲಿಯುವುದರಲ್ಲಿ ಮುಂದಿರುವುದರಿಂದ ಎಲ್ಲ ಶಿಕ್ಷಕ ವೃಂದದವರ ಅಚ್ಚುಮೆಚ್ಚಿನ ವಿದ್ಯಾರ್ಥಿನಿಯಾಗಿ ಬೆಳೆದಳು. ತರಗತಿಯಲ್ಲಿ ತನ್ನ ಕೆಲಸವನ್ನು ಮುಗಿಸಿ ತಿಳಿಯದ ಹಿಂದುಳಿದ ಗೆಳತಿಯರ ನೆರವಿಗೆ ನಿಲ್ಲುತ್ತಿದ್ದರು. ಸಹಪಾಠಿಗಳಿಗೆ ಅರ್ಥವಾಗದ ವಿಷಯವನ್ನು ಅರ್ಥವಾಗುವಂತೆ ಹೇಳುವುದೆಂದರೆ ಆಕೆಗೆ ಎಲ್ಲಿಲ್ಲದ ಖುಷಿ. ಅವರು ತಾವೇ ಹೇಳಿಕೊಳ್ಳುವಂತೆ ಅವರು ಪಿ.ಯು.ಸಿ.ಯಲ್ಲಿ ಓದುತ್ತಿದ್ದಾಗಿನ ಘಟನೆಯಿದು.

ಪೂರ್ಣಿಮಾರವರ ಚಿಕ್ಕಪ್ಪನವರು ಆಗಿನ ಆಂಧ್ರಪ್ರದೇಶದ ಖಮ್ಮಾಮ ಜಿಲ್ಲೆಯ ಸಿಂಗರೇನಿ ಕಾಲರಿಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವರ ಮಗ ಆಗ ಎರಡನೆಯ ತರಗತಿಯಲ್ಲಿದ್ದ. ಅವರು ಅಲ್ಲಿಂದ ಬೆಂಗಳೂರಿಗೆ ಬಂದು ಕೃಷ್ಣರಾಜಪುರಂನ ಐ.ಟಿ.ಐ. ಕಂಪನಿಯ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳಾದರು. ಮಗು ಮಹೇಶ ಆಂಧ್ರಪ್ರದೇಶದಲ್ಲಿ ಆಂಗ್ಲ ಮಾಧ್ಯಮದ ವಿದ್ಯಾರ್ಥಿಯಾದರೂ ಒಂದು ಭಾಷೆಯಾಗಿ ತೆಲಗು ಕಲಿತಿದ್ದ. ಬೆಂಗಳೂರಿಗೆ ಬಂದಾಕ್ಷಣ ಆತನಿಗೆ ಕನ್ನಡ ಕಬ್ಬಿಣದ ಕಡಲೆಯಾಯಿತು. ಶಾಲೆಯಲ್ಲಿ ಟೀಚರ್‌ರಿಂದ

ಬೈಗಳು, ಮನೆಪಾಠಕ್ಕೆ ಬರುವ ಮೇಷ್ಟ್ರಿಂದ ಮೈಮೇಲೆ ಬರೆಬರುವಂತೆ ಹೊಡೆತಗಳಿರುತ್ತಿದ್ದವು. ದೈನಂದಿನ ಹೊಡೆತ, ಬೈಗಳುಗಳಿಂದ ಆತನ ಬಾಲ್ಯವು ನರಕವಾಯಿತು. ಆಗ ಬೆಂಗಳೂರಿನಲ್ಲಿಯೇ ಇದ್ದ ಅಕ್ಕ ಪೂರ್ಣಿಮಾಳ ಎದುರು ಪುಟ್ಟ ಮಹೇಶ ತನ್ನ ಕಷ್ಟತೋಡಿಕೊಂಡ. ಆಗ ಪೂರ್ಣಿಮಾ 'ನೀನು ದಸರಾ ರಜೆಯಲ್ಲಿ ಹದಿನೈದು ದಿನ ನನ್ನ ಬಳಿ ಬಾ, ನಾವಿಬ್ಬರೂ ಕನ್ನಡ ಕಲಿಯೋಣ' ಎಂದಳು. ಅಂತೆಯೇ ಪುಟ್ಟ ಮಹೇಶ ತನ್ನ ಪುಟ್ಟದಾದ ಬ್ಯಾಗ್ ತೆಗೆದುಕೊಂಡು ಅಕ್ಕನ ಬಳಿ ಬಂದ. ಹದಿನೈದು ದಿನ ಇಬ್ಬರು ಖುಶಿ ಖುಶಿಯಿಂದ ಕನ್ನಡದ ಅಕ್ಷರಗಳ ಹರಿವಿನಲ್ಲಿ ಕಣ್ಣುಮುಚ್ಚಾಲೆಯಾಡಿ ಕನ್ನಡವನ್ನು ಕಲಿಸಿ ಕಲಿತರು. ಪೂರ್ಣಿಮಾ ಹೇಳುವಂತೆ "ಆಗೇ ನನಗೆ ತಿಳಿಯಿತು, ನಾನು ಚೆನ್ನಾಗಿ ಕಲಿಸಬಲ್ಲೆ ಎಂದು." ಹೀಗೆ ಕಲಿತು ಕಲಿಸುವುದು, ಕಲಿಸುತ್ತ ಕಲಿಯುವುದು ಪೂರ್ಣಿಮಾರ ಪ್ರವೃತ್ತಿಯಾಯಿತು. ಮುಂದೆ ಎಮ್.ಎ. ಮುಗಿದಾಗ ಸಹಜವಾಗಿ ಅವರು ಶಿಕ್ಷಕಿಯಾಗುವುದನ್ನೇ ನಿಶ್ಚಯಿಸಿ, ಅದನ್ನೇ ತಮ್ಮ ಮುಖ್ಯ ವೃತ್ತಿಯನ್ನಾಗಿಸಿಕೊಂಡರು.

ಬೋಧಕ ವೃತ್ತಿಗೆ ತೊಡಗಿಸಿಕೊಂಡಾಗ ಅವರ ಮಗಳು ಪೂಜಾ ಏಳು ತಿಂಗಳ ಮಗುವಾಗಿದ್ದಳು. ಆದರೆ ತಾನು ಕಲಿಯಬೇಕು. ಇತರರಿಗೂ ಕಲಿಸಬೇಕೆನ್ನುವುದು ಪೂರ್ಣಿಮಾಳ ಉತ್ಕಟ ಅಭಿಲಾಷೆ. ಹಾಗಾಗಿ ಮಗು ತನ್ನ ಸಂಯಮ ಕಳೆದುಕೊಳ್ಳುವ ಮುನ್ನವೇ ಮನೆಗೆ ಬರಬೇಕು ಎನ್ನುವ ಅಳಲು ಬೇರೆ. ಅದಕ್ಕಾಗಿ ಸ್ವತಃ ಆಂಗ್ಲಭಾಷೆಯಲ್ಲಿ ಎಮ್.ಎ. ಮಾಡಿದ್ದರೂ ಸಹಿತ ಪೂರ್ಣಿಮಾ ತಮ್ಮ ಶಿಕ್ಷಕ ವೃತ್ತಿ ಪ್ರಾರಂಭ ಮಾಡಿದ್ದು ಮನೆಗೆ ಹತ್ತಿರವಿರುವ ಒಂದು ಪುಟ್ಟಮಕ್ಕಳ ಶಾಲೆಯಿಂದ. 'ಮನೆಯಲ್ಲಿ ಪುಟ್ಟ ಪೂಜಾಳ ವಾತ್ಸಲ್ಯ. ಶಾಲೆಯಲ್ಲಿ ನರ್ಸರಿ ಮಕ್ಕಳ ತೊದಲುನುಡಿ, ಆ ಯಾವುದೇ ಕಟ್ಟಳೆಯಿಲ್ಲದ ಪ್ರೀತಿ ನನ್ನನ್ನು ಬಹಳ ಬೆಳೆಸಿತು' ಎಂದು ಪೂರ್ಣಿಮಾ ಹೇಳಿಕೊಳ್ಳುವರು.

ನ್ಯಾಶನಲ್ ಕಾಲೇಜು:

ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾಗಲೇ ನ್ಯಾಶನಲ್ ಕಾಲೇಜಿನಲ್ಲಿ ಆಂಗ್ಲಭಾಷಾ ಉಪನ್ಯಾಸಕಿಯ ಹುದ್ದೆ ಖಾಲಿಯಿದ್ದಾಗ ಆ ಸಂಸ್ಥೆಯ ಕಾರ್ಯದರ್ಶಿಗಳಾದ ಪ್ರೊ. ಎಸ್.ಜಿ. ಪಾಟೀಲರು ಆಡಳಿತ ಮಂಡಳಿಯವರು ಪೂರ್ಣಿಮಾರನ್ನೇ ಸಂಪರ್ಕಿಸಿದರು. ಹೀಗೆ ನ್ಯಾಶನಲ್ ಕಾಲೇಜಿನೊಡನೆ ಅವರ ಸಂಪರ್ಕವೇರ್ಪಟ್ಟಿತು.

ನ್ಯಾಶನಲ್ ಕಾಲೇಜಿನ ಕಾರ್ಯದರ್ಶಿಗಳಾದ ಪ್ರೊ. ಎಸ್.ಜಿ. ಪಾಟೀಲರನ್ನು ಹಾಗು ಅಂದಿನ ಅಧ್ಯಕ್ಷರಾದ ದಿ॥ ಸಿದ್ರಾಮಪ್ಪ ಪಾಟೀಲರನ್ನು ಆತ್ಮೀಯವಾಗಿ ನೆನೆಯುತ್ತಾರೆ. ಅವರ ಬೆನ್ನುತಟ್ಟುವಿಕೆ ನನ್ನನ್ನು ಕಷ್ಟಕಾಲದಲ್ಲಿ ಗಟ್ಟಿಯಾಗಿ ನಿಲ್ಲುವಂತೆ ಮಾಡಿತು ಎನ್ನುತ್ತಾರೆ.

೧೯೯೦ರಲ್ಲಿ ಅವರ ಕಾರ್ಯವೈಖರಿ, ಪ್ರಾಮಾಣಿಕತೆಯನ್ನು ಮೆಚ್ಚಿ ನ್ಯಾಶನಲ್ ಕಾಲೇಜಿನ ಪ್ರಾಂಶುಪಾಲರಾಗಿ ನಿಯುಕ್ತಿ ಮಾಡಲಾಯಿತು. ವಿದ್ಯಾಭ್ಯಾಸ ಮುಗಿಯುವರೆಗೂ ಮಕ್ಕಳು ಬೇಡವೆಂದು ನಿರ್ಧರಿಸಿ, ಈಗ ವಿದ್ಯಾಭ್ಯಾಸ ಮುಗಿದ ಮೇಲೆ ತಮ್ಮ ಸಂಸಾರವನ್ನು ಬೆಳೆಸಿಕೊಂಡು, ಎಲ್ಲರ ಮೆಚ್ಚುಗೆಗೆ, ಪ್ರೀತಿಗೆ ಪಾತ್ರರಾದರು.

೧. ವಿದ್ಯಾರ್ಥಿ ಪತ್ರ:

ಜಾರ್ಜ್ ಮರಣ ಹೊಂದಿದ್ದ ಮೇಲೆ ಪೂರ್ಣಿಮಾರವರು ಬಹಳಷ್ಟು ಉದಾಸೀನತೆಗೊಳಗಾಗಿದ್ದರು. 'ತಾವಾಯಿತು. ತಮ್ಮ ಕೆಲಸವಾಯಿತು' ಎಂಬಂತೆ ಏಕಾಂಗಿಯಾಗಿ ಇರುತ್ತಿದ್ದರು. ಈ ಮೊದಲಿನ ಲವಲವಿಕೆ ಅವರಲ್ಲಿ ಕಾಣದಿದ್ದದ್ದು ಸಹೋದ್ಯೋಗಿಗಳಿಗೆ, ವಿದ್ಯಾರ್ಥಿಗಳಿಗೆ ಎದ್ದುತೋರುತ್ತಿತ್ತು. ಆದರೆ ಯಾರು ಈ ಬಗ್ಗೆ ಅವರೊಂದಿಗೆ ಮಾತನಾಡುತ್ತಿರಲಿಲ್ಲ. ಒಮ್ಮೆ ಮುಗ್ಧ ವಿದ್ಯಾರ್ಥಿಯೊಬ್ಬ

ಮೇಡಮ್ ಅವರೊಂದಿಗೆ ಮುಖಾಮುಖಿಯಾಗಿ ಮಾತನಾಡಲು ಧೈರ್ಯ ಸಾಲದೇ ಮುಚ್ಚಿದ ಲಕೋಟೆಯೊಂದನ್ನು ಅವರ ಟೇಬಲ್ ಮೇಲಿಟ್ಟು ಹೊರಹೋದನು. ಅದನ್ನು ಕೈಗೆತ್ತಿಕೊಂಡು ಓದಿದಾಗ ಪೂರ್ಣಿಮಾಗೆ ಆಶ್ಚರ್ಯವಾಯಿತು. 'ಈ ಮೊದಲಿನಂತೆ ಮಂದಸ್ಮಿತ, ಹಾಸ್ಯ ಚಟಾಕಿ ಹಾರಿಸುತ್ತ ಪಾಠ ಹೇಳುತ್ತಿದ್ದ ರೀತಿ, ಉತ್ಸಾಹದ ಚಿಲುಮೆಯಾಗಿರುತ್ತಿದ್ದ ಹಾವಭಾವ, ಉದಾಸೀನತೆಯಿಂದ ಹೊರಗಾದ ಚೈತನ್ಯಶಾಲಿ ನಮ್ಮ ಮೇಡಮ್ ಬೇಕಾಗಿದ್ದಾರೆ' ಎಂಬುವುದು ಆ ಪತ್ರದ ಸಾರವಾಗಿತ್ತು. ಇದನ್ನು ಓದಿದಾಗ ತಮ್ಮ ಇರುವಿಕೆಯ ಬಗ್ಗೆ ಅರಿವು ಮೂಡಿತು. ಅಂದಿನಿಂದ ತಮ್ಮ ದುಃಖವನ್ನು ಮರೆತು ಪಾಠ ಬೋಧನೆ, ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು.

೨. ಸರಣಿ ಉಪನ್ಯಾಸ:

ನ್ಯಾಶನಲ್ ಕಾಲೇಜಿನ ಪ್ರಾಂಶುಪಾಲರಾಗಿ, ಮನೆಯಲ್ಲಿ ಮಕ್ಕಳಿಗೆ ತಂದೆ-ತಾಯಿ ಎಲ್ಲವೂ ಆಗಿದ್ದರು. ಅವರ ಮಕ್ಕಳು ಅವರನ್ನು Daddy Pops ಎಂದು ಕರೆಯುತ್ತಾರೆ. ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಶಿಕ್ಷಕಿಯಾಗಿ, ಪೂರ್ಣಿಮಾ ಸಾಮಾಜಿಕ ರಂಗದಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಂಡರು. Family Planning Association of Indiaದ ಸದಸ್ಯರಾಗಿ ಅವರು ಈ ರಂಗದಲ್ಲಿ ಕೆಲಸಕ್ಕೆ ಮುಂದಡಿಯಿಟ್ಟರು. ವಿವಿಧ ಹಳ್ಳಿಗಳಿಗೆ ಹೋಗಿ ಹೆಣ್ಣುಮಕ್ಕಳ, ಹದಿಹರೆಯದವರ ಕಷ್ಟಕೂಟಲೆಗಳಿಗೆ ಕಿವಿಯಾಗುವುದು; ಅವರಿಗೆ ತಕ್ಕ ಸಮಾಧಾನ ನೀಡುವುದು ಪೂರ್ಣಿಮಾಗೆ ಖುಷಿ ಕೊಡುವ ವಿಷಯವಾಯಿತು. ಅವರ ಪ್ರಾಮಾಣಿಕ ನಡೆ-ನುಡಿ ಅವರನ್ನು ಹಂತ ಹಂತವಾಗಿ ಮೇಲೆ ತೆಗೆದುಕೊಂಡು ಹೋಯಿತು. ಕೊನೆಗೊಮ್ಮೆ ಅವರು FPAIನ ರಾಷ್ಟ್ರೀಯ ಕಾರ್ಯಕಾರಣಿಯಲ್ಲಿ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಇಂದಿಗೂ ಅವರ ಸೇವೆ FPAIನಲ್ಲಿ ಅವಿರತವಾಗಿ ನಡೆದಿದೆ. ಆಂಗ್ಲಭಾಷೆಯಲ್ಲಿರುವ ಪ್ರಭುತ್ವದಿಂದಾಗಿ

ದೂರದರ್ಶನದಲ್ಲಿ ೨೦೧೨ರಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಆಂಗ್ಲಭಾಷೆಯನ್ನು ಸುಲಭಗೊಳಿಸುವ ಪ್ರಸಾರಮಾಲೆಯಲ್ಲಿ ಪೂರ್ಣಿಮಾ ಸರಣಿ ಉಪನ್ಯಾಸ ನೀಡಿದರು.

ಜ್ಞಾನಸುಧಾ ಶಿಕ್ಷಣ ಸಂಸ್ಥೆ:

ಬೀದರ್ ಭಾಗದ ಜನರ ಆಶೋತ್ತರಗಳಿಗೆ ಸ್ಪಂದಿಸುವ ಉದ್ದೇಶ ಹಾಗು ಈ ಭಾಗದಲ್ಲಿ ಉನ್ನತ ಮಟ್ಟದ ಶಿಕ್ಷಣ ಎಲ್ಲರಿಗೂ ಲಭ್ಯವಾಗಬೇಕೆಂಬ ಮಹಾದಾಸೆಯಿಂದ ಜ್ಞಾನಸುಧಾ ಶಿಕ್ಷಣ ಸಂಸ್ಥೆಯನ್ನು ೨೦೦೫ರಲ್ಲಿ ಪ್ರಾರಂಭಿಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಪೂರ್ಣಿಮಾರವರು ಹೇಳುವಂತೆ "ನನ್ನ ಈವರೆಗಿನ ಪ್ರಯಾಣವು ತುಂಬಾ ಉಲ್ಲಾಸಭರಿತವಾಗಿದೆ. ಕಲಿಕೆ ಎಂದಿಗೂ ಕೊನೆಗೊಳ್ಳಬಾರದು. ಅದು ಜೀವನಧರ್ಮವಾಗಬೇಕು. ಮಕ್ಕಳು ಮಗುವಿನ ಮುಗ್ಧತೆಯನ್ನು ಜೀವನಪರ್ಯಂತ ಕಾಯ್ದುಕೊಂಡು ಮುಂದುವರಿದು ಜಗತ್ತಿನ ವಿಸ್ಮಯಗಳನ್ನು ಅರಿತು ಸಂಭ್ರಮಿಸಲು ಪ್ರಯತ್ನಪಟ್ಟರೆ, ಜೀವನವೇ ಶಿಕ್ಷಣದ ಅಪೂರ್ವ ಮಾದರಿಯಾಗುತ್ತದೆ". ಎನ್ನುವ ಮಾತು ಸಾರ್ವಕಾಲಿಕವಾದುದು.

ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿ ಸಾಧಿಸುವ ದಿಶೆಯಲ್ಲಿ ಜ್ಞಾನಸುಧಾ ಶಿಕ್ಷಣ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ. ಸರ್ವರ ಹಿತಚಿಂತನೆಯ ಧ್ಯೇಯವನ್ನು ಕಂಡುಕೊಳ್ಳುವುದಕ್ಕಾಗಿ ಸಂಸ್ಥೆಯು ಕ್ಲಿಷ್ಟಕರ ಸಾಮಾಜಿಕ ವಿಷಯಗಳೊಡನೆ ಐತಿಹಾಸಿಕ ಸತ್ಯವನ್ನು ಬೆಸುಗೆಗೊಳಿಸುತ್ತಿದೆ. ಇದು ಮಕ್ಕಳಲ್ಲಿ ತರ್ಕಬದ್ಧ ಯೋಚನಾಲಹರಿಯನ್ನು ಹುಟ್ಟುಹಾಕಿ ಪೋಷಿಸುತ್ತದೆ. ಶೈಕ್ಷಣಿಕ ಕಾರ್ಯಚಟುವಟಿಕೆಗಳಲ್ಲಿ ನುರಿತ ವಿದ್ಯಾರ್ಥಿಗಳು ಮುಂದೆ ವೈಚಾರಿಕ, ತಾರ್ಕಿಕ ಮನೋಭಾವನೆಯನ್ನು ಬೆಳೆಸಿಕೊಳ್ಳುತ್ತಾರೆ ಎಂಬುದು ಅವರ ದೃಢವಾದ ವಿಶ್ವಾಸವಾಗಿದೆ. ಇದೇ ಹಿನ್ನಲೆಯಲ್ಲಿಯೇ ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಮಕ್ಕಳು ಪ್ರಗತಿ ಸಾಧಿಸುತ್ತಿದ್ದಾರೆ. ಶಿಕ್ಷಕರ ಮಾರ್ಗದರ್ಶನ, ಸಂಸ್ಥೆಯ ಅಧ್ಯಕ್ಷೆ ಪೂರ್ಣಿಮಾ

ಹಾಗೂ ನಿರ್ದೇಶಕರಾದ ಮುನೇಶ್ವರ ಲಾಖಾ ಅವರ ವ್ಯಕ್ತಿತ್ವ ವಿಕಸನ ತಿಳುವಳಿಕೆ ಮತ್ತು ವಿದ್ಯಾರ್ಥಿಗಳು ಸ್ವಯಂತಿಳುವಳಿಕೆಯಿಂದ ತ್ವರಿತಗತಿಯಲ್ಲಿ ಬದಲಾಗುತ್ತಿರುವ ಸಮಾಜಕ್ಕೆ ಒಳಿತು ಮಾಡಲು ಅಣಿಗೊಳ್ಳುತ್ತಿದ್ದಾರೆ ಎಂಬುದು ಹೆಮ್ಮೆಯ ಸಂಗತಿಯಾಗಿದೆ.

"ವಸುಧೈವ ಕುಟುಂಬಕಂ" ಎಂಬುದು ಜ್ಞಾನಸುಧಾ ಶಿಕ್ಷಣಸಂಸ್ಥೆಯ ಧ್ಯೇಯವಾಕ್ಯ. ಕುವೆಂಪುರವರ ವಿಶ್ವಮಾನವತಾವಾದವು ಎಲ್ಲರಿಗೂ ದಾರಿದೀಪವಾಗಿದೆ. ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಮಕ್ಕಳು ವಿಶ್ವದೆಲ್ಲೆಡೆ ಪಸರಿಸಿ ಶಾಂತಿದೂತರಾಗಿ ವಿಶ್ವವನ್ನು ಒಳ್ಳೆಯ ಮಾರ್ಗದಲ್ಲಿ ಮುನ್ನಡೆಸುವ ರೂವಾರಿಗಳಾಗಬೇಕೆಂಬ ಆಶಯದಿಂದ ಸಂಸ್ಥೆಯಡಿಯಲ್ಲಿ ನಿರಂತರ ಕಾರ್ಯ ಚಟುವಟಿಕೆಗಳು ನಡೆಯುತ್ತಿರುತ್ತವೆ.

ಇಂದು ಹೆಮ್ಮರವಾಗಿ ಬೆಳೆದುನಿಂತಿರುವ ಜ್ಞಾನಸುಧಾ ಶಿಕ್ಷಣ ಸಂಸ್ಥೆ ೨೦೦೫ರ ಜನರಿಯಲ್ಲಿ ಮಾತ್ರ ಒಂದು ಕನಸಾಗಿತ್ತು. ಈ ಸಂಸ್ಥೆಯ ಅಧ್ಯಕ್ಷೆ ಪೂರ್ಣಿಮಾರವರು ಅಂದು ತಮ್ಮ ಮಿತ್ರರೊಡನೆ ಕೂಡಿಕೊಂಡು ಅವರ ಮನೆಯಲ್ಲಿಯೇ ನಡೆದ ಆ ಒಂದು ವಿಚಾರವಿನಿಮಯದಲ್ಲಿ 'ಜ್ಞಾನಸುಧಾ' ಎಂಬುದು ಬರೀ ಒಂದು ವಿಷಯವಾಗಿ ಹೊಮ್ಮಿತ್ತು. ಗೆಳತಿಯರು ಹಾಗು ಅವರ ಮನೆಯವರು ಸೇರಿಕೊಂಡು ಮಾತಿಗೆ ಕುಳಿತಾಗ ವಿಷಯ ಅಂದಿನ ಬೀದರಿನ ಶಿಕ್ಷಣದ ವಸ್ತುಸ್ಥಿತಿಯೆಡೆಗೆ ತಿರುಗಿತ್ತು. ಆಗ ಪೂರ್ಣಿಮಾರವರು ಬೀದರಿನ ನ್ಯಾಶನಲ್ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದರು. ಸಂದರ್ಭೋಚಿತವಾಗಿ ಅವರು ನಾವೆಲ್ಲ ನಮ್ಮಿಂದ ಶಿಕ್ಷಣಕ್ಕಾಗಿ ಏನು ಮಾಡಲಾಗುತ್ತದೆಯೋ ಅದನ್ನು ಮಾಡಬೇಕು. ಬರಿದೇ ಮಾತನಾಡಿದರೆ ಏನೂ ಮಾಡಲಾಗದು ಎಂದು ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಅಂದು ಜೊತೆಯಾಗಿ ಕುಳಿತು ಮಾತನಾಡಿದವರೆಂದರೆ ಮುನೇಶ್ವರ ಲಖಾ, ಸಂಗೀತಾ

ಲಖಾ, ಚಂದ್ರಶೇಖರ ಪಾಟೀಲ, ನಂದಿನಿ ಪಾಟೀಲ ಮತ್ತು ಪೂರ್ಣಿಮಾರವರು. ಆಗ ಜೊತೆಗಿದ್ದವರು ನೀವು ನಮ್ಮೊಡನಿರುವುದಾದರೆ ನಾವು ಒಂದು ಶಿಕ್ಷಣಸಂಸ್ಥೆ ಹುಟ್ಟುಹಾಕಲು ತಯಾರು ಎಂದರು. ಅಲ್ಲಿ ಶುರುವಾಯಿತು ಒಂದು ಮಹಾಗಾಥೆಯ ಮೊದಲ ಪುಟ.

ಹೀಗೆ ಪ್ರಾರಂಭಗೊಂಡ ಜ್ಞಾನಸುಧಾ ಶಿಕ್ಷಣ ಸಂಸ್ಥೆಯು ಬೀದರಿನ ಪ್ರಸ್ತುತದ ಶೈಕ್ಷಣಿಕ ಲೋಕದಲ್ಲಿ ದಾಪುಗಾಲುಗಳನ್ನಿಡುತ್ತ ಎಷ್ಟೋ ಜನ ಸಂತ್ರಸ್ತ ಮಹಿಳೆಯರಿಗೆ, ದಿಕ್ಕುತೋಚದವರಿಗೆ ದಾರಿದೀಪವಾಗಿ, ಸಾವಿರಾರು ಜನರ ಆಶಾಕಿರಣವಾಗಿ ಬೆಳೆದಿದೆ. ನಿತ್ಯವೂ ಜ್ಞಾನದ ಸುಧೆಯಲ್ಲಿ ವಿದ್ಯಾರ್ಥಿಗಳು ಮಿಂದೇಳುತ್ತಾರೆ. ಈಗ ಶಿಕ್ಷಣ ಸಂಸ್ಥೆಯಡಿಯಲ್ಲಿ ಮೂರು ಪ್ರಾರಂಭಿಕ ಶಾಲೆಗಳು, ಒಂದು ೧ರಿಂದ ೧೦ರವರೆಗಿನ ಸಿ.ಬಿ.ಎಸ್.ಇ ಶಾಲೆ ಹಾಗು ಒಂದು ಎಸ್.ಎಸ್.ಎಲ್.ಸಿ ಬೋರ್ಡ್‌ನ ಸ್ವತಂತ್ರ ಪ್ರೌಢ ಶಾಲೆ, ಒಂದು ಪಿ.ಯು.ಸಿ.ಗಾಗಿ ವಿಜ್ಞಾನ ಕಾಲೇಜು ನಡೆಯುತ್ತಿದೆ. ಅಲ್ಲದೆ ಇನ್ನೂ ವಿವಿಧ ಯೋಜನೆಗಳು ದಿನದ ಬೆಳಕು ಕಾಣಲು ಕಾಯುತ್ತಿವೆ. ವಿವಿಧ ಊರುಗಳಿಂದ ಜನರು ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಶಾಲಾ ಆವರಣಗಳನ್ನು ನೋಡಿಕೊಂಡು ಹೋಗಲು ಬರುತ್ತಾರೆ. ಇದು ಇಂದು ಇಡೀ ಹೈದ್ರಾಬಾದ್ ಕರ್ನಾಟಕ ಭಾಗದ ಹೆಮ್ಮೆಯ ಸಂಸ್ಥೆಯಾಗಿದೆ. ಇಂದು ಈ ಸಂಸ್ಥೆಯು ಪೂರ್ಣಿಮಾರ ಮುಂದಾಳುತನದಲ್ಲಿ ಬೆಳೆದಿದೆ. ಬೆಳೆಯುತ್ತಲೇ ಇರುತ್ತದೆ ಎನ್ನುವ ಆಶಯವನ್ನು ಈ ಭಾಗದ ಸಾವಿರಾರು ವಿದ್ಯಾರ್ಥಿಗಳು ಹೊಂದಿದ್ದಾರೆ. ಇದಕ್ಕೆ ಅನೇಕ ಸಾಹಿತಿಗಳು, ಚಿಂತಕರು, ಶಿಕ್ಷಣತಜ್ಞರು ಬದ್ಧರಾಗಿದ್ದಾರೆ.

ಧರ್ಮ ತತ್ತ್ವ ಜಿಜ್ಞಾಸೆ

ಹಿಂದೂ ಧರ್ಮದಲ್ಲಿ ಹುಟ್ಟಿ ಬೆಳೆದಿರುವ ಪೂರ್ಣಿಮಾ ಧರ್ಮ ದೇವರ ಬಗೆಗೆ ಅಪಾರ ಗೌರವಭಾವ ಹೊಂದಿರುವರು. ಧರ್ಮವೆಂದರೆ ಅವರು ತಿಳಿದುಕೊಂಡಿರುವಂತೆ ಜೀವನಕ್ಕೊಂದು ನೆಲೆಗಟ್ಟು. ಸರಿಯಾದ ದಾರಿಯನ್ನು ತಿಳಿಸಿಕೊಡುವುದೇ ನಿಜವಾದ ಧರ್ಮ. ಒಳ್ಳೆಯದರ ಬಗ್ಗೆ ಗೌರವ ಕೊಡುವುದು, ಸರಿದಾರಿಯಲ್ಲಿ ನಡೆಯುವಂತೆ ಮಾರ್ಗದರ್ಶನ ನೀಡುವುದು. ಪರೋಪಕಾರ ಮಾಡುತ್ತ ಯಾರಿಗೂ ನೋವನ್ನುಂಟು ಮಾಡದಿರುವುದೇ ಧರ್ಮ. ಧರ್ಮದ ದಾರಿಯಲ್ಲಿ ನಡೆಯುವುದು ಕಠಿಣವಾದರೂ ಅನುಕೂಲಕರವಾದುದು. ದಾರಿಯಲ್ಲಿ ಸಾಗುವುದು ಅವಶ್ಯಕವಾಗಿರುತ್ತದೆ.

ಧರ್ಮವೆಂದರೆ ಸತ್ಯ-ಅಸತ್ಯದ ನಡುವಿನ ಆಯ್ಕೆ. ಬೇರೆಯವರಿಗೆ ತೊಂದರೆಯಾಗದಂತೆ ನಡೆದುಕೊಳ್ಳುವುದು. ಅಸತ್ಯವನ್ನು ಮೆಟ್ಟಿನಿಂತು ಸತ್ಯದ ಪರವಾಗಿ ಯಾವುದೇ ತ್ಯಾಗಕ್ಕೂ ಸಿದ್ಧವಾಗಿರುವುದು ಧರ್ಮ ಎನಿಸಿಕೊಳ್ಳುತ್ತದೆ. ಅದರ ಪಾಲನೆ ಮಾಡಿದಷ್ಟು ಮನುಷ್ಯನ ಅಂತಸ್ತು ಹೆಚ್ಚಾಗುತ್ತದೆ ಎಂದು ಪೂರ್ಣಿಮಾ ಅಭಿಪ್ರಾಯಪಡುತ್ತಾರೆ.

ಧರ್ಮವೆಂದರೆ ಸೋಗಲಾಡಿತನ ಅಲ್ಲ. ಬಣ್ಣ ಬಣ್ಣದ ಬೆಲೆಯುಳ್ಳ ವೇಷಭೂಷಣ ಧರಿಸುವುದಲ್ಲ. ಕೈಬೆರಳುಗಳಿಗೆಲ್ಲ ಉಂಗುರು ಹಾಕಿಕೊಳ್ಳುವುದಲ್ಲ. ತೋರಿಕೆಯ ಲಾಂಛನಗಳೇ ಧರ್ಮದ ಪ್ರದರ್ಶಿಕೆಗಳಲ್ಲ. ಧರ್ಮ ಯಾವತ್ತೂ

ಅಂತರಂಗದ ಉನ್ನತಿಗೆ ಸಹಾಯಕವೇ ಹೊರತು ಬಾಹ್ಯಾಡಂಬರವಲ್ಲ. ಉನ್ನತಾಸನದಲ್ಲಿ ಕುಳಿತು ಆಶೀರ್ವದಿಸುವ ಭಂಗಿಯಲ್ಲ.

ಸಾಧನೆಯ ಪಥದಲ್ಲಿದ್ದು, ಇತರರನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗುವುದು. ಕಷ್ಟ-ನಷ್ಟ, ನೋವು-ಯಾತನೆಗಳನ್ನು ಸಹಜವೆಂಬಂತೆ ಸ್ವೀಕರಿಸುವುದು. ನೊಂದವರ ಕಣ್ಣೀರು ತೊಡೆದುಹಾಕುವುದು. ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದು. ಶಿಕ್ಷಣಾರ್ಥಿಗಳಿಗೆ ಮಾರ್ಗದರ್ಶನ ಮಾಡುವುದೇ ಅಮೂಲ್ಯವಾದ ಧರ್ಮದ ಮಾರ್ಗವಾಗಿದೆ ಎನ್ನುತ್ತಾರೆ.

ಭಾರತದಲ್ಲಿ ಹಿಂದು, ಬೌದ್ಧ, ಜೈನ, ಇಸ್ಲಾಮ್ ಇತ್ಯಾದಿ ಧರ್ಮಗಳಿವೆ. ಧರ್ಮವೆಂದರೆ ದಾರಿ, ನಡವಳಿಕೆಗಳ ಮೊತ್ತ. ಪ್ರಶ್ನಾತೀತವಾದ ಪವಿತ್ರಲೋಕವಾಗಿದೆ. ಅದನ್ನು ರಕ್ಷಿಸುವುದು, ಪಾಲಿಸುವುದು ಜನರ ಕರ್ತವ್ಯವಾಗಿದೆ ಎಂದು ಜನಧರ್ಮ ಪ್ರತಿಪಾದಿಸುತ್ತದೆ. ತಪ್ಪನ್ನು ತಪ್ಪು ಎಂದು; ಸರಿಯಾದುದ್ದನ್ನು ಸರಿ ಎಂದು ಹೇಳುತ್ತದೆ. ಎಲ್ಲ ಕಾಲಕ್ಕೂ ಮಾನವ ಸಮಾಜಕ್ಕೆ ಮಾರ್ಗದರ್ಶಕವಾಗಿ ಕೆಲಸ ಮಾಡುವ ವಿಶಾಲಾರ್ಥವೇ ಧರ್ಮ ಎನಿಸಿಕೊಳ್ಳುತ್ತದೆ. "ಧರ್ಮ ಎಂದಿಗೂ ಪೈಪೋಟಿಯ ವಸ್ತುವಾಗಬಾರದು. ಹಾಗೊಂದು ವೇಳೆ ಧರ್ಮವು ಪರಸ್ಪರ ಪೈಪೋಟಿಗೆ ಅನುವು ಮಾಡಿಕೊಟ್ಟರೆ ಸಮಾಜದಲ್ಲಿ ಅಶಾಂತಿ ತಲೆದೋರುತ್ತದೆ. ಧ್ವಜ ಕಟ್ಟಿಗೆಯ ಉದ್ದ ಅಳತೆಯೇ ಧರ್ಮದ ಮಾನದಂಡವಲ್ಲ. ಆಗದ ವ್ಯಕ್ತಿ, ವಸ್ತುವಿನ ಬಗ್ಗೆ ಅಪಪ್ರಚಾರ ಮಾಡಲಾರದೆ ಸಮಾಜದಲ್ಲಿ ನಿಜವಾದ ಮನುಷ್ಯ ಧರ್ಮ ಪಾಲನೆಯಾದರೆ ಮಾತ್ರ ಎಲ್ಲರೂ ನೆಮ್ಮದಿ ಬದುಕಲು ಸಾಧ್ಯವಾಗುತ್ತದೆ" ಎಂದು ಪೂರ್ಣಿಮಾರವರು ಪ್ರತಿಪಾದಿಸುತ್ತಾರೆ.

ಜಾರ್ಜ್ ಕ್ರಿಸ್ಟಿ ಇರುವರೆಗೆ ನಮ್ಮ ಬದುಕಿನಲ್ಲಿ ಜಾತಿ ಧರ್ಮದ ಪ್ರಶ್ನೆ ಉದ್ಭವಿಸಲಿಲ್ಲ. ಜೊತೆಯಲ್ಲಿದ್ದರೂ ಮೇಲು-ಕೀಳಿನ ಬಗ್ಗೆ ಮಾತಾಡಿಕೊಂಡವರಲ್ಲ. ಗಂಡು ಶ್ರೇಷ್ಠ ಹೆಣ್ಣು ಕನಿಷ್ಠವೆಂದು ಭಾವಿಸಲಿಲ್ಲ. ತಾವು ನಂಬಿದ ಧರ್ಮಶ್ರದ್ಧೆಯನ್ನು

ಪರಸ್ಪರ ಅರ್ಥಮಾಡಿಕೊಂಡು ಸಹಚರ ಜೀವನ ಸಾಗಿಸುವುದೇ ನಾವು ಅನುಸರಿಸಿದ ಧರ್ಮವಾಗಿತ್ತು ಎನ್ನುತ್ತಾರೆ.

ಯಾವಾಗ ಅವರು ಹೊಟ್ಟೆ ನೋವಿನಿಂದ ಹೈದರಾಬಾದಿನ ಅಪೋಲೋ ಆಸ್ಪತ್ರೆ ಸೇರಿದರೋ ಅಂದಿನಿಂದ ತಾತ್ತ್ವಿಕ ಭಿನ್ನಾಭಿಪ್ರಾಯಗಳು ಬರಲಾರಂಭಿಸಿದವು. ಹಣೆಗೆ ಕುಂಕುಮವನ್ನಿಡುವ ಮಹಿಳೆ ಮನೆಗೆ ಬಂದ ಮೇಲೆ ಸಮಸ್ಯೆಗಳು ಪ್ರಾರಂಭವಾದವು ಎಂದು ಕ್ರಿಸ್ತಿ ಕುಟುಂಬದವರೆಲ್ಲ ಭಾವಿಸಲಾರಂಭಿಸಿದರು. ಹಣೆಯ ಕುಂಕುಮಕ್ಕೂ ಜಾರ್ಜ ಆಸ್ಪತ್ರೆಗೆ ದಾಖಲಾಗುವುದಕ್ಕೂ ಯಾವುದೇ ಸಂಬಂಧವಿಲ್ಲವೆಂಬುದು ಅವರಿಗೆ ಗೊತ್ತಾಗಲೇ ಇಲ್ಲ. ಅವರ ಮಾನಸಿಕ ಸ್ಥಿತಿ ಆ ಪರಿಸ್ಥಿತಿಯಲ್ಲಿ ವಿಚಿತ್ರವಾಗಿ ವರ್ತಿಸಲಾರಂಭಿಸಿತು.

ಅಪೋಲೊ ಆಸ್ಪತ್ರೆಯ ಆವರಣದಲ್ಲಿ ಸೇರಿಕೊಂಡಿದ್ದ ಜಾರ್ಜ್ ಕುಟುಂಬದ ಸದಸ್ಯರು, ಬಂಧು ಭಗಿನಿಯರು ಪೂರ್ಣಿಮಾರನ್ನು ಮಧ್ಯದಲ್ಲಿ ನಿಲ್ಲಿಸಿದ್ದರು. ಅವರೆಲ್ಲರು ವರ್ತುಲಾಕಾರದಲ್ಲಿ ಕುಳಿತು ಪ್ರಾರ್ಥನೆ ಸಲ್ಲಿಸಲು ಅಣಿಯಾದರು. ಅಲ್ಲಿಯ ನಿರೂಪಕರು ಸೇರಿದಂತೆ ಕೆಲವರು 'ನೀನು ಹಣೆಗೆ ಕುಂಕುಮಬೊಟ್ಟು ಇಡುತ್ತಿರವುದರಿಂದಲೇ ಜಾರ್ಜ್ ಸಾವನ್ನಪ್ಪುತ್ತಿದ್ದಾನೆ. ಕ್ರೈಸ್ತ್ ಧರ್ಮದಲ್ಲಿ ಕುಂಕುಮಕ್ಕೆ ನಿಷೇಧವಿದೆ. ಮಾಡಿದ ತಪ್ಪಿಗಾಗಿ ಜಾರ್ಜ್ ಬಲಿ ಕೇಳುತ್ತಿದೆ. ಆದ್ದರಿಂದ ಮೊದಲು ನೀನು ಹಣೆಯ ಮೇಲಿರುವ ಕುಂಕುಮವನ್ನು ಅಳಿಸು. ಇಲ್ಲದಿದ್ದರೆ ನಮ್ಮ ಮನೆತನಕ್ಕೆ ಉಳಿಗಾಲವಿಲ್ಲ. ನೀನೂ ಉದ್ಧಾರವಾಗುವುದಿಲ್ಲ' ಎಂದೆಲ್ಲ ಆರೋಪ ಮಾಡಿದರು. ಆದರೆ ಪೂರ್ಣಿಮಾ ಅವರೆಲ್ಲರ ಆರೋಪಗಳನ್ನು ಖಂಡಿಸಿದರು. ಜೀವದ ಒಂದು ಭಾಗ ಮರೆಯಾಗುತ್ತಿರುವ ಸಂದರ್ಭದಲ್ಲೂ ಅರ್ಥವಿಲ್ಲದವುಗಳನ್ನು ಚರ್ಚಿಸುತ್ತಿದ್ದೀರಿ. ವಾದ-ವಿವಾದದ ವಿಷಮ ಪರಿಸ್ಥಿತಿಯನ್ನು ಸೈದ್ಧಾಂತಿಕ ಹಿನ್ನೆಲೆಯಲ್ಲಿ ನಿಭಾಯಿಸಿದರು. ರೋಗಿಯ ಚಿಕಿತ್ಸೆಗೆ ಹಣ ಹೊಂದಿಸದೆ, ಆತನ ರೋಗದ ತೀವ್ರತೆ, ಅದರ ಕಾರಣವನ್ನು ಅರ್ಥ ಮಾಡಿಕೊಳ್ಳದೆ ಪ್ರಾರ್ಥನೆ ಸಲ್ಲಿಸುತ್ತ ಕುಳಿತರೆ ಏನೂ ಸಾಧಿಸಲಾಗದು.

ಪ್ರಾರ್ಥನೆಯಿಂದಲೇ ರೋಗಗಳು ವಾಸಿಯಾಗುವಂತಿದ್ದರೆ ಆಸ್ಪತ್ರೆಗಳೇ ಇರುತ್ತಿದ್ದಿಲ್ಲ. ಯಾರು ವೈದ್ಯಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುತ್ತಿದ್ದಲ್ಲ ಎಂದೆಲ್ಲ ಅವರಿಗೆ ತಿಳುವಳಿಕೆ ಹೇಳಿ ಸಮಾಧಾನಪಡಿಸಿದರು. 'ಹಣೆಯ ಮೇಲಿನ ಬೊಟ್ಟು ಅಳಿಸುವುದರಿಂದ ಜಾರ್ಜ್ ಬದುಕಿ ಉಳಿಯುವುದಾದರೆ ಅದಕ್ಕೆ ನಾನು ಸಿದ್ಧಳಾಗಿದ್ದೇನೆ' ಎಂದು ಅವರಿಗೆಲ್ಲ ಸವಾಲು ಹಾಕಿದರು. ಇವರ ಮಾತನ್ನು ಕೇಳಿ ಅವರೆಲ್ಲ ನಿರುತ್ತರಕ್ಕೆ ಜಾರಿದರು.

ದೇವರ ಅಸ್ತಿತ್ವ:

ಸೃಷ್ಟಿಯಲ್ಲೊಂದು ವಿಶಿಷ್ಟ ಶಕ್ತಿಯಿದೆ. ಅದರ ಬಲದಿಂದ ನಿರ್ದಿಷ್ಟ ಪರಿಭ್ರಮಣೆಯಲ್ಲಿದೆ. ಸದಾಕಾಲವು ಸುಸ್ಥಿತಿಯಲ್ಲಿದೆ. ಅದರಿಂದಲೇ ಸೃಷ್ಟಿಯ ಎಲ್ಲ ಆಗುಹೋಗುಗಳು ಜರುಗುತ್ತಲಿವೆ. ಅದು ಅಲ್ಪಮತಿಗಳ ಮಿತಿಗೆ, ತಿಳುವಳಿಕೆಗೆ ನಿಲುಕಲಾರದ ಸಂಗತಿ. ಯಾವುದೇ ಜಾತಿ ಮತ ಧರ್ಮಕ್ಕೆ ಸೀಮಿತವಲ್ಲದ ಆ ಶಕ್ತಿಗೆ ರೂಪು, ಬಣ್ಣಗಳಿಲ್ಲ. ಅದು ನಿರಾಕಾರ ನಿರ್ವಿಕಲ್ಪವಾದುದು. ಅದು ಜೀವಾತ್ಮವನ್ನು ಕಾಯ್ದಿಡುತ್ತ ಜ್ಞಾನಾಮೃತವನ್ನು ವೃದ್ಧಿಸುತ್ತದೆ. ಆತ್ಮದ ತಿಳುವಳಿಕೆಯನ್ನು ಹೆಚ್ಚಿಸುತ್ತದೆ. ಇದನ್ನೇ ನಾವು ದೇವರು ಎಂದು ಕರೆಯುತ್ತೇವೆ ಎನ್ನುತ್ತಾರೆ.

ಭಾರತೀಯರಲ್ಲಿ ಇರುವಷ್ಟು ಜಾತಿ ಮತಗಳು ಮತ್ತೊಂದು ದೇಶದಲ್ಲಿರಲಿಕ್ಕಿಲ್ಲ. ಪ್ರತಿಯೊಂದು ಜಾತಿಗೆ ಜನಾಂಗೀಕ ನಾಯಕರು ಹುಟ್ಟಿಕೊಂಡರು. ಆಯಾ ಜಾತಿಯವರು ತಮ್ಮ ತಮ್ಮ ಜಾತಿಯ ಮೂಲಪುರುಷ, ಸಂಘಟಕರನ್ನು ಮುಂದುಮಾಡಿ ಆರಾಧಿಸಲು ಪ್ರಾರಂಭಿಸಿದರು. ಸಾರ್ವಜನಿಕ ಸ್ಥಳಗಳಲ್ಲಿ ಅವರ ಮೂರ್ತಿ ಸ್ಥಾಪಿಸಿದರು. ಪೈಪೋಟಿಗಿಳಿದಂತೆ ಆ ನಾಯಕರ ಉತ್ಸವ, ಮೆರವಣಿಗೆಗಳು ಮುನ್ನೆಲೆಗೆ ಬಂದವು. ಸಾರ್ವಜನಿಕ ಸ್ಥಳದಲ್ಲಿದ್ದ ಮಹಾಪುರುಷನ ವಿಗ್ರಹಕ್ಕೆ ಕಿಡಿಗೇಡಿಗಳು ಹಾನಿ ಮಾಡಿದರೆ, ಅಪಚಾರಗೈದರೆ

ದಂಗೆಗಳಾದವು. ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಧಕ್ಕೆಯನ್ನುಂಟು ಮಾಡಿದರು. ಯಾರೋ ತಿಳುವಳಿಕೆ ಇಲ್ಲದವರು ಮಾಡುವ ಕುಕೃತ್ಯಕ್ಕೆ ಜನರು ತೊಂದರೆ ಅನುಭವಿಸುವುದು ಸರಿಯಲ್ಲ. ಇದೆಲ್ಲ ನೋವಿನ ಸಂಗತಿಯಾಗಿದೆ ಎನ್ನುತ್ತಾರೆ ಪೂರ್ಣಿಮಾ.

ದೈನಂದಿನ ಜೀವನದಲ್ಲಿ ಮನುಷ್ಯ ತಪ್ಪು ಮಾಡುವುದು ಸಹಜ. ಆ ತಪ್ಪನ್ನು ತಿದ್ದಿಕೊಳ್ಳುವುದು, ಮುಂದೆ ಹಾಗಾಗದಂತೆ ಎಚ್ಚರವಹಿಸಲು ಅನುವು ಮಾಡಿಕೊಡುವುದೇ ನಿಜವಾದ ಧರ್ಮದ ಲಕ್ಷವಾಗಿದೆ. ಮನುಷ್ಯತ್ವವನ್ನು ಮೀರದಿರುವುದೇ ನಿಜವಾದ ಧರ್ಮ. ಇದನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅನುಪಾಲನೆ ಮಾಡಬೇಕೆನ್ನುತ್ತಾರೆ.

ಜಗತ್ತಿನಲ್ಲಿರುವ ಎಲ್ಲ ದೇವರನ್ನು ಎರಡು ರೀತಿಯಲ್ಲಿ ಆರಾಧಿಸುವ ಸಂಪ್ರದಾಯವಿದೆ. ಒಂದು ನಿರಾಕಾರ ಸಂಪ್ರದಾಯ. ಇನ್ನೊಂದು ಸಾಕಾರ ಸಂಪ್ರದಾಯ. ನಿರಾಕಾರ ಸ್ಥಿತಿಯಲ್ಲಿರುವ ದೇವರನ್ನು ಕಣ್ತುಂಬ ತುಂಬಿಕೊಂಡು ಮನಸ್ಸಿನಲ್ಲಿ ಸಾಕಾರಗೊಳಿಸಿಕೊಳ್ಳುವುದು. ಕುಂತಲ್ಲಿ ನಿಂತಲ್ಲಿ ನಿರಾಕಾರ ಸ್ಥಿತಿಯಲ್ಲಿರುವ ಅಗಮ್ಯ, ಅಗೋಚರ, ಅಪ್ರತಿಮವಾಗಿರುವ ಶಕ್ತಿಯನ್ನು ಮಾನಸಿಕವಾಗಿ ಆಹ್ವಾನಿಸಿಕೊಂಡು ಪೂಜಿಸುವುದು.

ಇವರೆಡು ಸಂಪ್ರದಾಯಗಳು ಪ್ರಾಚೀನ ಕಾಲದಿಂದಲೂ ಚಲಾವಣೆಯಲ್ಲಿವೆ. ಇವೆರಡು ಸಂಪ್ರದಾಯಗಳನ್ನು ಭಾರತೀಯ ಋಷಿ-ಮುನಿಗಳು, ಸಾಧು-ಸಂತರು, ಶರಣರು-ದಾಸರು ನಂಬಿಕೊಂಡು ಬಂದಿರುವರು. ದೇವರ ಅಸ್ತಿತ್ವವನ್ನು ಮನ್ನಿಸುವ ಬಹುಸಂಖ್ಯಾತರು ಸಾಕಾರಸ್ಥಿತಿಯ ದೈವತ್ವವನ್ನು ಮನ್ನಿಸುತ್ತಾರೆ. ತಮ್ಮ ತಮ್ಮ ಜನಾಂಗದ ವೇಷಭೂಷಣವನ್ನು ದೇವರಿಗೆ ತೊಡಿಸುತ್ತಾರೆ. ತಾವು ಸೇವಿಸುವ ಆಹಾರವನ್ನೇ ದೇವರಿಗೂ ಸಮರ್ಪಿಸಿ ಧನ್ಯತಾಭಾವ ಮೆರೆಯುತ್ತಾರೆ.

ದೇವರ ಅರ್ಚನೆ, ಪೂಜೆಯ ವಿಷಯವಾಗಿ ಕಾಲಾಂತರದಲ್ಲಿ ಅನೇ
ನಂಬಿಕೆಗಳು, ಸಂಪ್ರದಾಯಗಳು ಕಾಣಿಸಿಕೊಂಡವು. ಧ್ಯಾನ ಉಪವಾಸಾ
ವ್ರತಗಳು ರೂಢಿಗತವಾದವು. ಇವುಗಳ ಆಚರಣೆಯ ಹಿಂದಿನ ಅರ್ಥವನ
ಮನನ ಮಾಡಿಕೊಂಡು ಆಚರಿಸಬೇಕೆನ್ನುತ್ತಾರೆ ಪೂರ್ಣಿಮಾ.

ಉಪವಾಸ ವ್ರತವು ಆರೋಗ್ಯ ವರ್ಧನೆಗೆ ಸಹಾಯಕವಾಗುತ್ತದೆ. ದಿನಾ
ಆಹಾರ ಸೇವಿಸುತ್ತೇವೆ. ಶಕ್ತಿವರ್ಧನೆಗೆ ಅದು ಅವಶ್ಯಕವೂ ಹೌದು. ಅತಿಯಾ
ಆಹಾರ ಸೇವನೆಯಾಗಲಿ, ನಿರಾಹಾರಿಯಾಗಿರುವುದಾಗಲಿ ಒಳ್ಳೆಯದಲ್ಲ. ನಿಯಮಿ
ಆಹಾರ ಸೇವನೆಯ ಮಧ್ಯದಲ್ಲಿ ಒಂದು ದಿವಸ ಉಪವಾಸ ಕೈಕೊಳ್ಳುವುದರಿಂ
ಚಯಾಪಚಯ ಕ್ರಿಯೆಗಳು ಚುರುಕುಗೊಳ್ಳುತ್ತವೆ. ಜೀರ್ಣಶಕ್ತಿ ವೃದ್ಧಿಸುತ್ತ
ಆದುದರಿಂದ ವಾರಕ್ಕೊಮ್ಮೆ ಉಪವಾಸ ವ್ರತ ಆಚರಿಸುವ ನಿಯಮವನ
ನಮ್ಮವರು ಜಾರಿಗೆ ತಂದರು. ನಮ್ಮ ಹಿರಿಯರ ಆ ನಂಬಿಕೆ ಮತ್ತು ಆಚರಣೆಯ
ವೈಜ್ಞಾನಿಕ ಮನೋಭಾವ ಅಡಗಿದೆ' ಎಂದು ಪೂರ್ಣಿಮಾ ಸಮರ್ಥಿಸಿಕೊಳ್ಳುತ್ತಾ

'ಕುಂಕುಮ ಹಚ್ಚಿಕೊಳ್ಳುವುದು ಸೌಭಾಗ್ಯದ ಸಂಕೇತ. ಅದು ವಿಧವೆಯರ
ನಿಷಿದ್ಧವಾದುದು. ಪ್ರಾಚೀನ ಕಾಲದಿಂದಲೂ ಈ ಪದ್ಧತಿ ಹಿಂದು ಧರ್ಮ
ಅವಿಭಾಜ್ಯ ಅಂಗವಾಗಿದೆ. ಅದಕ್ಕೆ ಸಮಾಜವು ಮಾನ್ಯತೆ ನೀಡಿದೆ. ಆದ
ಕ್ರೈಸ್ತಧರ್ಮಿಯರು ಹಣೆಗೆ ಕುಂಕುಮ ಹಚ್ಚಿಕೊಳ್ಳುವುದಿಲ್ಲ. ಅಂದರೆ ಅವರನ್ನ
ವಿಧವೆಯರೆನ್ನಲಾದೀತೆ? ಇತ್ತೀಚೆಗೆ ಫ್ಯಾಶನ್‌ಪ್ರಿಯರು ಸಹ ಕುಂಕುಮ, ಬಿಂದಿ
ಬಳಸುತ್ತಿಲ್ಲ. ಡ್ರೆಸ್ ಕೋಡ್‌ನಲ್ಲೂ ಗಮನಾರ್ಹ ಬದಲಾವಣೆಗಳಾಗಿವೆ. ಕಡಿ
ಬಟ್ಟೆ ಧರಿಸಿದವರೆಲ್ಲರೂ ಪ್ರಗತಿಪರರು ಎಂದೆಲ್ಲ ಗುರುತಿಸಿಕೊಳ್ಳ
ಹವಣಿಸುತ್ತಿದ್ದಾರೆ. ಜನರ ಮನಸ್ಥಿತಿಯನ್ನು ಗೌರವಿಸಬೇಕಾಗುತ್ತದೆ. ಅದರ
ಯಾವುದು ಸರಿ. ಯಾವುದು ತಪ್ಪು ಎನ್ನುವುದು ಅವರವರ ನಿರ್ಣಯಕ್ಕೆ ಬಿ
ವಿಚಾರ. ಅವರವರ ನಂಬಿಕೆಯ ಅನುಸಾರ ಜೀವಿಸುತ್ತಾರೆ. ಅದನ್ನು ಪ್ರಶ್ನಿಸ
ಯಾರಿಗೂ ಹಕ್ಕಿಲ್ಲ' ಎನ್ನುತ್ತಾರೆ.

ಬಹುದೇವೋಪಾಸನೆ:

ಭಾರತೀಯ ಪರಂಪರೆಯಲ್ಲಿ ಬಹುದೇವೋಪಾಸನೆ ಹೆಚ್ಚು ಪ್ರಚಲಿತದಲ್ಲಿದೆ. ಇದಕ್ಕೆ ಹಲವಾರು ಕಾರಣಗಳಿವೆ. ಭಾರತವು ಅತ್ಯಂತ ಪ್ರಾಚೀನ ನಾಗರೀಕತೆ ಹೊಂದಿದೆ. ಅಂದಿನಿಂದ ಇಂದಿನವರೆಗೆ ಸಮಾಜಕ್ಕೆ ಮಾದರಿಗಳಾದ ವ್ಯಕ್ತಿಗಳನ್ನು ದೈವತ್ವಕ್ಕೇರಿಸಿ ಆರಾಧಿಸುವ ಪದ್ಧತಿ ಚಾಲ್ತಿಯಲ್ಲಿರುವುದರಿಂದ ದೇವರ ಸಂಖ್ಯೆ ಹೆಚ್ಚಾಗಿದೆ ಎನ್ನುತ್ತಾರೆ ಪೂರ್ಣಿಮಾ. ನಿಸರ್ಗದತ್ತ ಸೂರ್ಯ, ಚಂದ್ರ, ನಕ್ಷತ್ರ, ಪ್ರಾಣಿ, ಪಕ್ಷಿಗಳಾದಿ ಶಕ್ತಿಗಳನ್ನು ಎದುರಿಸಲು ಸಾಧ್ಯವಾಗದಿದ್ದಾಗ ದೇವರೆಂದು ಭಾವಿಸಿದನು. ಅತಿಮಾನುಷ ಶಕ್ತಿಗಳ ಅಸ್ತಿತ್ವ, ಸಾಮರ್ಥ್ಯಗಳ ಬಗ್ಗೆ ಗೌರವ, ಭಯ, ಭಕ್ತಿ ಉಂಟಾಯಿತು. ಭಯದಿಂದ ಮುಕ್ತಿ ಪಡೆಯಲು ವಶೀಕರಣ, ಆರಾಧನೆಯಂತಹ ಕೆಲವೊಂದು ಮಾರ್ಗಗಳನ್ನು ಕಂಡುಕೊಂಡನು. ಆರಾಧನೆಯ ಮಾರ್ಗಕ್ಕೆ ಅಣಿಯಾದನು. ಆರಾಧನೆಯ ವೇಳೆಯಲ್ಲಿ ಪ್ರಾಣಿಬಲಿ, ಪಕ್ಷಿಬಲಿ, ನರಬಲಿಗಳು ಚಾಲ್ತಿಗೆ ಬಂದವು. ಮುಂದೆ ಕಲಾವಿದರು ಅದೃಶ್ಯ, ಅಸ್ಪಷ್ಟ ಆಕೃತಿಗಳಿಗೆ, ಅತಿಮಾನುಷ ಶಕ್ತಿಗಳಿಗೆ ಆಕಾರ ನೀಡಿದರು.

ಭಾರತವು ಬಹುಸಂಸ್ಕೃತಿಗಳ ನೆಲೆವೀಡಾದಂತೆ ಬಹುದೇವೋಪಾಸನೆಯ ವಿಧಾನಗಳು ಪ್ರಚುರಗೊಂಡವು. ಒಂದೊಂದು ಆರಾಧನೆಯಲ್ಲಿಯೂ ಅದರದೇ ಆದ ವಿಶಿಷ್ಟತೆ ಅಡಗಿದೆ. ಅದನ್ನು ಮನಗಂಡು ನಮ್ಮವರು ಚಲಾವಣೆಯಲ್ಲಿ ತಂದಿರುವರು. ಪರಂಪರೆಯಿಂದ ಬಂದಿರುವ ಆರಾಧನಾ ಪದ್ಧತಿಯನ್ನು, ದೈವೀಕ ನಂಬಿಕೆಯ ನೆಲೆಗಳನ್ನು ಇದುವರೆಗೂ ಉಳಿಸಿಕೊಂಡು ಬರಲಾಗುತ್ತಿದೆ. ಹಳೆಯದರ ಮೇಲೆ ಹೊಸತನ ಸವಾರಿ ಮಾಡಿದರೂ ಮೂಲ ಅಸ್ತಿತ್ವದಲ್ಲಿ ಹೆಚ್ಚಿನ ಬದಲಾವಣೆಗಳೇನು ಆಗಿಲ್ಲ.

ಯೋಚನಾಲಹರಿ ಬೆಳೆದ ಹಾಗೆಲ್ಲ ಬಹುದೇವೋಪಾಸನೆಯಿಂದ ಹೊರಬಂದ ಕೆಲವೊಂದು ಮತ ಸಿದ್ಧಾಂತಗಳ ಪ್ರತಿಪಾದಕರು

ಏಕದೇವೋಪಾಸನೆಗೆ ಆದ್ಯತೆ ನೀಡಿದರು. ಬಹುದೇವೋಪಾಸನೆಯಿಂದ ಆಗುತ್ತಿದ್ದ ಶೋಷಣೆಗಳನ್ನು ತಪ್ಪಿಸಲು ಬೌದ್ಧರು, ಜೈನರು ಮತ್ತು ಲಿಂಗಾಯತರು ಏಕದೇವೋಪಾಸನೆಗೆ ಒತ್ತು ನೀಡಿದರು. ಪ್ರಗತಿಪರ ಚಿಂತಕರು ಮೇಲು-ಕೀಳು ಸಹಿಸುವುದಿಲ್ಲ. ಮಾನವನ ಶರೀರದ ಬಗ್ಗೆ ಅವರೆಂದೂ ಕೀಳಾಗಿ ಭಾವಿಸಿಕೊಳ್ಳಲಾರರು. ತನ್ನನ್ನು ತಾನು ದಂಡಿಸಿಕೊಳ್ಳುವುದು ಸರಿಯಲ್ಲ ಎನ್ನುವರು. ಎಲ್ಲ ಜೀವಿಗಳ ಅಸ್ತಿತ್ವಕ್ಕೂ ಮಾನ್ಯತೆ ನೀಡುವರು. ಲಭ್ಯವಿರುವ ಆಯುಷ್ಯವನ್ನು ಪರೋಪಕಾರಕ್ಕಾಗಿ ಬಳಸಿಕೊಳ್ಳಬೇಕೆಂದು ಹೇಳುತ್ತಲೇ ಮಾನವೀಯ ಸಂಬಂಧಗಳಿಗೆ ಮಹತ್ವ ನೀಡುತ್ತಾರೆ. ಭಾರತೀಯರಲ್ಲಿ ಏಕದೇವೋಪಾಸನೆಗಿಂತ ಬಹುದೇವೋಪಾಸನೆ ಹೆಚ್ಚು ಪ್ರಚಲಿತದಲ್ಲಿದೆ.

ಎಲ್ಲ ಧರ್ಮ ತತ್ತ್ವಗಳನ್ನು ಅರ್ಥ ಮಾಡಿಕೊಂಡಿರುವ ಪೂರ್ಣಿಮಾರವರು "ಪಾಪದಿಂದ ಬಂದಿರುವ ಶರೀರವನ್ನು ಶುದ್ಧ ಮಾಡಿಕೊಳ್ಳಬೇಕು. ಮನುಷ್ಯ ಹುಟ್ಟುತ್ತಲೇ ಪಾಪಿಯಾಗಿದ್ದೇನೆ ಎನ್ನುವುದನ್ನು ಒಪ್ಪುವುದಿಲ್ಲ. ಹಿಂದಿನ ಜನ್ಮದ ಪಾಪ ಪುಣ್ಯದ ಫಲವಾಗಿ ಈ ಜನ್ಮದ ಬಂದಿದೆ. ಒಳ್ಳೆಯ ಕೆಲಸ ಮಾಡಿದರೆ ಸ್ವರ್ಗ, ಕೆಟ್ಟದ್ದು ಮಾಡಿದರೆ ನರಕ ಪ್ರಾಪ್ತಿಯಾಗುತ್ತದೆ. ಮುಟ್ಟಾದ ಮಹಿ ದೇವರ ಸೇವೆ ಮಾಡಬಾರದು ಇತ್ಯಾದಿ ಪ್ರಗತಿಪರವಲ್ಲದ ವಿಚಾರಗಳನ್ನು ಅವರು ನಂಬುವುದಿಲ್ಲ. ಮೂಢನಂಬಿಕೆಗಳನ್ನು ಮನ್ನಿಸುವುದಿಲ್ಲ. ಅವರವ ಕೆಲಸಕ್ಕೆ ಅನುಗುಣವಾಗಿ ಶ್ರೇಷ್ಠತ್ವ ಕನಿಷ್ಠತ್ವ ಬರುತ್ತದೆ" ಎಂದು ಅರ್ಥೈಸುತ್ತಾರೆ

ಜಾತೀಯತೆಯ ಪೆಡಂಭೂತ:

ಭಾರತವು ಬಹುಸಂಸ್ಕೃತಿಯ ದೇಶವಾಗಿರುವಂತೆ ವರ್ಣಾಶ್ರಮ ಆಧಾರಿ ಹಲವು ಜಾತಿ ಮತಗಳ ಬೀಡು ಆಗಿದೆ. ಭಾರತೀಯ ಜಾತಿ ವ್ಯವಸ್ಥೆ ತುಂಬ ಸಂಕೀರ್ಣವಾಗಿದ್ದು, ಜಾತಿಯನ್ನು ವಿಭಜಿಸಿದಂತೆಲ್ಲ ಅದು ದ್ವಿಗುಣಗೊಳ್ಳು ಹೋಗುತ್ತದೆ. ಮೂಲದಿಂದ ವಿದಳನಗೊಂಡು ಮತ್ತೊಂದು ಜಾತಿಯಾ

ಗುರುತಿಸಿಕೊಳ್ಳುತ್ತದೆ. ಅದಕ್ಕೆ ಅಂತ್ಯವಿಲ್ಲ. ಎಲ್ಲಿಯವರೆಗೆ ಜಾತಿ ವ್ಯವಸ್ಥೆ ಇರುತ್ತದೆಯೋ ಅಲ್ಲಿಯವರೆಗೆ ಮಾನವೀಯ ಸಂಬಂಧಗಳು ವಿಸ್ತೃತರೂಪ ಪಡೆದುಕೊಳ್ಳುವುದಿಲ್ಲವೆಂಬ ಸತ್ಯವನ್ನು ಪೂರ್ಣಿಮಾರವರು ಅರಿತಿದ್ದಾರೆ.

ಪ್ರಾರಂಭಿಕ ಹಂತದಲ್ಲಿ ವೃತ್ತಿಯಾಧರಿತವಾಗಿ ಕಾಣಿಸಿಕೊಂಡ ಈ ವ್ಯವಸ್ಥೆಯು ಕಾಲಾಂತರದಲ್ಲಿ ಮನುಷ್ಯ ಮನುಷ್ಯರ ನಡುವೆ ಅಂತರ ಹೆಚ್ಚಿಸಿತು. ಸಾಮಾಜಿಕ ಜನಜೀವನದ ಮೇಲೆ ಪ್ರಭಾವ ಬೀರಿತು. ವ್ಯಕ್ತಿಯ ಅಂತಸ್ತುಗಳ ನಡುವಣ ಚಲನೆಯನ್ನು ಜಾತೀಯತೆ ನಿಯಂತ್ರಿಸುತ್ತದೆ. ಜಾತಿ ಪದ್ಧತಿಯು ತೆರೆದ ಸ್ವರೂಪದ್ದಾಗಿರದೆ ಮುಚ್ಚಿದ ಸ್ವರೂಪದ್ದಾಗಿದೆ. ಜಾತಿ ಪದ್ಧತಿಯ ಬದಲಾವಣೆ ಅಥವಾ ನಿರ್ಮೂಲನೆ ಅಸಾಧ್ಯ ಎನ್ನುವಷ್ಟರ ಮಟ್ಟಿಗೆ ಬೇರೂರಿ ಬಿಟ್ಟಿದೆ. “ಎಲ್ಲಿಯವರೆಗೆ ರಾಜಕೀಯ ಇರುತ್ತದೆಯೋ ಅಲ್ಲಿಯವರೆಗೆ ಭಾರತದಿಂದ ಜಾತಿ ಪದ್ಧತಿಯನ್ನು ತೊಲಗಿಸಲು ಸಾಧ್ಯವಿಲ್ಲ. ಸರಕಾರಿ ಸೌಲಭ್ಯಗಳನ್ನು ಪಡೆಯುವ ಸಲುವಾಗಿ ಜಾತೀಯತೆ ಮುಂದು ಮಾಡುವವರು. ತಮ್ಮ ದೈನಂದಿನ ಜೀವನದಲ್ಲಿ ಮತ್ತೊಂದು ಧರ್ಮ, ಅದರ ತತ್ತ್ವಗಳನ್ನು ಆಚರಿಸುತ್ತಾರೆ. ಒಳಗೊಂದು ಹೊರಗೊಂದು ಮಾತನಾಡುವ, ಯಾವುದೇ ಬದ್ಧ ನಿಲುವುಗಳಿಗೆ ಅಂಟಿಕೊಂಡಿರದ ಎಡಬಿಡಂಗಿಗಳನ್ನು ದಗಲ್‌ಬಾಜಿ”ಗಳೆಂದು ವ್ಯಾಖ್ಯಾನಿಸುತ್ತಾರೆ.

‘ನಾನು ಮೂಲತಃ ಬ್ರಾಹ್ಮಣ. ಆ ಮತದವರ ಹೋಮ, ಹವನ, ಪಿಂಡಾರ್ಪಣೆಗಳಂತಹ ಕೆಲವು ಮೌಢ್ಯಾಚರಣೆಗಳನ್ನು ಮುಲಾಜಿಲ್ಲದೆ ಖಂಡಿಸುತ್ತೇನೆ’ ಎನ್ನುತ್ತಾರೆ. ಜಾರ್ಜ್‌ರನ್ನು ಮದುವೆಯಾದ ಮೇಲೆ ಜನಿಸಿದ ಮಕ್ಕಳ ಜಾತಿಯನ್ನು ಶಾಲಾ ದಾಖಲಾತಿಯಲ್ಲಿ ಎಸ್.ಸಿ. ಮತಾಂತರ ಕ್ರಿಶ್ಚಿಯನ್ ನಮೂದಿಸಿದ್ದಾರೆ. ಸ್ಕಾಲರ್‌ಶಿಪ್ ಪಡೆಯಲು, ಶುಲ್ಕ ವಿನಾಯತಿಗಳಾದಿ ಸೌಲಭ್ಯಗಳಿಗಾಗಿ ನಾನೆಂದು ಗಂಡನ ಜಾತಿಯನ್ನು ಮುನ್ನೆಲೆಗೆ ತರಲಿಲ್ಲ. ಇದುವರೆಗೆ ನಮ್ಮ ಮಕ್ಕಳು ಜಾತಿಯಾಧಾರಿತ ಶುಲ್ಕ ವಿನಾಯತಿ ಪಡೆದಿರುವುದಿಲ್ಲ. ಮಕ್ಕಳು ಮಾನಸಿಕ ಸಂಕೀರ್ಣತೆ ಮತ್ತು ಜಾತಿಕೇಂದ್ರಿತ ಸಂಕುಚಿತತೆಯಿಂದ

ಬಳಲಬಾರದು. ಜಾತಿ ಮುಖ್ಯವಲ್ಲ. ಮನುಷ್ಯತ್ವ ಇಲ್ಲದ ಜಾತಿಗೆ ಅರ್ಥವಿಲ್ಲ. ಈ ಉದ್ದೇಶದಿಂದಲೇ ಮಕ್ಕಳಿಬ್ಬರ ಜಾತಿಯನ್ನು ಎಸ್.ಸಿ. ಎಂದು ನಮೂದಿಸದೇ ಶಾಲಾ ದಾಖಲಾತಿಯಲ್ಲಿ ಮತಾಂತರಿತ ಕ್ರಿಶ್ಚಿಯನ್ ಎಂದು ದಾಖಲಿಸಿದ್ದಾರೆ. ತಂದೆ ನಂಬಿ ಆಚರಿಸಿದ ಧರ್ಮದ ಹೆಸರನ್ನು ಮಕ್ಕಳಿಗೂ ನೀಡಿದ್ದಾರೆ. ಮಕ್ಕಳ ತಂದೆಯ ಅಸ್ತಿತ್ವಕ್ಕೆ ಧಕ್ಕೆ ತರುವ ಹಕ್ಕು ತಮ್ಮದ್ದಲ್ಲವೆಂಬುದು ಪೂರ್ಣಿಮಾರವರ ತಿಳುವಳಿಕೆಯಾಗಿದೆ.

ರಾಧೆ ಕೃಷ್ಣನ ಕಾಣಿಕೆ:

ಶೈಕ್ಷಣಿಕ ಪ್ರವಾಸದ ಪ್ರಯುಕ್ತ ಹೈದರಾಬಾದಿನ ಬಿರ್ಲಾ ಮಂದಿರಕ್ಕೆ ಹೋಗಿದ್ದರು. ಆ ಸಂದರ್ಭದಲ್ಲಿ ಪೂರ್ಣಿಮಾರವರು ತಮ್ಮ ಜೀವದ ಗೆಳೆಯ ಜಾರ್ಜ್‌ಗೆ 'ನಾವಿಬ್ಬರು ರಾಧೆ ಕೃಷ್ಣನ ಹಾಗೆ ಜೀವಿಸೋಣ' ಎಂಬ ಉದ್ದೇಶದಿಂದ ರಾಧೆ ಕೃಷ್ಣನ ಮೂರ್ತಿಯನ್ನು ಕಾಣಿಕೆಯನ್ನಾಗಿ ನೀಡಿದ್ದರು.

ಆ ನಂತರದ ದಿನಗಳಲ್ಲಿ ಅವರಿಬ್ಬರ ನಡುವೆ ಪ್ರೇಮವಿವಾಹ, ದಾಂಪತ್ಯ ಜೀವನ, ಇಬ್ಬರು ಮುದ್ದುಮಕ್ಕಳ ಜನನವಾಯಿತು. 'ನೆನಪಿನ ಕಾಣಿಕೆಯೂ ನಮ್ಮ ಮನೆಯಲ್ಲಿ ಜೀವಂತವಾಗಿತ್ತು. ನಾನು ನೀಡಿದ ಗೌರವದ ವಿಗ್ರಹಕ್ಕೆ ಚ್ಯುತಿಬಾರದಂತೆ ಜಾರ್ಜ್ ಅದನ್ನು ಅತ್ಯಂತ ಜೋಪಾನವಾಗಿ ಕಾಯ್ದಿಟ್ಟಿದ್ದರು. ಆದರೆ ಅವರ ಸಾವಿನೊಂದಿಗೆ ನಾನು ಕೊಟ್ಟಿರುವ ರಾಧೆ ಕೃಷ್ಣರ ವಿಗ್ರಹವು ನಮ್ಮ ಮನೆಯಿಂದ ಮರೆಯಾದದ್ದು ಅತ್ಯಂತ ನೋವಿನ ಸಂಗತಿಯಾಗಿದೆ' ಎಂದು ಪೂರ್ಣಿಮಾ ಮರಗುತ್ತಾರೆ.

ಮಾಗಿದ ಕಾವ್ಯ ಪ್ರಭೆ

ಬೀದರಿನ ಪ್ರತಿಷ್ಠಿತ ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ, ಭಾರತೀಯ ಕುಟುಂಬ ಯೋಜನಾ ಸಂಘದ ರಾಷ್ಟ್ರೀಯ ಖಜಾಂಚಿಯಾಗಿ, ಸಾಮಾಜಿಕ ಕಾರ್ಯಕರ್ತೆಯಾಗಿ ಪೂರ್ಣಿಮಾ ಜಾರ್ಜ್ ಸಲ್ಲಿಸುತ್ತಿರುವ ಸೇವೆ ಅನುಪಮ ವಾದುದು. ಸಾಮಾಜಿಕ ಚಲನಶೀಲತೆಯಲ್ಲಿ ತಮ್ಮತನವನ್ನು ಕಾಯ್ದಿಟ್ಟುಕೊಳ್ಳುತ್ತ ಮಾನವೀಯ ಸಂವೇದನೆಗಳಿಗೆ ಧ್ವನಿಯಾಗಿದ್ದಾರೆ. ಸಾವಿರಾರು ವಿದ್ಯಾರ್ಥಿಗಳ ಬಾಳಿನ ಬೆಳಕಾಗಿದ್ದಾರೆ. ಅಧೀನ ಸಿಬ್ಬಂದಿಗಳಿಗೆ ಮಾರ್ಗದರ್ಶಕರಾಗಿ, ಸ್ಫೂರ್ತಿಯ ಚಿಲುಮೆಯಾಗಿದ್ದಾರೆ. ನಾಡಿನ ವಿವಿಧ ಸಂಘ ಸಂಸ್ಥೆಗಳಿಗೆ ಅಡಿಪಾಯವಾಗಿ ಸಾಕಷ್ಟು ಹೆಸರು ಗಳಿಸಿದ್ದಾರೆ. ನಿರಂತರ ಚಟುವಟಿಕೆಗಳಿಗೆ ಆಗರವಾಗಿರುವಂತೆ ಸಾಹಿತ್ಯಿಕ ಸಂಭ್ರಮಕ್ಕೂ, ಸಂಶೋಧನಾತ್ಮಕ ಚಟುವಟಿಕೆಗಳಿಗೂ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ.

೨೦೧೦ರಲ್ಲಿ ಪ್ರಕಟವಾಗಿರುವ ಪೂರ್ಣಿಮಾರವರ ಮೊದಲ ಕವನ ಸಂಕಲನ **'ಕತ್ತಲ ಇಬ್ಬನಿ ಬಣ್ಣದ ಚಿತ್ತಾರ'**. ಇದು ಅವರ ಕಾವ್ಯದ ಕಲಾತ್ಮಕತೆ ಮತ್ತು ಕಾವ್ಯಾಂಶಗಳ ಹೂರಣವನ್ನೊಳಗೊಂಡಿದೆ. ಅದನ್ನು ಭೋಗಿಸುವ ಭೋಜಕನಿಗೂ, ಕಾವ್ಯಾಂಶವನ್ನು ಆಸ್ವಾದಿಸುವ ಸಹೃದಯನಿಗೂ ಶಕ್ತಿ ಸಾಮರ್ಥ್ಯಗಳಿರಬೇಕು. ಅಂದಾಗ ಮಾತ್ರ ಕವಯಿತ್ರಿಯ ಕಾವ್ಯತತ್ತ್ವ, ಸಹೃದಯರ ಆನಂದ ತತ್ತ್ವಗಳೆರಡೂ ಸಾರ್ಥಕಗೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ 'ಕತ್ತಲ ಇಬ್ಬನಿ

ಬಣ್ಣದ ಚಿತ್ತಾರ'ದಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವ ಬದುಕಿನ ಆಲಾಪ, ಸಾಮಾಜಿ
ಕಳಕಳಿಯನ್ನು ಗಮನಿಸಬಹುದಾಗಿದೆ.

"ಜೀವನದ ಮರಳುಗಾಡಿನಲಿ,
ಗೆಳೆತನದ ಅಮೃತವಾಹಿನಿ"

ವರಿಸಿದ ಪ್ರಿಯಕರನಿಗೆ ಸರಿಸಾಟಿಯಾದ ವಸ್ತು ಜಗತ್ತಿನಲ್ಲಿ ಯಾವುದು ಇಲ್ಲ. ಕವಯಿತ್ರಿಯ ಪಾಲಿಗೆ ಅದೊಂದು ಬಾಂಧವ್ಯದ ಮಿಡಿತವಾಗಿದೆ ಸವಿಮಾತಿನ ಪ್ರೇಮಾಮೃತ ನೀಡಿದ ಆ ಸ್ನೇಹವು ಅಮೃತ ಸಮಾನವಾಗಿದೆ.

"ಮನದನ್ನೆಯ ನುಡಿಗೆ / ಸೋತನು ಗೆಳೆಯ;
ಅರಳಿ ಹೂವಾದ ಮನ / ಮರೆಯಿತು ಇಳೆಯ"

ಎಂಬಲ್ಲಿ ಒಡಲಾಳದ ಕಾತರತೆಯ ನೋವು ಮಡುಗಟ್ಟಿದೆ. "ಪ್ರತಿಕ್ಷಣದ ಸವಿಮಾತು ನೆನಪಾಗಿ ಬಂದು ಹಸಿ; ತಿವಿದು ಹೃದಯಕೆ ಭರ್ಚಿ ಗೊಳಿಸುವುದು ಜೀವವ ಘಾಸಿ" ಮನದೊಡತಿಗೆ ಕಾಣ್ಕೆ ಕೊಡುವ ಚೆನ್ನಿಗನ ಚೆಲುವು ಇನ್ನಿಲ್ಲವಾಗಿದೆ ಮರಳಿ ಬಾರದ ಆ ಇನಿಯನ ನೆನಹು ಹಗಲಿರುಳು ಕಾಡುತ್ತಿದೆ. ಇಳೆ ಮರೆತರೂ ನಲ್ಲೆಯ ಕಾತರತೆಗೆ ಬೀಗಮುದ್ರೆ ಬಿದ್ದಿಲ್ಲ! ಪ್ರೇಮ ಮುದ್ರೆಗೆ ಧಕ್ಕೆಯಾಗಿಲ್ಲ!!

"ನುಂಗಿ ಕಹಿಯನು ನೆನಸಬೇಕು ಸಿಹಿಯ,
ನುಂಗಿ ನೋವನು ನೆನಸು
ಸಿಕ್ಕ ಕೊಂಚ ಸುಖವ ಗೆಳೆಯ"

ಎಂದು ಆಗಾಗ ಸಮಾಧಾನಿಸಿಕೊಂಡಿದ್ದರೂ "ನನ್ನ ಮಾತಿನ ಸೆಲೆಯು / ಬತ್ತಿದ ಮಡುವಾಯ್ತು ಕಂಗಳು ಕೆಂಪಡರಿ ಹೃದಯ ಬೆಂಡಾಯ್ತು" ಎಂದು ಹಳಹಳಿಸಿದ್ದಾರೆ. ಗೆಳೆಯ-ಗೆಳತಿ, ಗೆಳತಿ-ಗೆಳತಿಯರ ಮಧುರ ಬದುಕಿನಲ್ಲಿ ಕೊರೆ ಕಂಡಾಗ, ಬಾಳು ಚದುರಿದಾಗ ಕಂಗಳ ಕಾಂತಿ ಕೆಂಪಡರುತ್ತದೆ, ಹೃದಯ

ಬೆಂಡಾಗುತ್ತದೆ. ಜೀವಿತದ ವರ್ತನೆಗಳೆಲ್ಲ ನಿಶ್ಚೇಷ್ಟಿತಗೊಳ್ಳುತ್ತವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

"ನಲ್ಲ ನಲ್ಲೆಯ ಎದೆಯ ಗೂಡಿನಲಿ
ಕಟ್ಟಿದ ಕನಸುಗಳ ಗೂಡು
ಬಿರುಗಾಳಿಗೆ ಛಿದ್ರಗೊಂಡಿತು." ಪುಟ-೩೧

* * *

"ಜಗದ ನೂರಾರು ಹೊಡೆತ ಸಹಿಸಿಹೆನು
ಮೇಲಿಂದ ಅವ ನನ್ನ ಪ್ರತಿನಿತ್ಯ ಕೊಲುವನು"

ಎಂಬ ಮಾತಿನಲ್ಲಿ ವ್ಯಕ್ತವಾದ ವಿರಹವೇದನೆ ತೀವ್ರತರವಾದುದು. 'ನಿಮ್ಮಿಂದ ಅವಗೆ ಮುಟ್ಟಲಿ' ಎಂಬ ಸಮನಾಂತರ ಭಾವ ನಿವೇದನೆ ಓದುಗರಿಗೆ ಕೌತುಕವನ್ನುಂಟು ಮಾಡುತ್ತದೆ.

ಗಂಡನಿಲ್ಲದ ಬಾಳಿಗೆ ಹಲವು ಪ್ರಶ್ನೆಗಳು ಎದುರಾಗುತ್ತವೆ. ಮೊದಲಿಗೆ ಮನದೊಡೆಯನ ನೆನಹಿನಾಟ, ಮನೆಯವರ ಕೊಂಕುನುಡಿ, ಸಮಾಜದ ತಿರಸ್ಕಾರದ ನೋಟ. ಇದರ ಜೊತೆಗೆ "ಕೂತು ಬಳಸಿದ್ದ ಜೊತೆಗಾರನೆಲ್ಲಿ? ಸೋತು ನಿನ ಗೆಲ್ಲುವ ಗೆಣಿಕಾರನೆಲ್ಲಿ? ನಿನ್ನ ಬಳಸಿ ಕಾಪಾಡುವ ನಿನ್ನ ಗಂಡೆಲ್ಲಿ? ನಿನ್ನೊಡಲ ತುಂಬುವ ಧೀಮಂತನೆಲ್ಲಿ? ಒಬ್ಬಳೆ ಬಂದಿರುವೆ ಮನದೇವರೆಲ್ಲಿ?" ಎಂದು ಯಾರಾದರೂ ಪ್ರಶ್ನಿಸಿದಾಗ ಕವಯಿತ್ರಿ ಕೊಡುವ ಉತ್ತರ ಗಮನಾರ್ಹವಾದುದು.

"ನಿಮ್ಮವರಂತೆ ನನ ದೊರೆಯು ಕೃತಿಹೀನನಲ್ಲ
ನೂರೆಂಟು ಚಿಂತೆಗಳು, ನೂರೆಂಟು ಕೆಲಸಗಳು
ಆ ನಡುವೆಯೂ ನನ್ನ ಪ್ರೀತಿಯಿಂ ಕಳುಹಿಹನು
ಮುತ್ತೊತ್ತಿ, ಎದೆಯಲ್ಲಿ ಎನ ಹುದುಗಿಸಿ
ಬರದಿದ್ದರೇನಾಯ್ತು ಎನ್ನ ಜೊತೆಯಲ್ಲಿ?

ಇಹನು, ಅಡಿಗಡಿಗೂ ಎನ್ನ ಉಸಿರಲಿ
ಮೋಡ ಕವಿದಿತ್ತು; ಕಣ್ಣೀರು ಜಿನುಗಿತ್ತು" (ಪು-೩೬)

* * *

"ಉಲ್ಲಾಸ ತುಂಬುವ ಧ್ವನಿ / ಮುದ ನೀಡುವ ಜೇನಹನಿ
ನಿನ ಮಾತು ನನ್ನ ಬಾಳಿಗೆ ಜೀವ ಸಂಜೀವಿನಿ" (ಪು-೨೧)

ಇಳೆಯೊಡನೆ ಬಾಳನ್ನು ಹಸನಾಗಿಸಿಕೊಳ್ಳುವ ಛಲ, ಎಲ್ಲವನ್ನು ಸಹನಶೀಲತೆಯಿಂದ ಬದುಕು ಬಂಗಾರವಾಗಿಸುವ ನಡೆ ಇಳೆಯಂತಹ ವ್ಯಕ್ತಿತ್ವದಿಂದ ಮಾತ್ರ ಸಾಧ್ಯ. ಇಳೆಯಿಂದ ಸಹಜವಾಗಿ ಬಲಿತ ಪ್ರಕೃತಿಭಾವ, ಪೂರ್ಣಾಂಗನೆಯ ರಸಾತ್ಮಕ ಮಧುರಭಾವವು ಕಾವ್ಯದ ಚೈತನ್ಯಶಕ್ತಿಯಾಗಿದೆ.

ಜೀವಕೆ ಜೀವ ಬೆರೆತ ಜೀವನವೆಂಬ ಯಾತ್ರೆಯಲಿ ಗಂಡೆಂಬ ಪ್ರಾಣಿ, ಪ್ರಾಣ ಇಲ್ಲವಾದಾಗ ಎದುರಾಗುವ ಜಾತೀಯತೆಯ ವಿಷವೃಕ್ಷ ನೆರಳಾಗುವ ಬದಲು ಉರಿಬಿಸಿಲಾಗುತ್ತದೆ. ಸೌಮ್ಯಜೀವಕ್ಕೆ ನಿಲ್ಲಗೊಡದೆ, ಮಲಗಲು ಬಿಡದೆ ಉರುಣಿಸುತ್ತದೆ ಎಂಬುದನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

"ಅವನ ವರಿಸಿದ ನೀನು ನಮ್ಮವಳಲ್ಲ!" ಎಂದೆನ್ನುವ ಜಾತಿಯ ಪೆಡಂಭೂತ ಯಾವ ಕಾಲಕ್ಕೂ ಬೆನ್ನು ಬಿಡದು. ಪ್ರೀತಿಸುವ ಜೀವಿಗಳೆರಡು ಚೆನ್ನಾಗಿದ್ದರೂ ಸಹಿಸದು. ಅನಿವಾರ್ಯ ಕಾರಣಗಳಿಂದ ದೂರಾಗಿ ಬದುಕಿನ ತಾಳ ತಪ್ಪಿದರಂತೂ ಅವರಿವರ ಚುಚ್ಚುಮಾತಿನ ಇರಿತಗಳ ನೋವು ಅನುಭವಿಸಿದವರಿಗೆ ಗೊತ್ತು. ಅಂತಹದಕ್ಕೆ ಪ್ರತಿಯಾಗಿ ಕವಯಿತ್ರಿ ಬೆಳೆದಿರುವ ರೀತಿ, ಸಂಕಟಗಳಿಂದಾಗಿ ಪರಿತಪಿಸಿದ ರೀತಿ ವೈರಿಗಳಿಗೂ ಬೇಡವಾಗಿದೆ. ಹೀಗಿದ್ದರೂ ಅವರು ಕ್ರಮಿಸಿದ ದಾರಿ ಕುತೂಹಲಕರವಾಗಿದೆ. ನೊಂದು ಬೆಂದ ಸಾವಿರಾರು ಮಹಿಳೆಯರಿಗೆ ದಾರಿದೀಪವಾಗಿದೆ.

ಸುತ್ತಲಿನ ಹಿತಶತ್ರುಗಳೊಂದಿಗೆ ಅವರು ಹೋರಾಡಿದ ಪ್ರತಿ ಕ್ಷಣಗಳು ಕಾವ್ಯದಲ್ಲಿ ಚಿತ್ರಿತವಾಗಿವೆ. ಸ್ವತಃ ಏನೆಲ್ಲ ನೋವು ಅನುಭವಿಸಿದರೂ ತಮ್ಮ ಬೆಳವಣಿಗೆಗೆ ಕಾರಣರಾದ ತಂದೆ-ತಾಯಿ, ಗುರು-ಹಿರಿಯ, ಬಂಧು-ಬಳಗ, ಗಂಡ-ಮಕ್ಕಳು, ವಿದ್ಯಾರ್ಥಿಗಳು-ಸಹೋದ್ಯೋಗಿಗಳಿಗೆ ಕೃತಜ್ಞತೆ ಅರ್ಪಿಸಿದ್ದಾರೆ. ಕೆಲವೊಮ್ಮೆ ಹಿತಶತ್ರುಗಳಿಗೆ ಬಲಿಯಾದರೂ ಅದನ್ನು ತೋರ್ಪಡಿಸಿಕೊಳ್ಳದೇ ಅವರ ಒಲವು ಹಗೆತನದ ಜಾಣ್ಮೆಗೆ ಕೃತಜ್ಞತಾಭಾವ ಸಲ್ಲಿಸುವ ಕ್ರಮ ಸ್ಮರಣೀಯ ರೀತಿಯಲ್ಲಿ ವ್ಯಕ್ತವಾಗಿದೆ.

"ನಿಮ್ಮಿಂದ ನಾನುಳಿದೆ, ನಿಮ್ಮಿಂದ ನಾ ಬೆಳೆದೆ
ನಾನಿಂದು ನಾನಾಗಿ, ನನ್ನತನ ದಿಟವಾಗಿ
ಉಳಿದು ಬದುಕಿಹೆನಾದರೆ
ನಿಮ್ಮಿಂದ ನಿಮಗಾಗಿ,
ಮತ್ತೊಮ್ಮೆ ಹೇಳುವೆ ನಿಮ್ಮಿಂದ ನಿಮಗಾಗಿ" (ಪು-೫೭)

ಇರುವ ಮಕ್ಕಳೆರಡು ಅವರ ಪಾಲಿನ ಗುಬ್ಬಚ್ಚಿ ಮರಿಗಳಾಗಿವೆ. ಕೈತುತ್ತು ತಿನ್ನುತ್ತ ಬೆಳೆದಿವೆ. ಒಳಿತು ಕೆಡಕಿನ ಪ್ರಭಾವ ಅವರ ಮೇಲಾಗಿದ್ದರೂ ಚೆನ್ನಾಗಿ ಬೆಳೆದಿದ್ದಾರೆ. ಪರಸ್ಪರ ಅವರಿಬ್ಬರು ಕಚ್ಚಾಡಿದರೂ ಇಬ್ಬರಲ್ಲಿ ಒಬ್ಬರಿಗೆ ಮತ್ತೊಬ್ಬರು ಬೈದರೆ ಕೆಂಡಮಂಡಲವಾಗುತ್ತಾರೆ. ಕೆಡುಕಿನ ಗುಣಧರ್ಮವನ್ನು ಹತ್ತಿಕ್ಕಲು ಮದ್ದಾಗುತ್ತಾರೆ. ಜೀವದ ಜೀವವಾಗಿ ಬಾಳುತ್ತಾರೆ. ಅವರಿಬ್ಬರು ಕವಯಿತ್ರಿಯ ಬಾಳಿನ ಅವಿಭಾಜ್ಯ ಅಂಗವಾಗಿದ್ದಾರೆಂಬುದು ಕವಯಿತ್ರಿಯ ಒಡಲ ಕಕ್ಕುಲತೆಯ ನುಡಿಯಾಗಿದೆ.

ಸವಿಮಾತಿನ ಉಡುಗೊರೆ, ಒಲವಿನ ಸಿಂಚನ ಸೆಲೆಯಾಗಿರುವ ಪ್ರಿಯತಮನನ್ನು "ಬಾ, ಬಾ ಗೆಳೆಯ । ಒಂದೊಮ್ಮೆ ಬಂದು ನೀ ನೋಡು । ನಿನ್ನ ಪ್ರೀತಿಯ ಅಂಶಗಳು । ನೀನಿರದೆ ಅದೆಷ್ಟು ಬರಡು" ಎಂದು ಆತ್ಮೀಯವಾಗಿ ಸಹಚರನ ಪ್ರೀತಿಗಾಗಿ ಕಾತರಿಸಿದ್ದಾರೆ. ಪ್ರೊ. ವೀರೇಂದ್ರ ಸಿಂಪಿಯವರು "ಉತ್ಕಟ

ಜೀವನಾನುಭವ ಈ ಕವನಗಳ ಮೂಲಾಧಾರವಾಗಿದೆ. ತೀವ್ರ ನೋವೇ ಇವುಗಳ ಸ್ಥಾಯೀಭಾವವಾದರೆ ವಿರಹ, ನೆನಪಿನ ಆಲಾಪ ಇವುಗಳ ಚಿರಂತನ ಪಲ್ಲವಿಯಾಗಿದೆ. ನೊಂದ ಜೀವನದ ಮಿಡಿತ, ಅಪಾರ ದುಃಖದ ತುಡಿತ, ನವಿರಾದ ಭಾವನೆಗಳ ನಯವಾದ ನಿರೂಪಣೆ ಇಲ್ಲಿ ಹಾಸುಹೊಕ್ಕಾಗಿದೆ. ಸ್ನೇಹಕ್ಕಾಗಿ, ಪ್ರೀತಿಗಾಗಿ, ಸರ್ವರ ಹಿತಕ್ಕಾಗಿ ಹಲುಬಿ ಹಂಬಲಿಸುವ ಈ ಸೂಕ್ಷ್ಮ ಮನಸ್ಸಿನ ಜೀವಕ್ಕೆ ವಿಧಿಗೈದ ಗಾಯದ ಗುರುತು ಇಲ್ಲಿಯ ಪುಟಪುಟಗಳಲ್ಲಿ ಮೂಡಿದೆ. ಕವಿಯ ನಿಟ್ಟುಸಿರು ಓದುಗರ ಹೃದಯ ತಟ್ಟುತ್ತದೆ. ತಮ್ಮ ವೈಯಕ್ತಿಕ ದುಃಖವನ್ನು ಅವರು ಕಲೆಯನ್ನಾಗಿ ಮಾರ್ಪಡಿಸಿದ್ದಾರೆ. ತಮ್ಮ ವೈಯಕ್ತಿಕ ದುಃಖವನ್ನು ದಾಟಿ ಅವರು ದುಃಖಿತರ, ಬಡವರ ಅಳಲಿಗೆ ಧ್ವನಿ ಒದಗಿಸಿದಂತೆ ನೈಸರ್ಗಿಕ ದುರಂತ, ಜಾತೀಯತೆ ಹಾಗೂ ಕೋಮುಗಲಭೆಗಳಂಥ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ" ಎಂಬ ಮಾತುಗಳು ಅರ್ಥವತ್ತಾಗಿವೆ.

ಸ್ವತಂತ್ರರಂತೆ ನಾವು
ತಿಳಿಯೆವು ಅದೇನೆಂದು
ಮೌಲ್ಯಗಳಿಲ್ಲದ ತಿಳಿಗೇಡಿಗೆ
ಅತಂತ್ರವು ಈ ಸ್ವಾತಂತ್ರ್ಯವು (ಪು-೧೯)

ಸ್ವಾತಂತ್ರ್ಯ ಹಾಗೂ ಪಾರತಂತ್ರ್ಯದ ನೀರಸ ಬದುಕನ್ನು ಮನಬಂದಂತೆ ಸ್ವೀಕರಿಸುವ ಮೈಮನಸ್ಸುಗಳ ಮೇಲೆ ಎಚ್ಚರವಿಲ್ಲದೆ ತಿನ್ನುವ ಕುಡಿಯುವ ಜನರಿಗೆ ಸ್ವಾತಂತ್ರ್ಯವೊಂದು ತಿರುಳಿಲ್ಲದ ಆಡಂಬರ ಮತ್ತು ಕಾಟಾಚಾರದ ಆಚರಣೆಯಾಗಿದೆ. ಇಂತಹ ನೈತಿಕ ಎಲ್ಲೇ ಮೀರಿದ ಯಾವುದೇ ಆಚರಣೆಗಳಿಗೆ ಅರ್ಥವಿಲ್ಲ. ಅದಕ್ಕಾಗಿ ವಿನಿಯೋಗಿಸುವ ಹಣ, ಸಮಯ ಎಲ್ಲವೂ ವ್ಯರ್ಥ. ನಿಜವಾದ ಸ್ವಾತಂತ್ರ್ಯ ಜೀವನದ ಉಸಿರಾಗಿರುವ ಕನ್ನಡ ಮಾನವೀಯ ಗುಣವುಳ್ಳದ್ದಾಗಿದೆ. ಕನ್ನಡದ ಏಳ್ಗೆಯಲ್ಲಿ ನಮ್ಮ ಪೀಳಿಗೆ ಅರಳಲಿ ಕುಣಿದು ಕುಪ್ಪಳಿಸಿ ಮೆರೆಯಲಿ ಎಂದು ಹಾರೈಸಿದ್ದಾರೆ.

ಮನ ಮನೆಯೊಳಗಿನ ಪ್ರೀತಿಯೊಂದಿಗೆ ಸುತ್ತಲಿನ ಸಮಾಜವು ಅವರ ಪ್ರೀತಿಯ ಪ್ರಭಾವಲಯದಲ್ಲಿ ಕಾಣಿಸಿಕೊಂಡಿದೆ. ಬೆಳಕಿನ ಚಿತ್ತಾರದಲ್ಲಿ ಮನಮೋಹಕವಾಗಿ ಮೂಡಿನಿಂತಿದೆ. ಐತಿಹಾಸಿಕವಾಗಿ ಜಗದೇಕಮಲ್ಲನ ಕುಡಿಗಳಾಗಿರುವ, ಕನ್ನಡಮ್ಮನ ಹೆಮ್ಮೆಯ ರತ್ನಗಳಾಗಿರುವ ನಾವು ಯಾವುದಕ್ಕೂ ಬಗ್ಗುವುದು ಬೇಡ. ಜಗ್ಗುವುದೂ ಬೇಡ ಎನ್ನುತ್ತಾರೆ. ನೆಲದ ಗಡಿಗಾಗಿ, ಜಲದ ಹನಿಗಾಗಿ ಹೋರಾಡುವಂತೆ ನಟಿಸಿ ಮೋಜು ಕೊಡುವ ರಾಜಕೀಯ ನಾಯಕರ ಮುಠ್ಠಾಳತನ, ಹೊಣೆಗೇಡಿತನವನ್ನು ಪ್ರತಿಭಟಿಸಿದ್ದಾರೆ. ಓಟಿಗಾಗಿ ಜೀವಿಸುವ, ಸ್ವಾರ್ಥಕ್ಕಾಗಿ ಎಲ್ಲವನ್ನೂ ಮಾರಿಕೊಳ್ಳುವ ಜಾಯಮಾನದವರನ್ನು ಕುಟುಕಿದ್ದಾರೆ. ನೀತಿ ನಿಯತ್ತಿನ ಬದುಕು ಹಸನಾಗಿಸದ, ಸಮಾಜದ ಸ್ವಾಸ್ಥ್ಯವನ್ನು ಹದಗೆಡಿಸುವ ಜಗಭಂಡರನ್ನು ನಾವು ಬೆಂಬಲಿಸಬೇಕಾಗಿಲ್ಲ ಎಂದು ಧೈರ್ಯವಾಗಿ ಹೇಳುತ್ತಾರೆ.

"ಪ್ರತಿಕ್ಷಣದ ಕಳವಳವು
ವಿಪರೀತವಾಗಿದೆ. ಹೃದಯವು
ಮಿತಿ ಮೀರಿ ದಿಗಿಲೆದ್ದು ಒದ್ದಾಡಿದೆ"

ಎಂದು ಕಳವಳಿಸಿದ್ದಾರೆ. ಮದರ್ ಥೆರೆಸಾ ಸಾವಿಗೂ ಸ್ಪಂದಿಸಿದ ಜ್ಞಾನಸುಧೆಯ ಮಡಿಲು ಮಮ್ಮಲ ಮರುಗಿದೆ. ಅವಳು ಗರ್ಭ ಧರಿಸದೆ ತಾಯಿಯಾದಳು. ವಿಶ್ವದ ಜನತೆಗೆ ಮಾತೆಯಾದಳು ಎಂದು ಗೌರವ ಸಲ್ಲಿಸಿದೆ. "ಪೀಡಿತರ ಸೇವೆಯೇ ದೈವಾರಾಧನೆ" ಎಂದು ನುಡಿದಂತೆ ನಡೆದು ಜಗದ ಅಕ್ಕರೆಗೆ ಪಾತ್ರಳಾದ ಮದರ್ ಥೆರೆಸಾಳ ನಿಷ್ಠೆಯ ಜೀವನ ಭೂಲೋಕಕ್ಕೆ ಮಾದರಿಯಾಗಿದೆ ಎಂದಿದ್ದಾರೆ.

೨೦೦೯ರಲ್ಲಿ ಉತ್ತರ ಕರ್ನಾಟಕದಲ್ಲಿ ಸಂಭವಿಸಿದ ಅತಿವೃಷ್ಟಿಗೆ ಕವಯಿತ್ರಿಯ ಮನ ತುಂಬಿ ಕಣ್ಣೀರ ಉದುರಿಸಿ 'ತಾಳೆವಮ್ಮ ನಿನ್ನ ಅಬ್ಬರ' ಎಂದು ಮೌನ ಮೀರಿದ ಮಾತು ಪ್ರಾರ್ಥನೆಯಾಗಿದೆ.

"ರೆಪ್ಪೆ ರೆಪ್ಪೆಯಿಂ ಬೇರ್ಪಡಲಿಲ್ಲ ಜೀವ ಹೋಗಿತ್ತು
ಕಣ್ಣೀರು ಕಪೋಲ ತೊಯ್ಸಿರಲಿಲ್ಲ ಸಾವು ಎರಗಿತ್ತು.
ಕೂಡಲದ ಸಂಗನೂ ಮುಳುಗಿ ಹೋದ
ಪರಿಜನರ ಸಂಕಷ್ಟಕ್ಕೆ ಹೆದರಿ ಅಡಗಿದ"

ಎಂಬ ಭಾವ ತೀವ್ರತೆಯು ಕವಯಿತ್ರಿಯ ಸೂಕ್ಷ್ಮ ಸಂವೇದನೆಗೆ ಹಿಡಿದ ಕನ್ನಡಿಯಾಗಿದೆ. ದುಃಖ ದುಮ್ಮಾನದ ಹುಟ್ಟಡಗಿಸಲು ಜೀವನಕ್ಕೆ ಆಧಾರವಾಗಲು ನೀನೊಮ್ಮೆ ಬಾ ಎಂದಿದ್ದಾರೆ. "ಅದೆಷ್ಟು ಜೀವಗಳು / ಅರಳುವ ಮೊದಲೇ ಬಲಿಯಾಗಿರಬಹುದು ಈ ದಳ್ಳುರಿಗೆ? ಕಾರಣರಾರು ಈ ಅಮಾನುಷತೆಗೆ? ಎಂದು ಪ್ರಶ್ನಿಸುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಪ್ರಕೃತಿ ವಿಕೋಪ, ಮಳೆಹಾನಿ, ಬೆಳೆಹಾನಿ, ಮತೀಯ ಗಲಭೆ, ಭಯೋತ್ಪಾದನೆಯಂತಹ ಕೃತ್ಯಗಳಲ್ಲಿ ನೊಂದುಬೆಂದವರಿಗಾಗಿ ಕವಯಿತ್ರಿ ಪರಿತಪಿಸಿದ್ದಾರೆ. ಮನಕಲಕುವ ಘಟನೆಗಳಿಗೆ ಮಿಡಿದಿದ್ದಾರೆ.

ಅಲ್ಲದೆ ನೆನಪುಗಳ ನೂಕುನುಗ್ಗಲು ಇಲ್ಲವಾಗಿಸಲು, ಗೊಂದಲಮಯ ಗೋಜಲು ಪರಿಹರಿಸಲು, ನೊಂದ ಜೀವಕ್ಕೆ ಸಾಂತ್ವನ ನೀಡಲು ಜೀವಕಾರುಣ್ಯದ ಬೆಳಕಾಗಿ ಬರಲು ಮನೋಮಂದಿರದಲ್ಲಿ ಪ್ರತಿಷ್ಠಾಪಿತವಾದ ದೈವೀಶಕ್ತಿಯಲ್ಲಿ ಪ್ರಾರ್ಥಿಸಿದ್ದಾರೆ. ಇದರ ಹೊರತಾಗಿಯೂ ಅವರ ಕಾವ್ಯದ ಪ್ರತಿ ಸಾಲುಗಳು ದೀನದುರ್ಬಲರ, ಮಹಿಳೆಯರ ಬದುಕಿನ ಆಶ್ರಯಕ್ಕೆ ಬೆಂಬಲವಾಗಬೇಕೆಂಬ ಕಕ್ಕುಲಾತಿಗೆ ಪ್ರೋತ್ಸಾಹದಾಯಕವಾಗಿವೆ. ಮನುಷ್ಯನ ಬದುಕಿಗೆ, ದೇಶ–ಕೋಶದ ಅಭಿವೃದ್ಧಿಗೆ, ಕನ್ನಡತ್ವಕ್ಕೆ ಪ್ರೇರಣೆಯಾಗಬಲ್ಲ ನುಡಿದೀಪ್ತಿಗಳಾಗಿವೆ.

ಒಟ್ಟಾರೆ ಮಹಾತ್ಮಾ ಗಾಂಧೀಜಿಯವರ ಸ್ವಾತಂತ್ರ್ಯ, ಸಮತಾವಾದ, ಅಹಿಂಸೆ, ಮಾನವೀಯ ಪ್ರೀತಿ, ಸಕಲರ ಏಳ್ಗೆಗೆ ಕಾರಣವಾಗಬೇಕು. ಜಗವೆಲ್ಲ ನಗುತಿರಲಿ ಜಗದಳವು ನನಗಿರಲಿ ಎಂಬ ಈಶ್ವರ ಸಣಕಲ್ ಅವರ ಮಾತಿನಂತೆ ನಾವು ಅನುಭವಿಸಿದ ಕಷ್ಟ, ನೋವು, ಯಾತನೆಗಳೆಲ್ಲ ನಮ್ಮೊಂದಿಗೆ ಐಕ್ಯವಾಗುವುದರ

ಜೊತೆಗೆ ಸಮಾಜದ ಒಳಿತಿಗಾಗಿ ನಮ್ಮತನ ಸವೆಯಬೇಕೆಂಬ ಆಶಯ ಹೊಂದಿದ್ದಾರೆ. ಸಮಾಜದ ಹೊಣೆಗಾರಿಕೆ ನಿಭಾಯಿಸುವ ಸಲುವಾಗಿ ನಮ್ಮೆಲ್ಲ ಸಮಯ, ಶ್ರಮವನ್ನೆಲ್ಲ ವಿನಿಯೋಗಿಸಿಬೇಕೆಂಬ ಕಳಕಳಿ ಸಾರ್ವತ್ರಿಕವಾಗಲಿ. ಕತ್ತಲ ಇಬ್ಬನಿಯಲಿ ಬಣ್ಣದ ಚಿತ್ತಾರ ಮೂಡಿಸಿರುವ ಕವಯಿತ್ರಿಯ ರಚನಾತ್ಮಕ ಕನಸುಗಳೆಲ್ಲ ನನಸಾಗಲಿ. ಆಂತರ್ಯದೊಳು ಉದಯಿಸುವ ಬಯಕೆಗಳೆಲ್ಲ ಚೂರಾಗದಿರಲಿ. ಸೋಲುವ ಕಂಗಳಲಿ ಬೆಳದಿಂಗಳು ಮನೆ ಮಾಡಲಿ. ಶಾಶ್ವತ ಸುಖಗಳೆಲ್ಲ ತಾವರಳಿ ಬಂದು ಪೂರ್ಣಿಮಾ ಜಾರ್ಜ್ ಅವರ ಮುಡಿಗೇರಲಿ. ನಸುನಗೆಯ ಜೀವಕೆ ಚಿರಂತನ ಸಂಜೀವಿನಿಯಾಗಲಿ ಎಂದು ಆಶಿಸಬಹುದು.

ವಿಶ್ಲೇಷಣಾತ್ಮ ಸಂಶೋಧನೆ:

ಪ್ರೊ. ಪೂರ್ಣಿಮಾರವರು ಕೌಟುಂಬಿಕ ಜೀವನದ ನಿರ್ವಹಣೆ, ಸಂಘ ಸಂಸ್ಥೆಗಳೊಂದಿಗೆ ನಿಕಟಸಂಬಂಧ, ಜನಪರ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವುದರ ಜೊತೆಗೆ ಸಂಶೋಧನ ವ್ಯಾಸಂಗವನ್ನು ಮುಂದುವರೆಸಿದ್ದಾರೆ. ಇದಕ್ಕೆಲ್ಲ ಅವರಲ್ಲಿನ ಪಾದರಸದಂತಹ ಚಟುವಟಿಕೆ ಕೇಂದ್ರಿತ ವ್ಯಕ್ತಿತ್ವವೇ ಕಾರಣವಾಗಿದೆ. ಅವರು ಇತ್ತೀಚೆಗೆ ಡಾಕ್ಟರೆಟ್ ಪದವಿಗಾಗಿ ಆಫ್ಘನ್-ಅಮೇರಿಕನ್ ಕಾದಂಬರಿಕಾರರಾದ ಖಾಲೆದ್ ಹುಸೇನಿರವರ ಮೂರು ಕಾದಂಬರಿಗಳಾದ The Kite Runner, A Thousand Splendid Suns ಹಾಗು And the Mountains Echoed ಮತ್ತು The Kite Runner ಕಾದಂಬರಿಯನ್ನಾಧರಿಸಿ ಹೊರಬಂದ ಚಲನಚಿತ್ರದ ವಸ್ತು ವಿಷಯ ವನ್ನೊಳಗೊಂಡು, ಆಫ್ಘಾನಿಸ್ತಾನಿದಲ್ಲಿ ನಡೆದ ಮಾನವ ಸಂಸ್ಕೃತಿಯ ಮಾರಣಹೋಮದ ಬಗ್ಗೆ ಮತ್ತು ಮುಜಾಹಿದ್ದೀನ್ ಹಾಗು ತಾಲಿಬಾನ್ ದುರ್ನಡತೆಯಡಿಯಲ್ಲಿ ಹೇಗೆ ಕುಟುಂಬ ವ್ಯವಸ್ಥೆ ಕುಸಿದುಬಿದ್ದು ದೇಶದಲ್ಲಿ ಅರಾಜಕತೆ ಮೆರೆಯಿತು ಎಂಬುದರ ಬಗ್ಗೆ ಅಧ್ಯಯನ ಪೂರೈಸಿದ್ದಾರೆ. ಅವರ Disruption of Family: A Study in Khaled Husseini's Novels and

its Representation in Film (ಕುಟುಂಬದ ವಿಘಟನೆ : ಖಾಲೇದ್ ಹೊಸ್ಸೈನಿಯವರ ಕಾದಂಬರಿಗಳಲ್ಲಿ ಹಾಗು ಚಲನಚಿತ್ರದಲ್ಲಿ ಇದರ ತೋರಿಕೆ- ಒಂದು ಅಭ್ಯಾಸ) ಎಂಬ ವೈಚಾರಿಕಪೂರ್ಣ ಮಹಾಪ್ರಬಂಧವನ್ನು ಡಾ. ಬಿ.ಟಿ. ಲಹಾನೆಯವರ ಮಾರ್ಗದರ್ಶನದಲ್ಲಿ ರಚಿಸಿ ಸ್ವಾಮಿ ರಮಾನಂದತೀರ್ಥ ಮರಾಠವಾಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ್ದಾರೆ.

ಪ್ರಸ್ತುತ ಸಂಶೋಧನ ಅಧ್ಯಯನದಲ್ಲಿ ಅವರು ಸಮಾಜದ ನೂರೆಂಟು ಕೆಡುಕುಗಳ ಬಗ್ಗೆ ಪ್ರಶ್ನಾರ್ಥಕ ಚಿಹ್ನೆಯನ್ನಿಟ್ಟು, ಯಾವುದೇ ಸಮಾಜದಲ್ಲಿ ಧಾರ್ಮಿಕ ಸೋಗುಲಾಡಿತನಕ್ಕೆ, ಡಾಂಭಿಕತೆಗೆ ಎಡೆಮಾಡಿಕೊಟ್ಟು ಮಹಿಳೆಯರ, ಮಕ್ಕಳ ಹಕ್ಕುಗಳನ್ನು ಹತ್ತಿಕ್ಕಿದರೆ, ದೇಶವೇ ದುರ್ಗತಿಗೆ ನೂಕಲ್ಪಡುತ್ತದೆ ಎಂಬ ವಿಚಾರ ತಳಹದಿಯ ಮಹಾಪ್ರಬಂಧವನ್ನು ರಚಿಸಿದ್ದಾರೆ. ಕಾನೂನು ಮಾನವನ ಬೆಳವಣಿಗೆಗೆ ಅಗತ್ಯ, ಆದರೆ ಅದನ್ನು ಜನಸಾಮಾನ್ಯರ ಬದುಕನ್ನು ಹತ್ತಿಕ್ಕಲು ರೂಪಿಸಬಾರದು ಎಂಬುದಕ್ಕೆ ಅಫ್ಘಾನಿಸ್ತಾನದಲ್ಲಿ ನಡೆದ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ಆಧರಿಸಿ ಸಂಶೋಧನ ಮಹಾಪ್ರಬಂಧವನ್ನು ರಚಿಸಿದ್ದಾರೆ.

ಖಾಲೆದ್ ಹೊಸ್ಸೈನಿಯವರು ಮೂಲತಃ ಅಫ್ಘಾನಿಸ್ತಾನಿನವರು. ತಂದೆಯೊಂದಿಗೆ ಫ್ರಾನ್ಸ್, ಅಮೆರಿಕಾ ಸೇರಿದಂತೆ ಹಲವು ಕಡೆಗಳಲ್ಲಿ ವಾಸಿಸಬೇಕಾಯಿತು. ಭಾಷೆ ಗೊತ್ತಿರದ, ಸಂಸ್ಕೃತಿಗೆ ಪರಿಚಿತನಲ್ಲದ ಖಾಲೆದ್‌ನಿಗೆ ಜೀವನ ಬಹಳ ದಿಗಿಲೆನಿಸಿತು. ಆದರೂ ಪರಕೀಯ ಭಾಷೆ ಕಲಿತು ಓದು-ಬರಹದಲ್ಲಿ ಹುಡುಗ ಆಸಕ್ತಿ ತೋರಿಸುತ್ತ ಜೀವನಾನುಭವ ಪಡೆದವರು. ಮೊದಲಿನಿಂದಲೂ ಕಥೆ ಬರೆಯುವ ಗೀಳು ಖಾಲೇದ್‌ನಿಗಿದ್ದರೂ ಮನೆಯ ಆರ್ಥಿಕ ಪರಿಸ್ಥಿತಿ ಸರಿ ಇರದ ಕಾರಣ ಹಾಗು ತಂದೆ-ತಾಯಿಯವರ ಮಾತಿನಂತೆ ವೈದ್ಯಕೀಯ ಅಭ್ಯಾಸ ಮಾಡಿ ವೈದ್ಯರಾದರು. ಆದರೂ ಕಥೆ ಬರೆಯುವ ಹುಚ್ಚು ಬಿಡಲಿಲ್ಲ. ಮೂಲದೇಶದಲ್ಲಿನ ರಾಜಕೀಯ ಅಸ್ಥಿರತೆ, ಜನಾಂಗೀಕ ಕಲಹ, ಜೀವಪರ ಸಂವೇದನೆಗಳಿಲ್ಲದ ನೆಲದ ತುಡಿತಗಳು ಅವರನ್ನು ಬಹಳಷ್ಟು

ಕಾಡಿವೆ. ಅವುಗಳನ್ನೇ ತಮ್ಮ ಬರೆಹಕ್ಕೆ ಆಯ್ಕೆ ಮಾಡಿಕೊಂಡಿದ್ದನ್ನು ಸಂಶೋಧಕರು ಗುರುತಿಸಿದ್ದಾರೆ.

ಒಂದೊಮ್ಮೆ ಬರೆದು ಮೂಲೆಗುಂಪಾದ "ದಿ ಕೈಟ್ ರನ್ನರ್" ಎಂಬ ಕಥೆಯೊಂದನ್ನು ಎತ್ತಿಕೊಂಡು ಅದೇ ಹೆಸರಿನ ಕಥೆಯನ್ನು ವಿಸ್ತರಿಸಿ ಖಾಲೆದ್ ಹೊಸ್ಸೈನಿ ೨೦೦೩ರಲ್ಲಿ ಕಾದಂಬರಿ ಪ್ರಕಟಿಸಿದರು. ಅದು ರಾತೋರಾತ್ರಿ ಅವರಿಗೆ ಒಬ್ಬ ಅತ್ಯುತ್ತಮ ಲೇಖಕ ಎಂಬ ಪಟ್ಟ ತಂದುಕೊಟ್ಟಿತು. ಇದು ಎರಡು ಎಳೆಯ ಮಕ್ಕಳು ಸ್ವಚ್ಛಂದವಾಗಿ ಕಾಲ ಕಳೆಯುತ್ತ ಬೆಳೆಯುತ್ತಿದ್ದವು. ಒಂದು ಸಂದರ್ಭವು ಅವರನ್ನು ಮೇಲುಕೀಳಿನ ಸುಳಿಯಲ್ಲಿ ಸಿಲುಕುವಂತೆ ಮಾಡುತ್ತದೆ. ಕಾಲ ಕಳೆದಂತೆ ಅವರು ದೂರವಾಗಿ ಮನೆ-ಮನಗಳ ವಿನಾಶಕ್ಕೆ ಹೇಗೆ ಕಾರಣರಾಗುತ್ತಾರೆ ಎಂಬುದು ಈ ಕಥೆಯ ಹಂದರವಾಗಿದೆ.

"ಎ ಥೌಸಂಡ್ ಸ್ಪ್ಲೆಂಡಿಡ್ ಸನ್ಸ್" ಎಂಬ ಎರಡನೆಯ ಕಾದಂಬರಿಯಲ್ಲಿ ಅಫ್ಘಾನಿಸ್ತಾನಿನ ಹೆಣ್ಣುಮಕ್ಕಳ ಪರಿಸ್ಥಿತಿಯನ್ನು ಕಟ್ಟಿಕೊಡುತ್ತಾರೆ. ದೇಶದೆಲ್ಲೆಡೆ ಭಯೋತ್ಪಾದಕರ ಅಟ್ಟಹಾಸ ಮೆರೆಯುತ್ತಿರುವಾಗ ಹೆಣ್ಣುಮಕ್ಕಳು ಮತ್ತು ಮಕ್ಕಳ ಪರಿಸ್ಥಿತಿ ಹೇಗೆ ವಿನಾಶದೆಡೆಗೆ ತಳ್ಳಲ್ಪಡುತ್ತದೆ ಎಂಬುದನ್ನು ಹೃದಯವಿದ್ರಾವಕವಾಗಿ ಬಿಚ್ಚಿಡುತ್ತಾರೆ ಎನ್ನುವುದನ್ನು ಗಮನಿಸಿದ್ದಾರೆ.

ಗಂಡು ಹೆಣ್ಣಿನ ಸಮತೆಯ ಪರಿಕಲ್ಪನೆಯನ್ನೇ ಸಾರಾಸಗಟಾಗಿ ಧಿಕ್ಕರಿಸಿ, ಅದೊಂದು ಅತ್ಯಂತ ಭ್ರಷ್ಟ ಸಮಾಜದ ಅನಾವರಣವಾಗಿದೆ. ರಚನಾತ್ಮಕ ಸಂಗತಿಗಳ ನಿರ್ಮಾಣ ಹಾಗು ಅದರಿಂದಾಗಿ ಹೇಗೆ ಹೆಣ್ಣುಮಕ್ಕಳು ಅವರೊಡನೆ ಅವರ ಕುಟುಂಬಗಳು ಇನ್ನರಿಯದ ಕಷ್ಟಗಳನ್ನು ಅನುಭವಿಸಬೇಕಾಯಿತು ಎಂಬುದನ್ನು ಖಾಲೇದ್ ಹೊಸ್ಸೈನಿರವರ 'A thousand Splendid Suns' ಮತ್ತು 'And the Mountains Echoed'ಗಳ ಮೂಲಕ ಡಾ. ಪೂರ್ಣಿಮಾರವರು ತಮ್ಮ ಮಹಾಪ್ರಬಂಧದಲ್ಲಿ ಪ್ರತಿಪಾದಿಸಿದ್ದಾರೆ. ಎಲ್ಲ ಕಷ್ಟಗಳ ಹಾಗು ಎಲ್ಲ ದುಷ್ಕೃತ್ಯಗಳ

ಮೂಲ ಹೆಣ್ಣೇ ಏನೋ ಎಂಬಂತೆ ಭಾವಿಸಿದಂತಿದೆ. ಹೆಣ್ಣನ್ನು ಮಾತ್ರ ಭೋಗದ ವಸ್ತುವನ್ನಾಗಿಸುವ ಸಮಾಜ ಹೇಗೆ ಹಂತ ಹಂತವಾಗಿ ತನ್ನ ಸಾವಿಗೆ ತಾನೆ ಕಾರಣವಾಗುತ್ತದೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಮರಿಯಂ ಒಬ್ಬ ಶ್ರೀಮಂತನ ಕಾಮದಾಸೆಗೆ ಬಲಿಯಾದ ಕೆಲಸದಾಕೆಯ ಮಗಳಾಗಿ ಹುಟ್ಟಿದ್ದೇ ಅವಳ ಜೀವನದಲ್ಲಿ ಅವಳು ಮಾಡಿದ ಮಹಾಪರಾಧವಾಗಿ ಬಿಡುತ್ತವೆ. ಹುಟ್ಟಿನಿಂದ ಕೀಳಾಗಿ, ಸಮಾಜದ ಅನಾದರಕ್ಕೆ ಗುರಿಯಾದ ಮರಿಯಂ ಈ ಪಿಡುಗಿನಿಂದ ಮೇಲೇಳಬೇಕೆಂದು ಪ್ರಯತ್ನಪಟ್ಟಾಗೊಮ್ಮೆ ಆಘಾತಕ್ಕೊಳಗಾಗುತ್ತಾಳೆ. ಆಕೆಯನ್ನು ಹೆತ್ತ ಅಪ್ಪನೇ ಅವಳನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾನೆ. ಅಮ್ಮನ ಆತ್ಮಹತ್ಯೆಯೊಡನೆ ತೀರಾ ಒಬ್ಬಂಟಿಯಾದ ಈ ಪುಟ್ಟ ಹುಡುಗಿಯ ಮೇಲೆ ಕಿಂಚಿತ್ ಕರುಣೆಯನ್ನು ತೋರದೆ ಅವಳ ಅಪ್ಪ ಹಾಗು ಆತನ ಮೂವರು ಹೆಂಡಂದಿರು ಆಕೆಯನ್ನು ಅವಳಿಗಿಂತ ವಯಸ್ಸಿನಲ್ಲಿ ಮೂವತ್ತು ವರ್ಷ ದೊಡ್ಡವನಾಗಿರುವ ರಶೀದ್ ಎಂಬಾತನೊಡನೆ ಮದುವೆ ಎಂಬ ಶಾಸ್ತ್ರ ಮಾಡಿ ಅವಳನ್ನು ಅವಳರಿಯದ ದೂರದೂರಿಗೆ ತೊಲಗಿಸುತ್ತಾರೆ. ಈ ಸಂದರ್ಭದ ಬಗ್ಗೆ ವಿವೇಚನೆ ಮಾಡುತ್ತ ಪೂರ್ಣಿಮಾರವರು ಅಫ್ಘಾನಿಸ್ತಾನಿನ ಸಮಾಜವು ಹೇಗೆ ಇಂತಹ ಪಿಡುಗಿನಿಂದ ನರಳುತ್ತಿದೆ, ಹೇಗೆ ಜಗವರಿಯದ, ಹಾಲುಗಲ್ಲದ ಪುಟ್ಟ ಹುಡುಗಿಯರು ಸಮಾಜದ ಧೂರ್ತತೆಗೆ ಬಲಿಯಾಗುತ್ತಿದ್ದಾರೆ ಎಂಬುದನ್ನು ಪ್ರತಿಪಾದಿಸಿದ್ದಾರೆ.

ಇದೇ ಕಾದಂಬರಿಯ ಇನ್ನೊಂದು ಪಾತ್ರ ಲೈಲಾ. ದೇಶದಲ್ಲಿನ ಅರಾಜಕತೆ, ರಕ್ತಪಿಪಾಸು ಅಧಿಕಾರಶಾಹಿಯ ದುರ್ವರ್ತನೆ ಹಾಗು ಅಧಿಕಾರಕ್ಕಾಗಿ ಎಗ್ಗಿಲ್ಲದೆ ನಡೆಯುತ್ತಿರುವ ಮಾರಣಹೋಮದ ಬಲಿಪಶುವಾಗಿ ತಂದೆ, ತಾಯಿ, ಅಣ್ಣಂದಿರು, ಸ್ನೇಹಿತೆಯರು ಹೀಗೆ ಎಲ್ಲರನ್ನು ಕಳೆದುಕೊಂಡು ಹೊಟ್ಟೆಯಲ್ಲಿ ಬೆಳೆಯುತ್ತಿರುವ ತನ್ನ ಪ್ರೇಮದ ಕುಡಿಯನ್ನು ಉಳಿಸುವುದಕ್ಕೋಸ್ಕರ ತನಗಿಂತ ನಲ್ವತ್ತೈದು

ವರ್ಷ ದೊಡ್ಡವನಾದ ರಶೀದನ ಕಾಮಲಾಲಸೆಗೆ ಬಲಿಯಾಗಿ ಅವನ ಹೆಂಡತಿಯಾಗಿ ನರಳುವುದು ಮನಃಕಲಕುವಂತಿದೆ.

ದೇಶದಲ್ಲಿ ನಡೆಯುವ ಅರಾಜಕತೆ, ಯುದ್ಧದ ವಾತಾವರಣವು ಯಾವ ಹೆಣ್ಣಿಗೂ, ಯಾವ ಮಗುವಿಗೂ, ಯಾವ ಮನೆಗೂ ನಿಶ್ಚಿತತೆಯ ಸುಖ ನೀಡುವುದೇ ಇಲ್ಲ ಎಂಬುವುದನ್ನು ಡಾ. ಪೂರ್ಣಿಮಾರವರು ಮರಿಯಂ, ಲೈಲಾ ಹಾಗೂ ರೋಶಿ ಎಂಬ ಹೆಂಗಳೆಯರ ಪಾತ್ರಗಳ ತಲ್ಲಣ, ತುಮುಲಗಳ ಮೂಲಕ ತಿಳಿಸುತ್ತಾರೆ. ಈ ಪಾತ್ರಗಳು ಇಡೀ ಸಮಾಜದ ಅವರಂತಹ ನತದೃಷ್ಟರ ಪ್ರತಿನಿಧಿಗಳಾಗುತ್ತವೆ. ತಮ್ಮೆಲ್ಲ ಅಮಾಯಕತೆ, ಅಸಹಾಯಕತೆಗಳೊಡನೆ ಅವರು ಗಟ್ಟಿಗರಾಗುತ್ತಾರೆ.

ಪರಿ ಹಾಗು ಅಬ್ದುಲ್ಲಾ ಎಂಬ ಪುಟ್ಟ ಮಕ್ಕಳು ತಮ್ಮವರ ಎಂದೂ ತೀರದ ಹಣದ ದಾಹಕ್ಕೆ ಬಲಿಯಾಗಿ ಬದುಕಿನ ಹೊಡೆತಕ್ಕೊಳಗಾಗಿ ಹಕ್ಕಿಯ ರೆಕ್ಕೆಯಿಂದ ಉದುರಿದ ಕೋಮಲ ಪುಕ್ಕಗಳಂತೆ ಎಲ್ಲೆಲ್ಲಿಯೋ ಗಾಳಿಗೆ ತೂರಿಕೊಂಡು ಹೋಗುತ್ತಾರೆ. ತಮಗರಿವಿಲ್ಲದಂತೆ ಬೇರೆಯವರ ಆಟದ ದಾಳಗಳಾಗುತ್ತಾರೆ.

ಮರಿಯಂ ಎಷ್ಟೇ ಕಷ್ಟಪಟ್ಟರೂ ತನ್ನ ತಂದೆ, ಗಂಡರನ್ನು ಮೆಚ್ಚಿಸಲಾಗದೇ ಕಾಲಕಸವಾಗುತ್ತಾಳೆ. ಇದು ಸಾಕಾಗಲ್ಲವೆಂಬಂತೆ ಅವಳ ಸುತ್ತಮುತ್ತಲಿನ ಧರ್ಮಾಂಧತೆ ಅವಳನ್ನು ಬೆಳಕೇ ಕಾಣದ ಕೂಪದಲ್ಲಿ ನೂಕುತ್ತದೆ. ಹೆಣ್ಣಿಗೆ ಆರ್ಥಿಕ, ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಸ್ವಾತಂತ್ರ್ಯವನ್ನು ನೀಡದ ಅಫ್ಘಾನಿಸ್ತಾನಿನ ಸಮಾಜ ಅವಳ ಯಾವ ಬೇಕು-ಬೇಡಗಳ ಬಗ್ಗೆ ಕ್ಷಣಕಾಲವೂ ಯೋಚಿಸುವುದಿಲ್ಲ. ಅವಳು ತನ್ನದೇ ಆದಂತಹ ಧ್ವನಿಯಿಲ್ಲದ ಮಾಂಸದ ಮುದ್ದೆಯಾಗಿಯೇ ಉಳಿಯುವಂತಹ ಪರಿಸ್ಥಿತಿ ನಿರ್ಮಾಣಗೊಳಿಸುತ್ತದೆ. ಇದು ಶಿಕ್ಷಣವಿಲ್ಲದ ಹೆಂಗಳೆಯರ ಪರಿಸ್ಥಿತಿಯಾದರೆ ಇನ್ನು ಶಿಕ್ಷಣ ಪಡೆದ ಲೈಲಾ,

ನೀಲಾರಂತಹವರು ತಮ್ಮ ಜೀವನವನ್ನು ತಮ್ಮ ಹತೋಟಿಯಲ್ಲಿಡಲು ಹರಸಾಹಸಪಡುತ್ತಾರೆ. ನೀಲಾ ತಕ್ಕಮಟ್ಟಿಗೆ ಯಶಸ್ಸು ಪಡೆದರೂ ತನ್ನದೇ ಆದ ಹಮ್ಮು-ಬಿಮ್ಮು, ಕೆಟ್ಟ ನಿರ್ಧಾರಗಳಿಂದಾಗಿ ತನ್ನ ಜೀವನವನ್ನಷ್ಟೇ ಅಲ್ಲ, ಬೇರೆ ಯಾರದೋ ಮನೆಯಲ್ಲಿ ಹುಟ್ಟಿದ 'ಪರಿ'ಯ ಜೀವನವನ್ನು ಅವಳಿಂದ ಕಸಿದುಕೊಂಡು, 'ಪರಿ'ಗೆ ಜೀವನದಲ್ಲಿ ಏನೋ ಒಂದು ನೀರವತೆಯನ್ನು ನೀಡುತ್ತಾಳೆ. ಆಕೆ ತನ್ನಗರಿವಿಲ್ಲದೆಯೇ ಜೀವನದಲ್ಲಿ ಅಸಹ್ಯವಾದ ಶೂನ್ಯಪ್ರಜ್ಞೆಯನ್ನು ಅನುಭವಿಸುತ್ತಾಳೆ. ಅಬ್ದುಲ್ಲಾ ಜೀವನಪೂರ್ತಿ ತನ್ನ ಅಪ್ಪ ಹಣದ ಆಸೆಗೆ ಸ್ಥಿತಿವಂತರ ಮನೆಯ ದತ್ತುಮಗಳಾಗಿ ಮಾರಾಟ ಮಾಡಿದ ತನ್ನ ಪುಟ್ಟ ತಂಗಿಯನ್ನು ಕಳೆದುಕೊಂಡು ಹಲುಬುತ್ತಾನೆ ಎನ್ನುವಂತಹ ಸೂಕ್ಷ್ಮ ಸಂಗತಿಗಳನ್ನು ಕಟ್ಟಿಕೊಟ್ಟಿದ್ದಾರೆ.

ಶಿಕ್ಷಣಕ್ಕೆ ತುಂಬಾ ಮಹತ್ವಕೊಡುವ ಹಕೀಮ ಹಾಗು ಫರೀಬಾ ದಂಪತಿಯ ಮಗಳಾಗಿ ಹುಟ್ಟಿದ ಲೈಲಾ ತಕ್ಕಮಟ್ಟಿಗೆ ಒಳ್ಳೆಯ ಶಿಕ್ಷಣವನ್ನು ಪಡೆದುಕೊಂಡರೂ ಕೂಡ ಅಫ್ಘಾನಿಸ್ತಾನಿನಲ್ಲಿರುವ ಯುದ್ಧದ ವಾತಾವರಣದಿಂದಾಗಿ ತತ್ತರಿಸುತ್ತಾಳೆ. ರಷಿಯನ್‌ರನ್ನು ಹೊಡೆದೋಡಿಸುವ ಮಹದಾಸೆಯನ್ನಿಟ್ಟುಕೊಂಡಿರುವ ಮುಜಾಹಿದೀನ್‌ರ ದಾಳಗಳಾಗಿ ಅವಳ ಹದಿಹರೆಯದ ಅಣ್ಣಂದಿರು ಸೇನೆ ಸೇರಿದಾರಭ್ಯ ಆಕೆಯ ತಾಯಿಯೊಂದು ಜೀವಂತ ಶವವಾಗುತ್ತಾಳೆ. ಇದರಿಂದ ಲೈಲಾ ತಾಯಿಯ ಪ್ರೀತಿಯಿಂದ ವಂಚಿತಳಾಗುತ್ತಾಳೆ.

ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕನಾಗಿದ್ದ ಲೈಲಾನ ಅಪ್ಪ ನೌಕರಿ ಕಳೆದುಕೊಂಡು ಜೀವನ ನಿರ್ವಹಣೆಗಾಗಿ ಬ್ರೆಡ್ ತಯಾರಿಸುವ ಫ್ಯಾಕರಿಯೊಂದರಲ್ಲಿ ಕಾರ್ಮಿಕನಾಗಿ ದುಡಿಯಬೇಕಾಗುತ್ತದೆ. ಮುಜಾಹಿದೀನ್ ಶಕ್ತಿಗಳು ಕಾಬೂಲ ಮೇಲೆ ಅಧಿಪತ್ಯ ಸಾಧಿಸಲು ಒಬ್ಬರನ್ನೊಬ್ಬರು ಕೊಲ್ಲಲು ಪ್ರಾರಂಭಿಸಿದಾಗ ಲೈಲಾಳ ಗೆಳತಿಯರೆಲ್ಲರೂ ಒಬ್ಬೊಬ್ಬರಾಗಿ ಎಲ್ಲಿಂದಲೋ ಬಂದೆರಗುವ ಗುಂಡುಗಳಿಗೆ ಬಲಿಯಾಗುತ್ತಾರೆ. ಅಷ್ಟೇ ಅಲ್ಲದೆ ಲೈಲಾಳ ಗೆಳೆಯ

ಪ್ರಿಯತಮನಾದ ತಾರಿಖ್ ಕೂಡ ಅವನ ಅಪ್ಪನ ಸ್ವಾಸ್ಥ್ಯವನ್ನು ಕಾಪಾಡುವುದಕ್ಕಾಗಿ ತನ್ನ ಕುಟುಂಬದೊಡನೆ ದೇಶ ಬಿಟ್ಟು ಗುಳೆ ಹೋಗುತ್ತಾನೆ. ಅಂತು, ಇಂತೂ ಅಮ್ಮ-ಅಪ್ಪನೊಡನೆ ಉಳಿದಿದ್ದ ಲೈಲಾಳೂ ಕೂಡ ಅಫ್ಘಾನಿಸ್ತಾನನ್ನು ತೊರೆದು ಪಕ್ಕದ ಪಾಕಿಸ್ತಾನಕ್ಕೆ ಹೋಗಬೇಕೆನ್ನುವಷ್ಟರಲ್ಲಿ ಬಂದೆರಗಿದ ಬಾಂಬೊಂದು ಅವಳ ತಂದೆ-ತಾಯಿಯನ್ನು ಬಲಿತೆಗೆದುಕೊಳ್ಳುತ್ತದೆ. ಅವಳ ಶ್ರವಣಶಕ್ತಿಯನ್ನು ಪಾರ್ಶ್ವವಾಗಿ ಕಸಿದುಕೊಂಡು ಉಸಿರಾಡುವ ಮಾಂಸದ ಮುದ್ದೆಯನ್ನಾಗಿಸುತ್ತದೆ. ಹೀಗೆ ರಾಜಕೀಯ ಅರಾಜಕತೆಗೆ ಅದೆಷ್ಟೋ ಕುಟುಂಬಗಳು ಬಲಿಯಾಗಿವೆ, ಜೀವನಗಳು ಧ್ವಂಸಗೊಂಡಿವೆ ಎಂಬುದನ್ನು ಪೂರ್ಣಿಮಾರವರು ತಮ್ಮ ಪ್ರಬಂಧದಲ್ಲಿ ಎಳೆಎಳೆಯಾಗಿ ಪ್ರತಿಪಾದಿಸಿದ್ದಾರೆ.

ಖಾಲೇದ್ ಹೊಸ್ಸೈನಿರವರ ಮೂರೂ ಕೃತಿಗಳು ಜೀವನದ ತಲ್ಲಣಗಳನ್ನು ತೆರೆದಿಡುತ್ತವೆ. ಇಲ್ಲಿನ ಪ್ರಮುಖ ಪಾತ್ರಗಳು ಎಂತಹ ನರಕಯಾತನೆಯನ್ನು ಅನುಭವಿಸಿದರೂ ಕೂಡ ಬದುಕನ್ನು ಇದ್ದ ಪರಿಸ್ಥಿತಿಯಲ್ಲಿಯೇ ಹಸನುಗೊಳಿಸಬೇಕೆಂದು ನಡೆಸುವ ಶತಪ್ರಯತ್ನಗಳೇ ಬದುಕನ್ನು ಕಟ್ಟುತ್ತವೆ. ಅತಂತ್ರಸ್ಥಿತಿಯಲ್ಲೂ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನಗಳನ್ನು; ಕೃತಿಗಳಲ್ಲಿ ಅಡಕವಾಗಿರುವ ಬದುಕಬೇಕೆಂಬ ವಾಂಛೆಯನ್ನು ಪೂರ್ಣಿಮಾರವರು ಅನಾವರಣಗೊಳಿಸುತ್ತಾರೆ.

ಖಾಲೇದ್ ಹೊಸ್ಸೈನಿರವರ ಕೃತಿಗಳಲ್ಲಿ ಜೀವನವು ಪುಂಖಾನುಪುಂಖವಾಗಿ ತೆರೆದುಕೊಳ್ಳುತ್ತ ಹೋಗುತ್ತದೆ. ಮುಖ್ಯಪಾತ್ರಗಳು ಹೊಸ ಸಾಧ್ಯತೆಗಳಿಗೆ ಮೈಯೊಡ್ಡುತ್ತವೆ. ಎಷ್ಟೇ ಅವಹೇಳನಕ್ಕೆ ಒಳಗಾಗಿದ್ದರೂ ಅಮೀರ್‌ನನ್ನು ಪುನಃಪೂರ್ತಿ ಪ್ರೀತಿಸುವ ಹಸನ್ ಎಂದಾದರೊಂದು ದಿನ ಅಮೀರ್ ತಾನು ಬರೆದ ಪತ್ರವನ್ನು ಓದಿಯೇ ಓದುತ್ತಾನೆಂದು ಬರೆಯುವುದನ್ನು ಕಲಿತು, ದುಂಡು ಅಕ್ಷರಗಳಲ್ಲಿ ಪತ್ರ ಬರೆದಿಟ್ಟು ತಾಲೀಬನ್‌ರ ಗುಂಡಿಗೆ ಬಲಿಯಾಗುತ್ತಾನೆ. ದೇಶವನ್ನು ಬಿಟ್ಟೋಡುವ ಪರಿಸ್ಥಿತಿ ಬಂದರೂ ದೇಶದ ನೆಲದ ಮಣ್ಣನ್ನು ಚುಂಬಿಸುವ

ಆಘಾಖಾನ್ ಮನುಷ್ಯನಾಗಿ ಮಾತ್ರ ಗೋಚರಿಸುತ್ತಾನೆ. ತಾನೆ ತನ್ನ ಜೀವನದ ಅವಾಂತರಗಳಿಗೆ ಕಾರಣವಾಗಿದ್ದು, ಅದರ ಅರಿವನ್ನು ಸದಾ ತನ್ನ ಹೃದಯದಲ್ಲಿ ಹಸಿಯಾಗಿಡುತ್ತ ಸಂಕಟಪಡುವ ಅಮೀರ್, ವ್ಯಭಿಚಾರದ ಸಾಕ್ಷಿ ಸ್ವರೂಪವಾಗಿ ಹುಟ್ಟಿ, ತಾನು ಮಾಡದ ತಪ್ಪನ್ನು ತನ್ನ ತಲೆಯ ಮೇಲೆ ಹೊತ್ತು ತಿರುಗುತ್ತ, ಶೋಷಣೆಗೆ ಒಳಗಾಗುತ್ತಾನೆ. ಕೊನೆಗೆ ಹೊಟ್ಟೆಯಿಂದ ಬಂಜೆಯಾದರೂ, ಗಾಜಿ ಕ್ರೀಡಾಂಗಣದಲ್ಲಿ ಕಲ್ಲೆಸೆತಕ್ಕೆ ಬಲಿಯಾಗಿ ಹೆಣವಾಗಿ ಉರುಳಿದರೂ ಸಾವಿರಾರು ಮಕ್ಕಳಿಗೆ ತಾಯಾಗುವ ಮರಿಯಂ, ಸ್ಥಿತಿವಂತ ಮನೆಯಲ್ಲಿ ಹುಟ್ಟಿ, ಶಿಕ್ಷಣದ ಗರಿಯನ್ನು ಮುಡಿಗೆ ಸಿಕ್ಕಿಸಿಕೊಂಡಿದ್ದರೂ ದೇಶದಲ್ಲಿ ನಡೆಯುತ್ತಿದ್ದ ಅರಾಜಕತೆಗೆ ಬಲಿಯಾಗಿ ಕುಟುಂಬದ ಸರ್ವರನ್ನು ಕಳೆದುಕೊಂಡು ತಬ್ಬಲಿಯಾಗಿ, ಆದರೆ ಆ ಎಲ್ಲ ಶೋಷಣೆಯ ಮಧ್ಯದಲ್ಲಿ ಜೀವನ ಪ್ರೀತಿಯನ್ನು ತೊರೆಯದೇ ಬದುಕಿಗೆ ತೆಕ್ಕೆ ಬಿದ್ದ ಲೈಲಾ. ತನ್ನ ಹೊಟ್ಟೆಯುರಿಗೆ ತನ್ನ ಅಕ್ಕನನ್ನೇ ಬಲಿತೆಗೆದುಕೊಂಡು, ಅವಳ ಪಾಲಿನ ಸುಖವ ತಾನು ಪಡೆಯಲು ಹೋಗಿ ಕೊನೆಗೆ ನಿರ್ಗತಿಕಳಾಗಿ ಭಿಕ್ಷುಕಿಯಂತೆ ದೇಶಾಂತರ ಹೋಗುವ ಪರವಾನಾ. ಅಗರ್ಭ ಶ್ರೀಮಂತರ ಮಗಳಾಗಿ ಹುಟ್ಟಿ, ಹೃದಯ ಶ್ರೀಮಂತಿಕೆಯನ್ನು ತನ್ನದಾಗಿಸಿಕೊಳ್ಳದೇ ಹೋದ ಕೊನೆಗೆ ತನ್ನ ಹೆಣ್ಣುತನಕ್ಕೂ ಸಂಚಕಾರವನ್ನು ತಂದುಕೊಂಡು, ಆ ನೋವನ್ನು ಬೇರೆಯವರ ಮಗುವೊಂದನ್ನು ಎರವಲು ಪಡೆದು ತೀರಿಸಿಕೊಳ್ಳ ಹೋಗಿ ಮುಗ್ಧ ಜೀವನಗಳನ್ನು ನರಕದ ಕೂಪಕ್ಕೆ ತಳ್ಳುವ ನೀಲಾ ವಹದಾತಿ. ತನ್ನತನವನ್ನು, ತನ್ನನ್ನು ಪ್ರೀತಿಸುವವರನ್ನು ಅರಸುತ್ತ ಮನೆಬಿಟ್ಟು ಹೊರಟು ಇಡೀ ವಿಶ್ವವೆಲ್ಲ ಪ್ರೀತಿಸುವವರನ್ನು ಅರಸುತ್ತ ಮನೆಬಿಟ್ಟು ಹೊರಟು ಇಡೀ ವಿಶ್ವೆಲ್ಲ ಅಲೆದು ಕೊನೆಗೆ ಆ ತರಹದ ಪ್ರೀತಿಯನ್ನು ತನ್ನ ತಾಯಿಗೆ ಮಾತ್ರ ಕೊಡಲು ಸಾಧ್ಯ ಎಂದು ತನ್ನ ಇಳಿವಯಸ್ಸಿನಲ್ಲಿ ಕಂಡುಕೊಳ್ಳುವ ಮಾರ್ಕೊಸ್ ಹೀಗೆ ಈ ಪಾತ್ರಗಳು ನಮಗೆ ಹತ್ತಿರವಾಗುತ್ತವೆ.

ಅಫ್ಘಾನಿಸ್ತಾನಿನಲ್ಲಿ ನೂರೆಂಟು ತೊಂದರೆಗಳು ತಮ್ಮ ಕಬಂಧ ಬಾಹುಗಳಿಂದ ಜನರನ್ನು ಹಿಂಸಿಸಿವೆ. ರಾಜಕೀಯ ಬದಲಾವಣೆಗಳು, ಜನಾಂಗೀಯ ದ್ವೇಷ, ಸಾಮಾಜಿಕ ಅಸಮಂಜಸತೆ, ಆಡಳಿತಾರೂಢರ ಜಾಣ ಕುರುಡುತನ. ಅಫ್ಘಾನಿಸ್ತಾನಿನೆಡೆಗೆ ವಿಶ್ವದ ನಿಲುವು, ಯೋಧರು, ವಿವಿಧ ಜನಾಂಗಗಳು, ಹೆಣ್ಣು–ಗಂಡೆಂಬ ಬಿರುಕುಗಳು, ರಾಜಕೀಯ ಪರಿಸ್ಥಿತಿ, ಸಮಾಜದ ವಿಚಾರಧಾರೆ, ಧಾರ್ಮಿಕ ಡಾಂಭಿಕತೆ, ಅರಿವಿಲ್ಲದಿರುವಿಕೆ, ಪುರುಷಪ್ರಧಾನ ಮನೋಸ್ಥಿತಿ, ವಿದ್ಯಾಭ್ಯಾಸದಿಂದ ವಂಚಿತವಾಗಿರುವುದು, ಹೆಣ್ಣಿಗೆ ಸ್ವಾತಂತ್ರ್ಯವಿಲ್ಲದಿರುವುದು, ತಾಲೀಬಾನಿಯರ ಮೌಲ್ಯರಹಿತ ದಬ್ಬಾಳಿಕೆ, ಜನರ ಸ್ವಾತಂತ್ರ್ಯಹರಣ ಮಾಡುವ ಶರಿಯಾ ಕಾನೂನುಗಳು, ಮನುಷ್ಯರ ಸಣ್ಣತನ, ಕುಬ್ಜತನ, ಬಡತನ, ಅಹಂಕಾರ, ಹೀಗೆ ನೂರೆಂಟು ಕಾರಣಗಳು ಖಾಲಿದ್ ಹೊಸ್ಸೈನಿರವರ ಕಾದಂಬರಿಗಳಲ್ಲಿ ಜೀವನವನ್ನು ನುಚ್ಚುನೂರಾಗಿಸುತ್ತವೆ ಹಾಗು ಈ ಎಲ್ಲ ಕಾರಣಗಳಿಂದ ಸಮಾಜದ ಅತಿ ಚಿಕ್ಕ ಆದರೆ ತುಂಬಾ ಮೂಲಭೂತವಾದಂತಹ ಘಟಕಗಳು ನಾಶಗೊಳ್ಳುತ್ತವೆ, ಛಿದ್ರ–ಛಿದ್ರವಾಗುತ್ತವೆ. ಮನಸ್ಸುಗಳು ಕೂಡ ಬೆಟ್ಟದಷ್ಟು ತೊಂದರೆ, ಸಂಕಷ್ಟಗಳನ್ನು ಅನುಭವಿಸಿ ಹತಾಶಗೊಳ್ಳುತ್ತವೆ. ಈ ಕಾರಣಗಳನ್ನು ಮತ್ತು ಅವರಿಂದುಂಟಾದ ಮಾರಣಹೋಮವನ್ನು ಡಾ. ಪೂರ್ಣಿಮಾರವರು ತಮ್ಮ ಮಹಾಪ್ರಬಂಧದಲ್ಲಿ ಮಂಡಿಸಿದ್ದಾರೆ.

ಯಾವುದೇ ದೇಶವು ಅಥವಾ ದೇಶದ ಅಧಿಕಾರದಲ್ಲಿರುವವರು ಮಾನವೀಯ ಮೌಲ್ಯಗಳನ್ನು ಲೆಕ್ಕಿಸದೆ ಜನರ ಸ್ವಾತಂತ್ರ್ಯವನ್ನು ಕಸಿದುಕೊಂಡರೆ ಆ ದೇಶದ ಜನತೆ ಎಂತಹ ದಾರುಣ ಅವಸ್ಥೆಗೆ ತಲುಪಬೇಕಾಗುತ್ತದೆ ಎಂಬುದರ ಬಗ್ಗೆ ಈ ಮಹಾಪ್ರಬಂಧವು ಬೆಳಕು ಚೆಲ್ಲುತ್ತದೆ. ಮಾನವಹಕ್ಕುಗಳ ಉಲ್ಲಂಘನೆಯು ಪ್ರತಿಯೊಂದು ಮನೆಯ ಹೆಂಗಳೆಯರ, ಮಕ್ಕಳ ಹಕ್ಕುಗಳನ್ನು ಕಬಳಿಸಿ ಇಡೀ ದೇಶವನ್ನೇ ಅವನತಿಯತ್ತ ಎಳೆದೊಯ್ಯುತ್ತದೆ ಎಂಬುವುದನ್ನು ಈ ಮಹಾಪ್ರಬಂಧ ಕಟ್ಟಿಕೊಡುತ್ತದೆ.

ಪೂರ್ಣಿಮಾರವರ ಪ್ರಕಾರ ಒಂದು ಸಮಾಜದ ಮೂಲಧಾತು ಕುಟುಂಬ. ಅದು ಆರೋಗ್ಯಕರವಾಗಿರುವುದು ಆ ಸಮಾಜದ ಏಳ್ಗೆಗೆ, ಆರೋಗ್ಯಕ್ಕೆ ಎಷ್ಟು ಮಹತ್ತರ ಎನ್ನುವುದನ್ನು ಕಂಡುಕೊಳ್ಳುವುದನ್ನು ಸಮಾಜಮುಖಿ ಚಿಂತನೆಯಾಗುತ್ತದೆ. ಅಲ್ಲದೆ ಸಾಮಾನ್ಯ ಮನುಷ್ಯನೊಬ್ಬನ ಜೀವನವು ಬೇರೆ ಯಾರದೋ ಅಟ್ಟಹಾಸಕ್ಕೆ ಗುರಿಯಾಗಿ, ಬೇರೆ ಯಾರದೋ ಸಂಕುಚಿತ ಭಾವನೆಗೆ, ಬೇರೆ ಯಾರದೋ ಮೌಲ್ಯರಹಿತ ನಡುವಳಿಕೆಗೆ ಬಲಿಯಾಗಿ ತರೆಗೆಲೆಯಂತೆ ತನ್ನ ಜೀವನವನ್ನು ಸುಂದರಗೊಳಿಸಿಕೊಳ್ಳಲಾರದೇ ಹೇಗೆ ಹೋಗುತ್ತದೆ ಎಂದು ಗುರುತಿಸಿದ್ದಾರೆ.

ಯಾವುದೇ ಜನಾಂಗ, ಸಮಾಜ ಹಾಗು ದೇಶ ಸುಸ್ಥಿತಿಯಲ್ಲಿರುವುದು ಆ ದೇಶದಲ್ಲಿ ಎಷ್ಟು ಜನರು ಆತ್ಮವಿಶ್ವಾಸದಿಂದ, ಶಾಂತಿಯಿಂದ, ಸಹಬಾಳ್ವೆಯಿಂದ ಉಸಿರಾಡುತ್ತಿದ್ದಾರೆ ಎಂಬುದರ ಮೇಲೆ ನಿರ್ಭರವಾಗಿರುತ್ತದೆ. ತನ್ನ ಜೀವನವು ಯಾವಾಗ, ಯಾರ ಗುಂಡಿಗೆ, ದುರಳತೆಗೆ ಬಲಿಯಾಗುವುದೋ ಎಂಬುದನ್ನು ನೆನೆಯುತ್ತ ಕ್ಷಣಕ್ಷಣವೂ ಒಬ್ಬ ವ್ಯಕ್ತಿ ಸಾವಿನ ಕಪಿಮುಷ್ಠಿಯಲ್ಲಿ ನರಳುತ್ತಿದ್ದರೆ ಆ ಸಮಾಜ ಸ್ವಸ್ಥವಾಗಿರುವುದೆಂತು? ಎಂಬಂತಹ ಹತ್ತಾರು ಪ್ರಶ್ನೆಗಳಿಗೆ ಉತ್ತರಿಸುತ್ತಲೇ ಬದುಕಿನ ತಲ್ಲಣಗಳಿಗೆ ಸಮಾಧಾನ ಕಂಡುಕೊಳ್ಳುವ ದಿಶೆಯಲ್ಲಿ ಡಾ. ಪೂರ್ಣಿಮಾರವರ ಸಂಶೋಧನ ಪ್ರಬಂಧವು ಮಾರ್ಗಸೂಚಿಯಾಗಿದ್ದು ಈ ತೆರನಾದ ವಿಸ್ತೃತ ಅಧ್ಯಯನವು ಎಲ್ಲ ಕಾಲಕ್ಕೂ ಪ್ರಸ್ತುತ ಎನಿಸಿಕೊಳ್ಳುತ್ತದೆ. ಅತೃಪ್ತ ಮಾನಸಿಕ ಕ್ಷೋಭೆಗೆ ಕಾರಣ, ಅದಕ್ಕೆ ಪರಿಹಾರಗಳೇನು? ನೋವು-ಯಾತನೆಗೆ ಪರಿಹಾರ ಕಂಡುಕೊಳ್ಳಲು ಸಮರ್ಪಕ ಆಲೋಚನಾ ಪರಂಪರೆಗೆ ಈ ಸಂಶೋಧನ ಅಧ್ಯಯನವು ರಹದಾರಿಯಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ!

ಸಮಕಾಲೀನರ ಅಭಿಪ್ರಾಯ

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ । ಪೇರನಲ್ಲ ॥

ಇದೊಂದು ಕಪ್ಪೆ ಅರಭಟ್ಟನೆಂಬ ಮಾಂಡಲಿಕನ ವ್ಯಕ್ತಿತ್ವ–ಗುಣ–ಸ್ವಭಾವಗಳನ್ನು ತಿಳಿಸುವ ಬಾದಮಿ ಶಾಸನದ ಪದ್ಯವಾಗಿದೆ. ಹೀಗೆ ನಮ್ಮ ಶಾಸನದ ತ್ರಿಪದಿ ಸಾಹಿತ್ಯದಿಂದ ಆರಂಭವಾಗಿ ಚಂಪೂ, ವಚನ, ರಗಳೆ, ಷಟ್ಪದಿ, ಸಾಂಗತ್ಯ, ಸುನೀತ, ಕಥನಕವನ ಮುಂತಾದವುಗಳ ಮುಖಾಂತರ ಇಂದಿನವರೆಗೂ ಆಯಾ ಕಾಲದ ವ್ಯಕ್ತಿಗಳ ಪ್ರಧಾನ ಗುಣ ಲಕ್ಷಣ, ಸಾಧನೆಗಳ ವೈಶಿಷ್ಟ್ಯಗಳನ್ನು ಆಯಾ ಕಾಲದ ಸಾಹಿತ್ಯವು ದಾಖಲಿಸಿದ್ದು ಮಹತ್ವದ ಸಂಗತಿಯಾಗಿದೆ. ಆಯಾ ಸಂದರ್ಭ ಸನ್ನಿವೇಶಗಳ ಮುಖಾಂತರ ರೂಪುಗೊಂಡ ಜೀವನಾನುಭವದ ನಿಲುವು, ಸೈದ್ಧಾಂತಿಕ ಚಿಂತನೆಗಳು ಸಕಲ ಜೀವರಾಶಿಗಳ ಬದುಕಿಗೆ ಬೆಳಕಾಗುತ್ತವೆ ಎನ್ನುವುದು ಸಾರ್ವಕಾಲಿಕ ಸತ್ಯಸಂಗತಿಗಳಾಗಿವೆ.

"ಮಹಾತ್ಮರ ಜತೆ ಜತೆಯಲ್ಲಿಯೇ ಅವರನ್ನು ಅರ್ಥ ಮಾಡಿಕೊಳ್ಳುವಂಥ ಅವರನ್ನು ಬೆಂಬಲಿಸುವಂಥ ಅಥವಾ ಅವರ ಮರಣಾನಂತರ ಅವರ ಸಂದೇಶವನ್ನು ಪ್ರಚಾರ ಮಾಡುವಂಥ ಶಿಷ್ಯರೋ, ಹಿತೈಷಿಗಳೋ ಹುಟ್ಟಿಕೊಳ್ಳುತ್ತಾರೆ. ಬುದ್ಧನಿಗೆ ಆನಂದ ಉಪಾಲಿಯರು, ಯೇಸುವಿಗೆ ಮ್ಯಾಥ್ಯೋ, ಮಾರ್ಕ್, ಲ್ಯೂಕ್, ಜಾನ್ ಆದಿ ಶಿಷ್ಯರು, ಮಾರ್ಕ್ಸ್‌ರಿಗೆ ಎಂಗೆಲ್ಸ್, ಬಸವಣ್ಣನಿಗೆ ಚೆನ್ನಬಸವಣ್ಣ,

ಹಡಪದ ಅಪ್ಪಣ್ಣ ಮೊದಲಾದವರು. ಹರಿಹರನಿಗೆ ರಾಘವಾಂಕ, ಸಿದ್ಧನಂಜೇಶ ಗಾಂಧೀಜಿಗೆ ಮಹಾದೇವ ದೇಸಾಯಿ, ಪ್ಯಾರೆಲಾಲ ಮೊದಲಾದ ಆತ್ಮೀಯರು. ಶ್ರೀ ರಾಮಕೃಷ್ಣ ಪರಮಹಂಸರಿಗೆ, ಸ್ವಾಮಿ ವಿವೇಕಾನಂದರು ದೊರೆಯದಿದ್ದರೆ, ಆ ಮಹಾತ್ಮರ ಮಹಾತ್ಮ್ಯ ದರ್ಶನ ಮುಂದಿನ ಪೀಳಿಗೆಗೆ ಅಲಭ್ಯವಾಗುತ್ತಿದ್ದರು. ಅವರು ರಹಸ್ಯಾತ್ಮಕ ಸಮಸ್ಯೆಯಾಗಿಯೇ ಉಳಿಯುತ್ತಿದ್ದರೆಂದು ತೋರುತ್ತದೆ. ಅವರ ಜೀವನ ಪರಿಚಯ ಅಪೂರ್ಣವಾಗಿಯೇ ಉಳಿಯುತ್ತಿತ್ತೆಂಬು ಕಾಣುತ್ತದೆ. ಸಮಾನ ಮನೋಧರ್ಮದ ಸೂಕ್ಷ್ಮವೀಕ್ಷಣ ಗ್ರಹಣ ಸಾಮರ್ಥ್ಯದ ನಿಕಟವಾಸಿಗಳಿಗೆ ಅವರ ಬದುಕಿನ ಸೂಕ್ಷ್ಮಾತಿ ಸೂಕ್ಷ್ಮ ವಿವರಗಳು ಲಭಿಸುವುದಾದರೆ ಸಾಕ್ಷಿ ಪ್ರಜ್ಞೆಯ ದೂರ ವಾಸಿಗಳಿಗೆ ಅವರ ಬದುಕಿನ ಇತರ ಮಗ್ಗಲುಗಳ ಪರಿಚಯವಾಗುತ್ತದೆ. ಪೂಜ್ಯ ಭಾವನೆಯಿಂದಾಗಿ ಹತ್ತಿರದವರಿಗೆ ಅವರ ಬದುಕಿನ ಬೆಳಕಿನ ಭಾಗ ಕಾಣುವಂತೆ, ನಿರ್ವಿಕಾರ ಮನೋಭಾವದಿಂದಾಗಿ ದೂರದವರಿಗೆ ಅವರ ಬದುಕಿನ ಕತ್ತಲೆಯ ಭಾಗವೂ ಕಾಣಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ತತ್ಕಾಲೀನ ಮನಃಸ್ಥಿತಿ, ಸಂಸ್ಕಾರ, ಸಂದರ್ಭಗಳಿಗನುಗುಣವಾಗಿ ಮತ್ತೊಬ್ಬ ವ್ಯಕ್ತಿಯ ಗುಣಾವಗುಣಗಳನ್ನು ಗ್ರಹಿಸುತ್ತಾನೆ ಎನ್ನುವುದು ಸಮನಾದರೂ, ಒಬ್ಬ ಮಹಾಪುರುಷನ ನೆಲೆ ಬೆಲೆಗಳ ತೋಲನಕ್ಕೆ ವಿವಿಧಾಭಿಪ್ರಾಯಗಳು ಉಪಯುಕ್ತವಾಗುತ್ತವೆ ಎಂಬುದಂತು ನಿಜ" (ದೇಜಗೌರವರ ಬಸವೇಶ್ವರ ಮತ್ತು ಕಾರ್ಲ್‌ಮಾರ್ಕ್ಸ್, ಪು–೧೦೦) ಈ ದಿಶೆಯಲ್ಲಿ ಡಾ. ಪೂರ್ಣಿಮಾರವರ ನಿಜವಾದ ವ್ಯಕ್ತಿತ್ವವನ್ನು ಗುರುತಿಸಲು ಅವರ ಸಮಕಾಲೀನರ ಕಂಡಂತೆ ನೀಡಿರುವ ಅಭಿಪ್ರಾಯಗಳು ಮಹತ್ವದ ದಾಖಲೆಗಳಾಗುತ್ತವೆ. ಜೀವನ ಚರಿತ್ರೆಗೊಂದು ಗಟ್ಟಿತನವನ್ನೊದಗಿಸುತ್ತವೆ.

ಡಾ. ಪೂರ್ಣಿಮಾ ಜಾರ್ಜ್ ಅವರದು ಬಹುಮುಖ ಪ್ರತಿಭೆಯುಳ್ಳ ಕ್ರಿಯಾಶೀಲ ಬದುಕು. ಸಾಂಸ್ಕೃತಿಕವಾಗಿ ಅವರು ಬಹುಧಾರ್ಮಿಕತೆಯ ನೆಲೆಗಳನ್ನು ಕಂಡುಂಡು ಅನುಭವಿಸಿ ಆಚರಿಸುತ್ತಿರುವ ಧರ್ಮ ಸಹಿಷ್ಣುಗಳಾಗಿದ್ದಾರೆ. ಸಮಾಜೋ–ಧಾರ್ಮಿಕ ಬೆಳವಣಿಗೆಯಲ್ಲಿ ಸಹಿಷ್ಣುತೆ ಮತ್ತು ಪರಸ್ಪರ ಸಹಭಾಗಿತ್ವದ

ಅಂಶಗಳು ಶಿಕ್ಷಣದ ಅಭಿವೃದ್ಧಿಗೆ ಕಾರಣವೆಂದರಿತವರು. ಈ ದಿಶೆಯಲ್ಲಿ ಅವರು ಸದಾ ಕ್ರಿಯಾಶೀಲರಾಗಿದ್ದಾರೆ. ಚೈತನ್ಯ ಮತ್ತು ಚಲನಶೀಲ ಗುಣಗಳಿಂದಾಗಿ ಅವರ ದೂರದೃಷ್ಟಿ ಸಮಾಜಮುಖಿಯಾಗಿದ್ದು ವೈಚಾರಿಕ, ವೈಜ್ಞಾನಿಕ ತಳಹದಿಗೆ ಪೂರಕವಾಗಿದೆ. ಜೀವನದಲ್ಲಿ ಸಂತಸ-ನೆಮ್ಮದಿ-ಸುಖಗಳಲ್ಲಿ ಒಂದಿಷ್ಟು ಹತಭಾಗ್ಯರಾಗಿದ್ದರೂ ಅದೆಲ್ಲವನ್ನು ಬದಿಗಿತ್ತು ಹಂತಹಂತವಾಗಿ ಬೆಳವಣಿಗೆಯ ಮೆಟ್ಟಿಲೆರುತ್ತ ಬೆಳೆದು ನಿಂತಿರುವ ಅವರ ಸದ್ಯದ ವ್ಯಕ್ತಿತ್ವ ಬೆರಗುಮೂಡಿಸುವಂತಹದ್ದು. ತತ್ತ್ವಾಧಾರಿತ ಜೀವನದೊಂದಿಗೆ ಹೋರಾಟದ ನೆಲೆ, ಸಾಮಾಜಿಕ ಸಮಾನತೆ, ಶಾಂತಿ ಸಹೃದಯತೆ ಬೆಳೆಸುತ್ತಲೇ ಮಾನವೀಯತೆಯನ್ನು ಪೋಷಿಸುವ ಮಹಾಮೇಧಾವಿಯಂತೆ ಕಂಡುಬರುತ್ತಿರುವ ಜೀವನ ಸಾಧನೆಗಳು ಅನನ್ಯವಾಗಿವೆ. ಸಮಕಾಲೀನ ಹಿತೈಷಿ-ಬಂಧುಗಳ, ಕವಿ-ಸಹೃದಯರ, ಸಮಾಜ ಚಿಂತಕರ ಅಭಿಪ್ರಾಯಗಳು ಗಮನಾರ್ಹವಾಗಿವೆ.

ಪೂಜಾ ಜಾರ್ಜ್:

ಪೂಜಾ ಪೂರ್ಣಿಮಾರ ಚೊಚ್ಚಿಲ ಮಗು. ಈಗ ಪೂಜಾ ಒಬ್ಬ ಲಾಯರ್. ಬೀದರಿನಿಂದ ಸುಪ್ರೀಂಕೋರ್ಟಿನಲ್ಲಿ ಪ್ರ್ಯಾಕ್ಟಿಸ್ ಮಾಡಲು ಅರ್ಹತೆ ಪಡೆದಿರುವ ಏಕೈಕ ವ್ಯಕ್ತಿ ಎಂಬ ಹೆಗ್ಗಳಿಕೆಯನ್ನು ಪಡೆದಿದ್ದಾರೆ. ಪೂಜಾಗೆ ಅವರ ಅಮ್ಮನೆಂದರೆ ಆದರ್ಶ. ಪಿತೃಪ್ರಧಾನವಾದ ನಮ್ಮ ಸಮಾಜದಲ್ಲಿ ಪ್ರತಿಯೊಬ್ಬರೂ ತಮ್ಮ ತಂದೆಯ ಹೆಸರಿನಿಂದ ಪರಿಚಿತಗೊಳ್ಳುತ್ತಾರೆ. ಆದರೆ ಪೂಜಾ ತನ್ನ ತಾಯಿಯ ಹೆಸರನ್ನು ತನ್ನ ಹೆಸರಿನೊಡನೆ ಜೋಡಿಸಿಕೊಳ್ಳಲು ಇಷ್ಟಪಡುತ್ತಾರೆ. ಅವರಿಂದು ಪೂಜಾ ಪೂರ್ಣಿಮಾ ಜಾರ್ಜ್.

ತಂದೆ ಅಕಾಲಿಕ ಸಾವಿಗೆ ತುತ್ತಾದ ಮೇಲೆ ನಮ್ಮ ಅಮ್ಮ, ನಾನು ಮತ್ತು ನನ್ನ ತಮ್ಮ ಮೂವರು ಒಂದು ಕುಟುಂಬದ ಸದಸ್ಯರು ಮುಂಜಾನೆ, ಮಧ್ಯಾಹ್ನ ಸಂಜೆ ಇದ್ದಂತೆ. ಆದರೂ ನಮ್ಮ ಮಧ್ಯದಲ್ಲಿ ಈ ಯಾವ ಕಾಲದ ಅಂತರವಿರಲಿಲ್ಲ. ನಾವು ಅಮ್ಮನಿಗೆ ಸರಿ-ಸಮಾನ ಆಗಿರದಿದ್ದರೂ ಅಮ್ಮ ನಮ್ಮನ್ನು ತಮ್ಮ

ಸಮಾನರೆಂಬಂತೆ ಬೆಳೆಸಿದರು. ಪ್ರೀತಿ-ವಿಶ್ವಾಸದಲ್ಲಿ, ಶಿಕ್ಷಣ ಕೊಡಿಸುವುದರಲ್ಲಿ ಯಾವುದೇ ಕೊರತೆಯಾಗದಂತೆ ಎಚ್ಚರವಹಿಸುತ್ತಿದ್ದರು. ಮನೆಯ ಎಲ್ಲ ಚಿಕ್ಕ-ದೊಡ್ಡ ವಿಷಯಗಳಲ್ಲಿ ನಮ್ಮ ಅಭಿಪ್ರಾಯ ಹಾಗು ಸಮ್ಮತಿಯನ್ನು ಸದಾ ಪಡೆಯುತ್ತಿದ್ದರು. ಅಪ್ಪ ತೀರಿ ಹೋದಮೇಲೆ ನಮ್ಮ ಆರ್ಥಿಕ ಪರಿಸ್ಥಿತಿ ಅಷ್ಟೇನು ಸರಿ ಇಲ್ಲದಾಗ್ಯೂ ಆ ಭಾವ ನಮ್ಮಲ್ಲಿ ಬರದಂತೆ ನೋಡಿಕೊಂಡರು.

ಅಮ್ಮ ಪ್ರತಿವರ್ಷ ಅಕ್ಟೋಬರ್ ರಜೆಯಲ್ಲಿ ನಮ್ಮನ್ನು ಪ್ರವಾಸಿ ಸ್ಥಳಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಅಮ್ಮ ನಮ್ಮನ್ನು ಅಲ್ಲಿಯ ಸ್ಥಳದ ಐತಿಹಾಸಿಕ, ಸಾಂಸ್ಕೃತಿಕ ಮಹತ್ವವನ್ನು ವಿವರಿಸುತ್ತಿದ್ದರು. ಆಯಾ ಸ್ಥಳದ ಐತಿಹ್ಯ, ವಿಶೇಷತೆಯನ್ನು ಅಲ್ಲಿಯೇ ಬಣ್ಣಿಸುತ್ತಿದ್ದರು. ಅಮ್ಮನ ಜ್ಞಾನ, ತಿಳುವಳಿಕೆ ಕಂಡು ಅಚ್ಚರಿಯಾಗುತ್ತಿತ್ತು.

ಒಂದೊಮ್ಮೆ ನಮ್ಮನ್ನು ಮೈಸೂರಿಗೆ ದಸರಾ ಸಮಯದಲ್ಲಿ ಕರೆದೊಯ್ದರು. ಆದರೆ ದುರ್ದೈವದಿಂದ ಅಮ್ಮನಿಗೆ ಅಂದು ತುಂಬಾ ಜ್ವರ ಬಂದು ಬಿಟ್ಟಿತು. ಅಂತಹ ಜ್ವರದಲ್ಲಿಯೂ ಅರಮನೆಗೆ ಕರೆದೊಯ್ದು ಅಲ್ಲಿಯ ಎಲ್ಲ ಕುತೂಹಲಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ಸಂಜೆ ಏಳುಗಂಟೆಗೆ ನಡೆಯುವ ರಾಜರ ದರ್ಬಾರಿನಲ್ಲಿ ಸುಮಾರು ಎರಡು ಗಂಟೆಗಳ ಕಾಲ ನಮ್ಮನ್ನು ಕೂರಿಸಿಕೊಂಡು ಕುಳಿತು ಒಡೆಯರ ಮನೆತನ, ಅವರ ಏಳ್ಗೆ, ಅವರ ಕಷ್ಟಗಳು, ಅವರು ತಮ್ಮ ರಾಜ್ಯದ ಜನರಿಗಾಗಿ ಮಾಡಿದ ಸೇವೆ ತ್ಯಾಗಗಳನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿ ಹೇಳಿದರು. ಆ ಮಯೂರಾಸನದ ಮೇಲೆ ಶ್ರೀಕಂಠದತ್ತ ಒಡೆಯರರು ಬಂದು ಕುಳಿತು ಸಭೆ ನಡೆಸಿದ್ದನ್ನು ನಾನೆಂದಿಗೂ ಮರೆಯಲಾರೆ. ಅಮ್ಮ ನಮಗೆ ಪರಿಪೂರ್ಣ ವ್ಯಕ್ತಿತ್ವ ಪ್ರಾಪ್ತವಾಗುವಂತೆ ನೋಡಿಕೊಳ್ಳುತ್ತಿದ್ದರು. ನಮ್ಮ ಏಳ್ಗೆಗಾಗಿ ಅಮ್ಮ ಯಾವತ್ತು ಕ್ರಿಯಾಶೀಲರಾಗಿರುತ್ತಿದ್ದರು. ನಮ್ಮ ಏಳ್ಗೆಗಾಗಿಯಲ್ಲದೆ ಅವರೆಂದೂ ಸ್ವಂತ ಬಗ್ಗೆ ಯೋಚಿಸಿದ್ದಿಲ್ಲ. ಆದರೆ ಶಾಲಾ ಕಾಲೇಜಿನ ಕೆಲಸದಲ್ಲಿ ಮಗ್ನರಾದರೆಂದು ನಮ್ಮನ್ನೂ ಮರೆಯುತ್ತಾರೆ" ಎಂದು ಪೂಜಾ ತುಂಬಾ ಅಕ್ಕರೆಯಿಂದ ಹೇಳುತ್ತಾರೆ

ಅಮೋಘ ಜಾರ್ಜ್:

ಪೂರ್ಣಿಮಾರವರಿಗೆ ವಿದ್ಯಾರ್ಥಿಗಳೆಂದರೆ ಸರ್ವಸ್ವ. ಮಕ್ಕಳೊಡನೆ ಮಕ್ಕಳಾಗಿ ಬೆರೆಯುತ್ತಾರೆ. ತನ್ನ ಸ್ವಂತದ ಮಕ್ಕಳೂ ವಿದ್ಯಾರ್ಥಿಗಳಾಗಿ ಬಂದಾಗ ಅವರನ್ನು ಕೂಡ ಬೇರೆ ವಿದ್ಯಾರ್ಥಿಗಳಂತೆಯೇ ನೋಡುತ್ತಿದ್ದರು. ನಾನು ಪಿ.ಯು.ಸಿ.ಯಲ್ಲಿದ್ದಾಗ ಅಮ್ಮ ನಮಗೆ ಇಂಗ್ಲಿಷ್ ಪಾಠ ಮಾಡುತ್ತಿದ್ದರು. ನಾನು ಎತ್ತರ ಇರುವುದರಿಂದ ನನ್ನನ್ನು ಹಿಂದೆ ಕೂಡಿಸುತ್ತಿದ್ದರು. ನಾನು ಮತ್ತು ಪಕ್ಕದ ಹುಡುಗ ಏನೋ ಮಾತಾಡಿದೆವು. ನೀನೇಕೆ ಮಾತನಾಡಿದೆ ಎಂದು ಅಮ್ಮ ಕೇಳಿದರು. ಅದಕ್ಕೆ ಅವನೇನೋ ಹೇಳಿದ ಎಂದು ನಾನೆಂದೆ. ಹಾಗಿದ್ದರೆ ಅದೇನೆಂದು ಜೋರಾಗಿ ಹೇಳು ಎಂದರು. ನಾನು ಹೇಳಲಿಲ್ಲ. ಹಾಗಾಗಿ ನನಗೆ ಬೆಂಚಿನ ಮೇಲೆ ನಿಲ್ಲುವಂತೆ ಮಾಡಿ ನನಗೆ ಏಟು ಕೊಟ್ಟರು, ಅದು ಎಲ್ಲರ ಮುಂದೆ" ಎಂದು ಅವರ ಮಗ ಹಾಗು ಈಗ Journalist ಆಗಿರುವ ಅಮೋಘ ನೆನಪಿಸಿಕೊಳ್ಳುತ್ತಾರೆ. ಎಲ್ಲರನ್ನೂ ಸರಿಸಮಾನವಾಗಿ ಕಾಣುವ ಅವರ ವ್ಯಕ್ತಿತ್ವವೇ ಅವರನ್ನು ಇತರರು ಮೆಚ್ಚುವಂತೆ ಮಾಡಿದೆ ಎಂದು ಹೇಳಬಹುದು.

ಚಿಕ್ಕಪ್ಪ ಡಾ. ಎಂ.ಆರ್. ಕುಲಕರ್ಣಿ:

ಪೂರ್ಣಿಮಾರ ಚಿಕ್ಕಪ್ಪರಾದ ಡಾ. ಎಂ.ಆರ್. ಕುಲಕರ್ಣಿಯವರಿಗೆ ತಮ್ಮ ಮಗಳ ಬಗ್ಗೆ ತುಂಬಾ ಅಭಿಮಾನವಿದೆ. ೨೦೧೮ರ ಅಕ್ಟೋಬರ್ ೨೬, ೨೭, ೨೮ರಂದು ಬೀದರಿನಲ್ಲಿ ಆಯೋಜಿಸಿದ ೧೮ನೆಯ ರಾಷ್ಟ್ರೀಯ ಕವಯಿತ್ರಿಯರ ಸಮ್ಮೇಳನದಲ್ಲಿ ಪೂರ್ಣಮಾರವರಿಗೆ **ಸರೋಜನಿನಾಯ್ಡು ಅವಾರ್ಡ್–೨೦೧೮** ಬಂದ ಸಂದರ್ಭದಲ್ಲಿ ಅವರು ಮುದ್ದಾಂ ಬೆಂಗಳೂರಿನಿಂದ ಬೀದರಿಗೆ ಬಂದಿದ್ದರು.

"ಪೂರ್ಣಿಮಾ ಒಂದು ವಿಸ್ಮಯಗಳ ಆಗರ. ಜೀವನದ ಎಲ್ಲ ಹೊಡೆತಗಳನ್ನು ಸಹಿಸಿ, ಕುಗ್ಗದೆ ಪ್ರತಿಬಾರಿಯೂ ಆಕೆ ಎದ್ದು ನಿಂತ ಪರಿ ನೋಡಿದರೆ ಕಣ್ಣು ಜೀವಗೊಳ್ಳುತ್ತವೆ. ಆಕೆ ಮಗಳೆಂದು ಮಾತ್ರವಲ್ಲ ಒಬ್ಬ ಅದ್ಭುತ ವ್ಯಕ್ತಿತ್ವ ಹೊಂದಿರುವುದರಿಂದ ಆಕೆಯ ಬಗ್ಗೆ ನನಗೆ ಅಗಣಿತ ಪ್ರೀತಿಯಿದೆ. ತನ್ನ ವೈಯಕ್ತಿಕ

ನಷ್ಟಗಳ ಮಧ್ಯೆಯೂ ಆಕೆ ಸಮಾಜಮುಖಿಯಾಗಿ ಬೆಳೆದಿರುವುದು ಹಾಗು ಸಮಾಜಕ್ಕೆ ತನ್ನ ಕೈಲಾದಷ್ಟು ಕೊಡುಗೆ ಕೊಡುತ್ತಿರುವುದು ಚಿಕ್ಕಪ್ಪನಾದ ನನಗೆ ಹೆಮ್ಮೆಯ ವಿಷಯವಾಗಿದೆ" ಎಂದು ಅವರು ದಗ್ಧಕಂಠರಾಗಿ ಹೇಳುತ್ತಾರೆ.

ಪೂರ್ಣಿಮಾರ ಪ್ರೌಢಶಾಲೆಯ ಗುರುಮಾತೆಯಾಗಿದ್ದ ಲೀಲಾ:

ಜಿ. ಪೂರ್ಣಿಮಾಗೆ,

ಬಾಳೆನ್ನ ಬೆಳಕೇ ಬಾಳೆನ್ನ ಸಿರಿಯೇ

* ಕೂಡು ಲೆಕ್ಕಕೆ ಸಿಗದ ದುಃಖದ್ವಾಸು ಹೊಕ್ಕು
ಭವದ ಮಗ್ಗಕೆ ಹೂಡಿ ಬಣ್ಣಬಣ್ಣದ ಚಿತ್ರ
ಮೇಲೆ ಮಲ್ಲಿಗೆ ಮೊಗ್ಗು. ಹೀಗೆ ಬಿಡಿಸಿದೆ ಪೂರ್ಣ.

* ಓಂ ಪೂರ್ಣಮದಃ ಪೂರ್ಣಮಿದಂ..... ಶರಣ ನಾಡವಳೆ
ಮೇಲೆ ಮೆಲ್ಲಡಿ ಇಟ್ಟು ಕೆಳಗೆ ತುಳಿಯುತ ನೆಲವ
ಆಲಿಕೆ, ಮಾತು, ಓದು, ಬರೆ ತಾಳಲಯ ಛಾಪು ನಡೆ
ತಾಯಿ 'ಜ್ಞಾನಸುಧೆ' ಕರಪಿಡಿದು ಅಡಿಯಿಟ್ಟೆ ಹೇಗೆ ಪೂರ್ಣ.

* ಓಂ ಪೂರ್ಣಮದಃ ಪೂರ್ಣಮಿದಂ..... ದಾಸರ ನಾಡವಳೆ
ಪ್ರೀತಿ ಸ್ನೇಹವು ಕೂಡಿ ಮನದ ಮೈಲಿಗೆ ಕಳೆದು
ಸಖ್ಯತನದಾ ದುಣಕ ಬಾಧೆ ತಂದಾಭಾಗ
'ವಸುದೈವ ಕುಟುಂಬಕಂ' ಕಲೆತು ಕಲಿಸಿದೆ ಹೇಗೆ ಪೂರ್ಣ.

* ಓಂ ಪೂರ್ಣಮದಃ ಪೂರ್ಣಮಿದಂ..... ಸಂತರ ನಾಡವಳೆ
ಹೆನ್ರಿಯಟ್ಟಾ ಲ್ಯಾಕ್ಸಳ ಜೀವಕೋಶ ಹೀಲಾಕೋಶ. ಅದು ಜಗದ ಆಸ್ತಿ
ಅಂತಂತೆ ನಿನ್ನ ಬಳಪದ ಭಾವ ಪಯಣ ದಿವ್ಯ ವಿದ್ಯಾದಾನ
ಹಾಲುಕ್ಕಿ ಹರಿದ ಶರಣನಾಡಲಿ ನಿನ್ನನರ್ಪಿಸಿದೆ ಹೇಗೆ ಪೂರ್ಣ.

* ಓಂ ಪೂರ್ಣಮದಃ ಪೂರ್ಣಮಿದಂ..... ಸೂಫಿಗಳ ನಾಡವಳೆ
ಈ ಬರಹ ಪದದಮಲು ಗುರುಶಿಷ್ಯರ ಆಟ ಸೋಲು ಸಂಗಮವು
ಚವಿ ಉಂಡ ಚವಿಹೊದ್ದ ಚತುರ್ಮುಖನಾರಾಣಿ ಚಣಗೆದ್ದ ಚತುರೆಗೆ
ಅಧಿಕಾರ ಗೆಳೆತನದಲಿ ಅದ ನಿನ್ನ ಆಳದಂತ್ತೇಗಿರಿಸಿದೆ ಪೂರ್ಣ.

* ಓಂ ಪೂರ್ಣಮದಃ ಪೂರ್ಣಮಿದಂ..... ಸಿದ್ಧರ ನಾಡವಳೆ
ಕಳೆ ಚಿತ್ಕಳೆಯಾಗಿ, ಅರಿವು ಅಕ್ಷರವಾಗಿ ನುಡಿ ತಾನು ನಡೆಯಾಗಿ
ಸಮಾಜ ಹೊಣೆ ಜೊತೆಗೆ ಬದುಕು ಸಾರ್ಥಕ್ಯ. ಇದು ಬಸವಧರ್ಮ
ಶಬ್ದದಲಿ ಸವಿಯಾಗು ಅರ್ಥತಾ ಬೆಳಕಾಗಿ ತೇರು ಸಾಗುತಿದೆ ಪೂರ್ಣ.

* ಓಂ ಪೂರ್ಣಮದಃ ಪೂರ್ಣಮಿದಂ..... ಚೈತನ್ಯರ ನಾಡವಳೆ
ಶರಣು ಶರಣೆನ್ನುವೆ ನಿನ್ನಯ ಧೀಃಶಕ್ತಿ ಛಲಬಲಕೆ
ಬಾಳೆನ್ನ ಬೆಳಕೇ, ಬಾಳೆನ್ನ ಸಿರಿಯೇ
ಬಾಳೆನ್ನ ಕರುಳೇ, ಬಾಳೆನ್ನ ಭಾವವೇ
ಬಾಳಿರಲಿ ನಿನ್ನೆರಡು ಕುಡಿಗಳಿಗೆ-ಬಾಳು ಬಾಳು.

ನಿನ್ನ
ಲೀಲಾ ಪಂಪಯ್ಯ ಹಿರೇಮಠ
ರಾಯಚೂರು.
ಸಂಚಾರಿ: ೯೭೩೧೮೯೦೦೦೨

ದಿನದ ಎಣಿಕೆ: ೧೯-೧೦-೨೦೧೮
ಶುಕ್ರವಾರ, ಬೀದರ

ಹಿರಿಯ ಸಾಹಿತಿಗಳಾದ ಶ್ರೀ ಎಂ.ಜಿ. ದೇಶಪಾಂಡೆ:

ಪೂರ್ಣಿಮಾ ಜಾರ್ಜ್‌ರವರ ಹೆಸರು ಈ ಬೀದರ ಜಿಲ್ಲೆಯಲ್ಲಿ ಚಿರಪರಿಚಿತ. ಬಿಜಾಪುರ ಜಿಲ್ಲೆಯ ಕಲಮಡಿ ಗ್ರಾಮದವರಾಗಿದ್ದು, ಬೀದರ ಜಿಲ್ಲೆಗೆ ಬಂದು ಬೀದರಿನ ಚರಿತ್ರೆ ಉಜ್ವಲಗೊಳಿಸಲು ಕಾರಣರಾದವರೆಂದರೆ ಅತಿಶಯೋಕ್ತಿಯೇನಲ್ಲ. ಪ್ರಾಚೀನ ಕಾಲದಿಂದಲೂ ಬಿಜಾಪುರ ಮತ್ತು ಬೀದರ

ನಡುವೆ ಅವಿನಾಭಾವ ಸಂಬಂಧವಿದೆ. ಶರಣರ ಕಾಲದಿಂದಲೂ ಈ ಮಾತು ಸತ್ಯ. ವೈದ್ಯ ಡಾ. ಸಿದ್ಧಾರೆಡ್ಡಿಯವರಾಗಲಿ, ಪ್ರಾಂಶುಪಾಲ ಬಿ.ಟಿ. ಸಾಸನೂರರಾಗಲಿ, ಸಾಹಿತಿ ಪ್ರೊ. ವೀರೇಂದ್ರ ಸಿಂಪಿಯವರಾಗಲಿ ಬಿಜಾಪುರದ ಬೇರೆ ಬೇರೆ ಭಾಗಗಳಿಂದ ಇಲ್ಲಿಗೆ ಬಂದವರೆಂಬುದು ಅವಿಸ್ಮರಣೀಯ. ಅಂತಹ ಮಹನೀಯರ ಸಾಲಿಗೆ ಸೇರ್ಪಡೆಗೊಂಡಿರುವ ಪೂರ್ಣಿಮಾರವರು ಒಂದು ರೀತಿಯಿಂದ ಬೀದರ ಜಿಲ್ಲೆಯ ಜ್ಞಾನದ ಪೂರ್ಣಚಂದಿರನಂತೆ ಹೊಳೆಯುತಿಹರು.

ಪೂರ್ಣಿಮಾರವರು ಶಿಕ್ಷಣಪ್ರಿಯರಷ್ಟೇ ಅಲ್ಲ ಸಾಹಿತ್ಯಪ್ರಿಯರು ಹೌದು. ತಮ್ಮ ಶಾಲಾಕಾಲೇಜು ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ ಕಾರಣರಾದಂತೆ "ಕತ್ತಲ ಇಬ್ಬನಿ ಬಣ್ಣದ ಚಿತ್ತಾರ" ಎನ್ನುವ ಕವನ ಸಂಕಲನ ಪ್ರಕಟಿಸುವ ಮೂಲಕ ಕವಯಿತ್ರಿಯಾಗಿ ಮಿಂಚಿದವರು. ಜ್ಞಾನಸುಧಾ ಶಿಕ್ಷಣ ಸಂಸ್ಥೆಯೊಂದನ್ನು ಪ್ರಾರಂಭಿಸಿ ಎಲ್.ಕೆ.ಜಿ.ಯಿಂದ ಪಿಯು ಶಿಕ್ಷಣದ ವರೆಗೆ ಜ್ಞಾನ ದಾಸೋಹಕ್ಕೆ ಕಣ್ಣಾಗಿದ್ದು ಅವರ ಶ್ರಮಸಂಸ್ಕೃತಿಯ ಜೊತೆಗೆ ದೂರದೃಷ್ಟಿಯ ಪ್ರತೀಕವಾಗಿದೆ.

ಓದು-ಬರಹ, ಶಿಕ್ಷಣ ಚಿಂತನೆಯಲ್ಲಿ ನಿರಂತರ ತಮ್ಮನ್ನು ತೊಡಗಿಸಿಕೊಂಡ ಅವರು ಸದಾ ಕ್ರಿಯಾಶೀಲರಾಗಿರುವುದು ಅವರ ವ್ಯಕ್ತಿತ್ವದ ವಿಶೇಷತೆ. 'ಮಾತು ಬೆಳ್ಳಿ ಮೌನ ಬಂಗಾರ' ಎಂಬಂತೆ ಮಿತಭಾಷಿಯಾದ ಅವರು ಯಾವಾಗಲೂ ಸಮಾಜೋನ್ನತಿ ಕಾರ್ಯಗಳಲ್ಲಿ ತಮ್ಮ ಬದುಕನ್ನು ಸವೆಸಿದವರು. ಪೂರ್ಣಿಮೆ ಚಂದಿರನಂತೆ ಸದಾ ಮಂದಹಾಸದಲ್ಲಿ ಲವಲವಿಕೆಯಿಂದಿರುವ ಅವರು ಎಲ್ಲರೊಂದಿಗೆ ಆತ್ಮೀಯರಾಗಿ ಅನೇಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಬೀದರಿನ ಖ್ಯಾತಿ ದಿಗಂತಕ್ಕೆ ಬೆಳಗಿಸುವಲ್ಲಿ ಪೂರ್ಣಿಮಾರವರ ಪಾತ್ರ ಹಿರಿದಾಗಿದೆ.

"ಓರ್ವ ಹೆಣ್ಣುಮಗಳು ಏನು ಮಾಡಬಹುದು । ತಾನು ಬಯಸಿದರೆ ಸಮಾಜದ ಚಿತ್ರಣವನ್ನೇ ಬದಲಿಸಬಹುದು" ಎನ್ನುವುದಕ್ಕೆ ಸಾಕ್ಷಿಯಾಗಿದ್ದಾರೆ. ದೇವರು ಅವರಿಗೆ ಆಯಸ್ಸು, ಆರೋಗ್ಯ, ಕ್ರಿಯಾಶೀಲತೆ ನೀಡಿ ಕಾಪಾಡಲಿ.

ನಿರ್ದೇಶಕರಾದ ಮುನೇಶ್ವರ ಲಾಖಾ:

ಬೀದರಿನಲ್ಲಿ ಬಿ.ಎ. ಅಧ್ಯಯನ ಮಾಡುತ್ತಿದ್ದಾಗಿನಿಂದಲೂ ಪರಿಚಿತರಾಗಿರುವ, ಸುಮಾರು ೨೫ ವರ್ಷಗಳಿಂದಲೂ ಕುಟುಂಬದ ಸ್ನೇಹಿತರಾಗಿರುವ ಮುನೇಶ್ವರ ಲಾಖಾರವರು ಪೂರ್ಣಿಮಾರವನ್ನು ಅತ್ಯಂತ ಗೌರವದಿಂದ ಕಾಣುವ ಸಹೃದಯದವರಾಗಿದ್ದಾರೆ. ಶ್ರೀಯುತರು ಶಿಕ್ಷಣ ಮುಗಿಸಿದ ಮೇಲೆ ಬೀದರ ಜಿಲ್ಲಾಡಳಿತದಲ್ಲಿ ಉದ್ಯೋಗಸ್ಥರಾದರು. ಈ ಹಿಂದಿನ ಜಿಲ್ಲಾಧಿಕಾರಿಗಳಾಗಿದ್ದ ಟಿ.ಕೆ. ಅನಿಲಕುಮಾರ ಜೊತೆ ಪರೀಕ್ಷಾ ಜಾಗೃದಳದಲ್ಲಿ ಕರ್ತವ್ಯ ನಿಭಾಯಿಸುವ ಸಂದರ್ಭದಲ್ಲಿ ಶಿಕ್ಷಣ, ಆಡಳಿತದ ವಿಷಯವಾಗಿ ಚರ್ಚೆಯಾಗುತ್ತದೆ. ಅದರಲ್ಲೂ ಈ ಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಚಿಂತನೆ ನಡೆಸಿದ್ದರ ಪ್ರತಿಫಲವಾಗಿ, ಮೂಲಭೂತ ತಳಹದಿಯ ಮೇಲೆ ಸಮಾನ ಮನಸ್ಕರೊಂದಿಗೆ ಸೇರಿಕೊಂಡು ೨೦೦೫ರಲ್ಲಿ ಜ್ಞಾನಸುಧಾ ವಿದ್ಯಾಲಯವನ್ನು ಪ್ರಾರಂಭಿಸುತ್ತಾರೆ.

ವಾಣಿಜ್ಯ ಉದ್ದೇಶದಿಂದ ಹೊರತಾಗಿ, ಶೈಕ್ಷಣಿಕ ಮನೋಧರ್ಮದಿಂದ ಕೂಡಿದ ಈ ಸಂಸ್ಥೆಯು ಮೊದಲಿಗೆ ಶಿಶುಕೇಂದ್ರಿತ ಕಲಿಕಾ ಚಟುವಟಿಕೆಗೆ ಆಸ್ಪದ ನೀಡುತ್ತಲೇ ಹೆಮ್ಮರವಾಗಿ ಬೆಳೆದುನಿಂತಿದೆ. ಎಲ್.ಕೆ.ಜಿ.ಯಿಂದ ಪ್ರಾರಂಭಗೊಂಡ ಈ ಕಲಿಕಾ ಕ್ಷೇತ್ರವು ಇದೀಗ ಪಿ.ಯು.ಸಿ.ವರೆಗೆ ಬಂದು ತಲುಪಿದೆ. ಇನ್ನೂ ಹಲವಾರು ದಿಶೆಯಲ್ಲಿ ಬೆಳೆಯುವ ಲಕ್ಷಣಗಳಿವೆ ಎನ್ನುವುದು ಮಹತ್ತರ ಸಂಗತಿಯಾಗಿದೆ ಎನ್ನುತ್ತಾರೆ, ಮುನೇಶ್ವರ.

ಮಕ್ಕಳಲ್ಲಿ ಶಿಸ್ತು, ಸಂಯಮ ಬೆಳೆಸುವುದು ಇಂದಿನ ತುರ್ತು ಅಗತ್ಯವಾಗಿದೆ. ಅದರೊಂದಿಗೆ ಗುರು ಹಿರಿಯರ ಜೊತೆಗೆ ಆತ್ಮೀಯವಾಗಿ ಬೆರೆಯುವ, ಬೆಳೆಯುವ ವಾತಾವರಣವನ್ನು ಜ್ಞಾನಸುಧಾ ವಿದ್ಯಾಲಯ ಕಲ್ಪಿಸಿಕೊಡುವಲ್ಲಿ ಮಹತ್ವದ ಪಾತ್ರವಹಿಸುತ್ತಿದೆ. ಇದಕ್ಕೆಲ್ಲ ಪೂರ್ಣಿಮಾರವರ ಮಾರ್ಗದರ್ಶನವೇ ಕಾರಣವೆಂದು ಹೆಮ್ಮೆಯಿಂದ ಪ್ರತಿಪಾದಿಸುತ್ತಾರೆ.

ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿರುವ ಜ್ಞಾನಸುಧಾ ವಿದ್ಯಾಲಯದ ಸರ್ವಾಂಗೀಣ ಪ್ರಗತಿಗೆ ನಮ್ಮಿಬ್ಬರ ಅವಿಶ್ರಾಂತ ಶ್ರಮವೇ ಕಾರಣವೆಂದು ಜನತೆಗೆಲ್ಲ ಗೊತ್ತಿದೆ. ಅದಕ್ಕೆ ಕಾರಣ ಅಧ್ಯಕ್ಷೆ ಮತ್ತು ನಿರ್ದೇಶಕರ ನಡುವೆ ಯಾವುದೇ ರೀತಿಯ ಭಿನ್ನಾಭಿಪ್ರಾಯಗಳಿಲ್ಲ. ಶೇಕಡಾ ಒಂದಷ್ಟು ಅದು ಕಾಣಿಸಿಕೊಂಡರೂ ಅಲ್ಲಿ ವಿದ್ಯಾರ್ಥಿ ಕೇಂದ್ರಿತ ನಿಲುವು, ಸಂಸ್ಥೆಯ ವಿಕಾಸ, ಸಾಮಾಜಿಕ ಜವಾಬ್ದಾರಿ ಮುಖ್ಯವಾಗಿ ಪರಿಗಣಿಸುತ್ತಾರೆ. ಇದುವರೆಗೆ ಈ ಇಬ್ಬರು ಮಹನೀಯರು ತಮ್ಮ ಸ್ವಂತ ಫೋಟೋ ಹಾಕಿಸಿಕೊಂಡು ಶೈಕ್ಷಣಿಕವಾಗಿ ಪ್ರಚಾರ ಪಡೆದಿಲ್ಲವೆನ್ನುವುದು ಗಮನಿಸತಕ್ಕ ವಿಷಯವಾಗಿದೆ. ವ್ಯಕ್ತಿಕೇಂದ್ರಿತವಾಗಿ ಪ್ರಚಾರಗಿಟ್ಟಿಸಿಕೊಳ್ಳದೇ ಶೈಕ್ಷಣಿಕ ಗುಣಮಟ್ಟದಿಂದ ತಮ್ಮ ಸಂಸ್ಥೆಯ ಶಾಲಾ ಕಾಲೇಜುಗಳು ಗುರುತಿಸಲ್ಪಡಬೇಕೆಂಬ ಸದಾಶಯ ಹೊಂದಿದ್ದಾರೆ.

"ವಾರದ ೨೪ ಗಂಟೆಗಳಲ್ಲೂ ತಮ್ಮತನವನ್ನು ಚಿಂತಿಸದೇ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಕಾರಣರಾಗುತ್ತಿರುವ ಪೂರ್ಣಿಮಾರವರನ್ನು ಜ್ಞಾನಸುಧಾ ವಿದ್ಯಾಲಯದ ತಾಯಿ" ಎಂದು ಮುನೇಶ್ವರ ಲಾಖಾ ಗೌರವಿಸುತ್ತಾರೆ. ಇದು ಅವರ ಹೃದಯ ಶ್ರೀಮಂತಿಕೆಗೆ ಹಿಡಿದಿರುವ ಕನ್ನಡಿಯಾಗಿದೆ.

ಪ್ರಾಚಾರ್ಯರಾದ ಡಾ. ಬಸವರಾಜ ಬಲ್ಲೂರ್:

ಸತ್ಯ ಶುದ್ಧ ಕಾಯಕ ನಿಷ್ಠೆ, ಶಿಸ್ತು, ತಾತ್ವಿಕ ಬದ್ಧತೆಗೆ ಹೆಸರಾದವರೆಂದರೆ, ಪೂರ್ಣಿಮಾ ಜಿ. ಅವರು ಹೆಸರಿಗೆ ತಕ್ಕಂತೆ ಪೂರ್ಣತ್ವ ಪಡೆದವರು. ಬಸವಾದಿ ಶರಣರ ಜಾತ್ಯತೀತ ನಿಲುವನ್ನು ತಮ್ಮ ಬದುಕಿನಲ್ಲಿ ನಿಜಾಚರಣೆಯಲ್ಲಿ ತಂದು ಸಾಮಾಜಿಕ ಸಮತೆ, ಧರ್ಮ ಸಮನ್ವಯತೆ ಮೆರೆದವರು. ಶಿಕ್ಷಣ, ದೇಶಿ ಚಿಂತನೆ ಅವರ ಬದುಕಿನ ಅಂತಃಶಕ್ತಿ. ಸಾಮಾನ್ಯ ಮಹಿಳೆಯೊಬ್ಬರು ಯಾವುದೇ-ಯಾರದ್ದೇ ನೆರವಿಲ್ಲದೇ ಸ್ವಸಾಮರ್ಥ್ಯದಿಂದಲೇ ಮೇಲೇರಬಹುದೆಂಬುವುದಕ್ಕೆ ಸಾಕ್ಷಿಯಾದವರು.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನಾನು ಎಂ.ಎ. ಕನ್ನಡ ಪ್ರಥಮ ವರ್ಷದಲ್ಲಿ ಓದುವಾಗ ಅವರು ಎಂ.ಎ ಆಂಗ್ಲ ಅಂತಿಮ ವರ್ಷದಲ್ಲಿ ಅಧ್ಯಯನ ಮಾಡುತ್ತಿದ್ದರು. ಸದಾ ಪಾದರಸದಂತೆ ಕ್ರಿಯಾಶೀಲರಾಗಿ ಚಟುವಟಿಕೆಗಳೊಂದಿಗಿರುವುದು ನೋಡಿ ಖುಷಿಯಾಗುತ್ತಿತ್ತು. ಕೆಲ ದಿನಗಳಲ್ಲೇ ಅವರೂ ಬೀದರಿನವರೇ ಎಂದು ತಿಳಿದು ನನಗೆ ಹೆಮ್ಮೆ ಎನಿಸಿತು. ಮುಂದಿನ ದಿನಗಳಲ್ಲಿ ಅವರ ಬದುಕಿನ ಅನೇಕ ಏರಿಳಿತಗಳ ಮಧ್ಯ ಬೀದರಿನ ನ್ಯಾಷನಲ್ ಕಾಲೇಜು ಸೇರಿ ಅಲ್ಲಿ ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿರುವಾಗಲೇ ಸಮಾಜ, ಸಾಹಿತ್ಯ, ಸಂಸ್ಕೃತಿ ಹೀಗೆ ಸಾರ್ವಜನಿಕ ಬದುಕಿಗೆ ಒಡ್ಡಿಕೊಂಡರು. ಕಾಲಾಂತರದಲ್ಲಿ ಅವರೇ ಒಂದು ಸ್ವಂತ ಶಾಲಾ-ಕಾಲೇಜು ಆರಂಭಿಸಿ, ಬೀದರನಲ್ಲಿ ಬಹುದೊಡ್ಡ ಶೈಕ್ಷಣಿಕ ಕ್ರಾಂತಿಗೆ ನಾಂದಿ ಹಾಡಿದರು.

ನೂರು ನೋವು ಒಡಲೊಳಗಿಟ್ಟುಕೊಂಡು ನಲಿವು ಮಾತ್ರ ಸಮಾಜಕ್ಕೆ ಕೊಡುತ್ತ, ವ್ಯಷ್ಟಿಯಿಂದ ಸಮಷ್ಟಿಯ ಬದುಕನ್ನು ಕಟ್ಟುತ್ತಿರುವಾಗ ಅವರ ಬಗ್ಗೆ ಅನೇಕ ಗಾಳಿ ಮಾತುಗಳು ತೇಲಿಬಂದವು. ಅವರ ಸಾಂಸ್ಕೃತಿಕ ಕಾಳಜಿಗಳನ್ನು ಗಮನಿಸುತ್ತ ಬಂದಿರುವ ನಮ್ಮಂಥವರಿಗೆ ನೋವೆನಿಸುತ್ತಿತ್ತು. ಸಾಮಾಜಿಕ ಸ್ವಾಸ್ಥ್ಯ ಬಯಸುವ ಕ್ರಿಯಾಶೀಲರಿಗೆ ಈ ಸಮಾಜ ಯಾವತ್ತೂ ಹೀಗೆ ಅನುಮಾನದಿಂದಲೆ ನೋಡುತ್ತದೆ. ಅನೇಕ ದಾರ್ಶನಿಕರು, ಪ್ರಗತಿಪರ ಚಿಂತಕರು ಏನೆಲ್ಲಾ ಎದುರಿಸಿರುವುದನ್ನು ಗಮನಿಸಿದರೆ ಇದ್ಯಾವ ಮಹಾ ಅನಿಸುತ್ತಿತ್ತು. ಅದೆ ಸಮಾಧಾನದ ಸಂಗತಿ.

ಈ ಮಧ್ಯ ಅಖಿಲ ಭಾರತ ಮಹಿಳಾ ಲೇಖಕಿಯರ ಸಾಹಿತ್ಯ ಸಮ್ಮೇಳನದ ಕಾರಣವಾಗಿ ಅವರೊಂದಿಗೆ ಸುರೇಶ ಚನಶೆಟ್ಟಿ ನಾವೆಲ್ಲ ಕೂಡಿ ಕೆಲಸ ಮಾಡುವ ಸಂದರ್ಭದಲ್ಲಿ ಸಾಂದರ್ಭಿಕವಾಗಿ ಅವರ ಬದುಕಿನ ಏರಿಳಿತಗಳನ್ನು ಬಿಚ್ಚಿಟ್ಟರು. ಅವೆಲ್ಲ ಕೇಳಿದಾಗ ಅವರ ಬಗ್ಗೆ ಇದ್ದ ಅಭಿಮಾನ ಮತ್ತಷ್ಟು ಹೆಚ್ಚಾಯಿತು. ಅವರೊಂದಿಗಿನ ಮಾತುಗಾರಿಕೆಯಿಂದ ಅವರಲ್ಲಿನ ವಿದ್ವತ್ತು, ಸಾಂಸ್ಕೃತಿಕ ಕಾಳಜಿ,

ಅದಮ್ಯ ಜೀವನ ಪ್ರೀತಿ ದಂಗಾಗಿಸಿದವು. ಅವರು ತಮ್ಮ ಮಕ್ಕಳನ್ನು ಅತ್ಯಂತ ಸಾಂಘಿಕವಾಗಿ ಬೆಳೆಸಿದ ಪರಿ ಅನನ್ಯ.

ಜಾಗತೀಕರಣದ ಫಲವಾಗಿ ಹುಟ್ಟಿಕೊಂಡ ಭಯೋತ್ಪಾದನೆಯಿಂದ ಇಡೀ ಜಗತ್ತು ಸ್ವ-ಧರ್ಮ, ಸ್ವ-ಜಾತಿ, ಪಕ್ಷಪಾತಗಳಲ್ಲಿ ಮುಳುಗಿ ಭಯದ ವಾತಾವರಣ ಸೃಷ್ಠಿಯಾಗಿರುವ ಜಾಗತಿಕ ಸಮಸ್ಯೆಗಳಿಗೆ ಈ ಕುಟುಂಬದ ತತ್ವಗಳು ಪರಿಹಾರೋಪಾಯವಾಗಿ ಕಾಣಿಸುತ್ತವೆ. ಏಕೆಂದರೆ ಇವತ್ತಿಗೂ ಅವರ ಮನೆಯಲ್ಲಿ ದೀಪಾವಳಿ ಸೇರಿದಂತೆ ಭಾರತೀಯ ಸಾಂಸ್ಕೃತಿಕ ಹಬ್ಬಗಳು ವೈಭವದಿಂದ ಆಚರಿಸುವಂತೆ ಕ್ರಿಸ್ಮಸ್ ಹಬ್ಬವನ್ನು ಆಚರಿಸುವುದು ಹೆಮ್ಮೆಯ ವಿಷಯ. ಆದರೆ ಇನ್ನೊಂದು ಆಶ್ಚರ್ಯದ ಸಂಗತಿಯೆಂದರೆ ಅವರ ಮಗಳು ಪೂಜಾ ಮಗ ಅಮೋಘ ರಂಜಾನ್ ಹಬ್ಬದಲ್ಲಿ ರೋಜಾ ಇರುವುದು; ಬಹುದೊಡ್ಡ ಗಮನಾರ್ಹ ಸಂಗತಿ. ಒಂದೆ ಮನೆಯಲ್ಲಿ ಹಿಂದೂ, ಕ್ರೈಸ್ತ ಹಾಗೂ ಇಸ್ಲಾಂ ಸಂಪ್ರದಾಯಗಳ ಆಚರಣೆಯ ಮೂಲಕ ಬಹುದೊಡ್ಡ ಧರ್ಮ ಸಮನ್ವಯತೆ ಕಟ್ಟಿಕೊಡುತ್ತಿರುವುದು ಅಭಿನಂದನಾರ್ಹ ಸಂಗತಿ.

ಅವರ ಇಬ್ಬರೂ ಮಕ್ಕಳು ಜಗತ್ತಿನ ಎಲ್ಲ ಇಜಂ, ಮತ, ಪಂಥ, ವಾಗ್ವಾದಗಳ ಬಗ್ಗೆ ನಿರರ್ಗಳವಾಗಿ ಮಾತನಾಡುತ್ತಲೆ ಯಾವ ಒಂದು ಪಂಥಕ್ಕೂ ಜೋತು ಬೀಳದೆ ಕುವೆಂಪು ಅವರು ಹೇಳುವಂತೆ "ಮನುಜ ಮತ ವಿಶ್ವ ಪಥ" ಎಂಬ ಮಾನವೀಯ ತುಡಿತ ಹೊಂದಿದವರಾಗಿದ್ದಾರೆ. ಹೀಗಾಗಿ ಅವರ ಕುಟುಂಬದ ಸಾಮೀಪ್ಯವೆಂದರೆ ಅದು ಬಹುಜ್ಞತೆ ಪಡೆದಂತೆ. ಲೋಕ ಕಲ್ಯಾಣದ ಚಿಂತನೆ ನಡೆಸಿದಂತೆ. ಇವೆಲ್ಲಕ್ಕಿಂತ ಮುಖ್ಯವಾಗಿ ಸಾಮಾಜಿಕ ನಿಂದನೆಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ "ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದೆ ಬಂದರೆ ಸಮಾಧಾನಿಯಾಗಿರಬೇಕು... " ಎಂಬ ಅಕ್ಕಮಹಾದೇವಿಯ ಆತ್ಮಸ್ಥೈರ್ಯ ಪೂರ್ಣಿಮಾ ಅವರಲ್ಲಿದೆ. ಆದ್ದರಿಂದ ಅವರು ನಮ್ಮ ಮಧ್ಯದ ಸಾಂಸ್ಕೃತಿಕ ನಾಯಕಿ ಎಂದು ಡಾ. ಬಸವರಾಜ ಬಲ್ಲೂರ ಬಣ್ಣಿಸಿದ್ದಾರೆ.

೦೦

ಪರಿಪೂರ್ಣ ಬೆಳದಿಂಗಳು

"ದೇಶ ಸುತ್ತು, ಕೋಶ ಓದು" ಎನ್ನುವ ಗಾದೆಮಾತು ನಮ್ಮಲ್ಲಿ ಪ್ರಚಲಿತದಲ್ಲಿದೆ. ಇದಕ್ಕೆ ಪೂರ್ಣಿಮಾರವರದು ಅಕ್ಷರಶಃ ಹೊಂದಿಕೊಳ್ಳುವ ವ್ಯಕ್ತಿತ್ವ. ಓದಿನಿಂದ ಆತ್ಮವಿಶ್ವಾಸ, ಜ್ಞಾನವರ್ಧನೆಯಾದರೆ ದೇಶ ವಿದೇಶ ಪರ್ಯಟನೆಯಿಂದಾಗಿ ವ್ಯವಹಾರ ಕುಶಲತೆ ಹೆಚ್ಚುತ್ತದೆ. ಇವೆರಡು ಪ್ರಕ್ರಿಯೆಗಳಲ್ಲಿ ಅವರು ತಮ್ಮ ಕ್ರಿಯಾಶೀಲತೆಯನ್ನು ರೂಢಿಸಿಕೊಂಡಿದ್ದಾರೆ.

೨೦೦೦ದಲ್ಲಿ ರೋಟರಿ ಕಲ್ಬ್ ೩೧೬೦ ಜಿಲ್ಲೆಯಿಂದ ಯು.ಎಸ್.ಎ; ಕೆನಡಾ ದೇಶಗಳಿಗೆ ಗ್ರೂಪ್ ಸ್ಟಡಿ ಎಕ್ಸ್‌ಚೆಂಜ್ ಯೋಜನೆಯಡಿಯಲ್ಲಿ ಶೈಕ್ಷಣಿಕ ರಾಯಭಾರಿಯಾಗಿ ಪ್ರವಾಸ ಕೈಗೊಂಡು ವಿದೇಶಿಯರ ಜೊತೆ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಭಾರತೀಯ ಆಹಾರ ಪದ್ಧತಿ ಮತ್ತು ಅವಿಭಕ್ತ ಕುಟುಂಬ ಪದ್ಧತಿಗಳ ಬಗೆಗೆ ತಿಳಿಸಿದ್ದಲ್ಲದೆ ಅವರಲ್ಲಿನ ಶೈಕ್ಷಣಿಕ ಸುಧಾರಣಾತ್ಮಕ ಅಂಶಗಳನ್ನು ಮನನ ಮಾಡಿಕೊಂಡು ಅಭಿವೃದ್ಧಿಯ ಚಿಂತನೆಯಲ್ಲಿ ಸಹಭಾಗಿತ್ವ ನಿಭಾಯಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಭಾರತೀಯ ಕುಟುಂಬ ಕಲ್ಯಾಣ ಯೋಜನೆಯ ಬೀದರ ಘಟಕದಲ್ಲಿ ಸುದೀರ್ಘ ವರ್ಷಗಳ ಕಾಲ ಅಂದರೆ ೧೯೮೮ರಿಂದ ಇಲ್ಲಿಯವರೆಗೆ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮೀಣ ಭಾಗದ ಜನರಿಗೆ ಜನಸಂಖ್ಯಾ ನಿಯಂತ್ರಣದ ಕ್ರಮಗಳ ಬಗ್ಗೆ ಮನವರಿಕೆ ಮಾಡಿಕೊಡುತ್ತಲೇ ಹದಿಹರೆಯದವರ ಮಾನಸಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ದಿಶೆಯಲ್ಲಿ ಮಹತ್ವದ ಸೇವೆ ಸಲ್ಲಿಸಿದ್ದಾರೆ.

ರಾಷ್ಟ್ರೀಯ ಮಟ್ಟದ ಕಾರ್ಯಕಾರಣಿ ಸಮಿತಿಯ ಉಪಾಧ್ಯಕ್ಷರಾಗಿ ಮಾಡಿರುವ ಕಾರ್ಯಗಳಿಂದಾಗಿ ಅವರು ದೇಶ ವಿದೇಶಗಳಲ್ಲಿ ಹೆಸರು ಗಳಿಸಿದ್ದಾರೆ. ಅದರ ಮುಂದುವರಿದ ಭಾಗವಾಗಿ ಮಾಯನ್ಮಾರ್, ಥೈಲ್ಯಾಂಡ್, ಶ್ರೀಲಂಕಾ ಮೊದಲಾದ ದೇಶಗಳಲ್ಲಿ ಈ ಕುರಿತು ಗುರುತರವಾದ ಜವಾಬ್ದಾರಿ ನಿಭಾಯಿಸಿದ್ದಾರೆ.

ಇಂತಹ ಹಲವಾರು ಸೇವೆಗಳನ್ನು ಗುರುತಿಸಿ ಅನೇಕ ಸಂಘ ಸಂಸ್ಥೆಗಳು ಡಾ. ಪೂರ್ಣಿಮಾರವರನ್ನು ಗೌರವಿಸಿವೆ. ೨೦೦೪ರಲ್ಲಿ ಭಾರತದ ಅಂದಿನ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡಿಸ್ ಅವರಿಂದ ರತನ್ ಟಾಟಾ ಇನ್ಸಿಟ್ಯೂಟ್ ಪ್ರಾಯೋಜಿತ "ಇಂಡಿಯಾ ಲೀಡರ್ಸ್ ಫಾರ್ ಟುಮಾರೊ" ಎಂಬ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

೨೦೦೮ರಲ್ಲಿ ಬೀದರಿನ ಸುರಭಿ ಸಂಸ್ಥೆಯಿಂದ "ವರ್ಷದ ಮಹಿಳೆ" ಗುರುತಿಸಲಾಗಿದ್ದಲ್ಲದೆ ೨೦೦೯ರಲ್ಲಿ ಜಿಲ್ಲಾಡಳಿತದಿಂದ "ಉತ್ತಮ ಸಮಾಜ ಸೇವಕಿ" ಎಂದು ಸನ್ಮಾನಿಸಲಾಗಿದೆ. ೨೦೧೨ರ ನವ್ಹೆಂಬರ್ ೭ರಿಂದ ೯ರವರೆಗೆ ನಡೆದ ೫ನೆಯ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮಾವೇಶದ ಸರ್ವಾಧ್ಯಕ್ಷೆಯ ಗೌರವಕ್ಕೆ ಭಾಜನರಾಗಿದ್ದಾರೆ. ೨೦೧೮ರ ಅಕ್ಟೋಬರ್ ೨೬ರಿಂದ ೨೮ರವರೆಗೆ ಬೀದರನಲ್ಲಿ ಜರುಗಿದ ಅಖಿಲ ಭಾರತ ಕವಿಯತ್ರಿಯರ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ, ಸಮ್ಮೇಳನದ ಯಶಸ್ವಿಗೆ ಕಾರಣಕರ್ತರಾಗಿ ಸಲ್ಲಿಸಿದ ಸೇವೆ ಶ್ಲಾಘನೀಯವಾಗಿದೆ.

೨೦೧೨ರ ಶರಣ ಸಂಸ್ಕೃತಿ ಮೇಳದಲ್ಲಿ ಚಿತ್ರದುರ್ಗದ ಡಾ. ಶಿವಮೂರ್ತಿ ಮುರುಘಾ ಶರಣರಿಂದ "ಶಿಕ್ಷಣ ಸಿರಿ"; ೨೦೧೨ರ ಸಾಲಿನ ಸಿರಿಗನ್ನಡ ಪ್ರತಿಷ್ಠಾನ ಗುರುಮಠಕಲ್ ಇವರ ವತಿಯಿಂದ "ಸಾಧಕ ಶಿಕ್ಷಕ" ಪ್ರಶಸ್ತಿಗೆ ಆಯ್ಕೆಯಾಗಿದ್ದು ಅವರ ಸೇವಾ ಕೈಂಕರ್ಯಕ್ಕೆ ಸಾಕ್ಷಿಯಾಗಿದೆ.

೨೦೧೨ರ ಡಿಸೆಂಬರ್ ೧೮ರಿಂದ ೨೦ ರವರೆಗೆ ಬ್ಯಾಂಗ್‌ಕಾಕ್‌ನಲ್ಲಿ ನಡೆದ S.A.R (South Asian Regional) ದೇಶಗಳ A.R.C ಸಮ್ಮೇಳನಕ್ಕೆ ಭಾರತದ ರಾಯಭಾರಿಯಾಗಿ ಪ್ರತಿನಿಧಿಸಿದ್ದು ಹೆಮ್ಮೆಯ ಸಂಗತಿಯಾಗಿದೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ೨೦೧೩ರಲ್ಲಿ ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿದ ಅಂತರ್-ರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಪೂರ್ಣಿಮಾರವರ ಶೈಕ್ಷಣಿಕ ಸೇವೆ ಗುರುತಿಸಿ ಗೌರವಿಸಿದೆ.

ದ ಹಿಂದೂ ದಿನಪತ್ರಿಕೆ ಹಾಗೂ ಹೈದರಾಬಾದಿನ ಎಸ್.ಎಸ್.ಆಯ್.ಎಂ.ನ ಅಂತರ್-ರಾಷ್ಟ್ರೀಯ ಅಧ್ಯಯನ ಕೇಂದ್ರವು ೨೦೧೩ರ ನವೆಂಬರ್ ೨೯ರಂದು ಜಾಗತಿಕ ಅವಕಾಶಗಳಿಗಾಗಿ ಅಂತರ್-ರಾಷ್ಟ್ರೀಯ ಮಟ್ಟದ ಶಿಕ್ಷಣ ಕುರಿತು ಉಪನ್ಯಾಸ ನೀಡಿದ್ದನ್ನು ಆ ಸಂಸ್ಥೆಗಳು ಶ್ಲಾಘಿಸಿವೆ. ದ ಟೈಮ್ಸ್ ಗ್ರೂಪ್‌ನ ವಿಜಯ ಕರ್ನಾಟಕ ದಿನಪತ್ರಿಕೆಯು ಕೊಡಮಾಡುವ ಅಚಿವರ್ಸ್ ಆಫ್ ಕರ್ನಾಟಕ-೨೦೧೮ರ ಗೌರವಕ್ಕೆ ಪಾತ್ರರಾಗಿದ್ದಾರೆ.

ಹರಿಯಾಣದ ಗುರಗಾಂವ ಬಿ.ಎಂ.ಎಲ್. ಮುಂಜಾಲ್ ವಿಶ್ವವಿದ್ಯಾಲಯವು ಅಧ್ಯಕ್ಷರಾಗಿ ಸಲ್ಲಿಸಿದ ಶೈಕ್ಷಣಿಕ ಸೇವೆಯನ್ನು ಪರಿಗಣಿಸಿ ಜ್ಞಾನಸುಧಾ ವಿದ್ಯಾಲಯಕ್ಕೆ ರಾಷ್ಟ್ರೀಯ ಮಟ್ಟದ ಅತ್ಯುತ್ತಮ ಅರೆವಸತಿ ಶಾಲೆ ಗುರುತಿಸಿದೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಪ್ರಧಾನ ಮಂತ್ರಿಯವರ ಆಪ್ತಸಲಹೆಗಾರರು ಹಾಗೂ ಭಾರತದ ರಾಯಭಾರಿಗಳಾದ ಡಾ. ದೀಪಕ ವೊಹ್ರಾರವರು ೨೦೧೯ರ ಸಪ್ಟೆಂಬರ್ ೧೨ರಂದು ಸಾಧಕಿಯವರನ್ನು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಇವುಗಳಲ್ಲದೆ ಹಲವಾರು ಸಂಘ ಸಂಸ್ಥೆಗಳು, ಮಠ ಮಾನ್ಯಗಳು ಪೂರ್ಣಿಮಾರವರ ಸಾಧಕ ಜೀವನ, ಸೇವಾ ಕಾರ್ಯಗಳನ್ನು ಕೊಂಡಾಡಿ ಸನ್ಮಾನಿಸಿವೆ.

ಸಾಮಾಜಿಕ ಸಂಘಟನೆ, ನಿರಂತರ ಕಾರ್ಯಚಟುವಟಿಕೆಗಳ ಜೊತೆಗೆ ಅವರು ಬಿಡುವಿನ ಒಂದರಗಳಿಗೆ ಸಹ ವ್ಯರ್ಥವಾಗಿ ಕಳೆಯುವುದಿಲ್ಲ. ಓದು, ಬರಹ, ತಾತ್ತ್ವಿಕ ಚಿಂತನೆ, ಪರಸ್ಪರ ಸಮಾಲೋಚನೆಗಳಲ್ಲಿ ಭಾಗವಹಿಸುತ್ತ, ಬೆಳವಣಿಗೆಯ ಪಥದಲ್ಲಿ ಸಂಚರಿಸುತ್ತಾರೆ. ಮಾತು ಕೃತಿಗಳಲ್ಲಿ ಹೆಚ್ಚಿನ ಸಾಮೀಪ್ಯವಿರುವುದರಿಂದ ಪೂರ್ಣಿಮಾರವರ ವ್ಯಕ್ತಿತ್ವಕ್ಕೆ ಮೆರಗು ಬಂದಿದೆ. ಹಸನಾದ ಬದುಕಿಗೆ ಅವರ ಚಿಂತನೆಗಳು ಅಡಿಪಾಯಗಳಾಗಿವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ರಕ್ತಸಂಬಂಧಗಳು ಕಡಿತಗೊಂಡಾಗ ತನ್ನತನ ರೂಪಿಸಿಕೊಳ್ಳುವ, ಸಂರಚನೆಗೆ ಮಾದರಿಯಾಗುವ, ಸ್ಥಾವರವಲ್ಲದ ಅವರ ಜೀವನ ವಿಧಾನವು ಇವತ್ತಿನ ಬಹುತೇಕರಿಗೆ ಮಾದರಿಯಾಗುತ್ತದೆ. ಸಂಕೀರ್ಣವಲ್ಲದ, ತೆರೆದಿಟ್ಟ ಅವರ ಬದುಕಿನ ಪುಟಗಳನ್ನು ಓದುತ್ತ ಹೋದಂತೆ ಸಹಜವಾಗಿಯೇ ಪ್ರೇರಣೆಯಾಗಬಲ್ಲ ಜೀವನ ಸಾಧನೆಗಳು ಇಂದಿನ ಸಮಾಜಕ್ಕೆ ದಿಕ್ಸೂಚಿಯಾಗಿವೆ. ಅವರಿಂದ ಕಲಿಯಬೇಕಾದ ಬಹಳಷ್ಟು ಅಂಶಗಳು ಇನ್ನೂ ಅನಾವರಣಗೊಳ್ಳಬೇಕಾಗಿದೆ!

OO

ಪುಸ್ತಕ ದಾಸೋಹಿಗಳು



ಶ್ರೀಮತಿ ಸಂಗಿತಾ ಶ್ರೀ ಮುನೇಶ್ವರ ಲಕ್ಕಾ ಮಗಳು ಕು. ಜಾಗೃತಿ

ಶ್ರೀ ಮುನೇಶ್ವರ ಲಕ್ಕಾ

ಸತ್ಯಶುದ್ಧ ಕಾಯಕ ನಿಷ್ಠೆಯ ಶ್ರೀ ಮುನೇಶ್ವರ ಲಕ್ಕಾ ನಮ್ಮ ಮಧ್ಯದ ಅಪರೂಪದ ವ್ಯಕ್ತಿ. ಶಿಸ್ತು, ದಕ್ಷತೆ, ಪ್ರಾಮಾಣಿಕತೆಗೆ ಹೆಸರಾದ ಅವರು ಅಭಿವೃದ್ಧಿಯ ಕನಸುಗಾರರಾಗಿದ್ದು, ಬೀದರ ಸಮಗ್ರ ಅಭಿವೃದ್ಧಿಯ ಹಿಂದೆ ಬೆರಳೆಣಿಕೆ ಜನರಲ್ಲಿ ಮುನೇಶ್ವರರು ಒಬ್ಬರು. ಮೂತಃ ಬೀದರ ತಾಲ್ಲೂಕಿನ ಜನವಾಡದವರಾದ ಇವರು ಬಿ.ಎ. ಪದವೀಧರರು. ಬಾಲ್ಯದ ದಿನಗಳನ್ನು ಬೆಂಗಳೂರಿನಲ್ಲಿ ಕಳೆದವರು. ಪತಿಗೆ ತಕ್ಕ ಪತ್ನಿಯಾದ ಶ್ರೀಮತಿ ಸಂಗೀತಾ ಅವರು ಬ್ಯಾಂಕ ಉದ್ಯೋಗಿಗಾಳಾಗಿದ್ದು ಇವರ ಎಲ್ಲ ಚಟುವಟಿಕೆಗಳಿಗೆ ಬೆನ್ನ ಹಿಂದಿನ ಬೆಳಕಾಗಿ ಸಮಗ್ರ ಅಭಿವೃದ್ಧಿ ಕಾರ್ಯಗಳಿಗೆ ನೆರವಾಗಿ ನಿಂತವರು.

ಬೀದರ ಜಿಲ್ಲಾಧಿಕಾರಿಗಳ ಕಚೇರಿಯ ಸಣ್ಣ ಉಳಿತಾಯ ವಿಭಾಗದಲ್ಲಿ 19 ವರ್ಷಗಳ ಕಾಲ ಸೇವೆ ಸಲ್ಲಿಸಿದ ಶ್ರೀಯುತರು ಅಭಿವೃದ್ಧಿ ಅಧಿಕಾರಿ ಸೇರಿದಂತೆ ಸರ್ಕಾರದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸಿ ಆಯಾ ಹುದ್ದೆಗಳಿಗೆ ಗೌರವ ತಂದು ಕೊಟ್ಟವರು. ಬೀದರ್ ಉತ್ಸವ ಮತ್ತು ಬಸವ ಉತ್ಸವದ ನೋಡಲ್ ಅಧಿಕಾರಿಗಳಾಗಿ ಅನೇಕ ಉತ್ಸವಗಳ ಯಶಸ್ಸಿನ ರೂವಾರಿಗಳು. ಎಂಥದಾದರೂ ಸರಿ ಸರಕಾರಿ ನೌಕರಿ ಇರಲೆಂಬ ಈ ಹೊತ್ತಿನಲ್ಲಿ ಸರಕಾರಿ ಸೇವೆಯಿಂದ 2012 ರಲ್ಲಿ ಸ್ವಯಂ ಸೇವಾ ನಿವೃತ್ತಿ ಪಡೆದು ತಮ್ಮ ಬದುಕಿನ ಬಹುಭಾಗದ ಪೂರ್ಣಾವಧಿಯನ್ನು ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಸೇವೆಗೆ ಮೀಸಲಾಗಿಟ್ಟವರು ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಸದಸ್ಯರಾಗಿರುವ ಇವರು ಪ್ರಸ್ತುತ ಜ್ಞಾನಸುಧಾ ವಿದ್ಯಾ ವಿದ್ಯಾಲಯ ಬೀದರನ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದು ಸಮಗ್ರ ಶೈಕ್ಷಣಿಕ ವಿಕಾಸಕ್ಕಾಗಿ ಅಹರ್ನಿಶಿ ದುಡಿಯುತ್ತಿದ್ದಾರೆ. ಶಿಕ್ಷಣ ಒಂದು ವ್ಯಾಪಾರೀಕರಣವಾಗಿರುವ ಈ ಹೊತ್ತಿನಲ್ಲಿ ಅದನ್ನು ಒಂದು ಮೌಲ್ಯವಾಗಿ ನೋಡುತ್ತಲೆ ಶಿಕ್ಷಣವನ್ನು ಮಾನವೀಕರಣಗೊಳಿಸಲು ಯತ್ನಿಸುತ್ತಿರುವರು. ಇವರ ಸೇವೆ ಸಾಧನೆಗಳನ್ನು ಪರಿಗಣಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಬೀದರ ವತಿಯಿಂದ "ಶಿಕ್ಷಣ ರತ್ನ ಪ್ರಶಸ್ತಿ" ನೀಡಿ ಗೌರವಿಸಿದೆ.



ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ, ಹಾಗೂ ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆಯ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ.

ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ. ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಲಾಗಿದೆ. ಇದು ಚಾರಿತ್ರಿಕವಾಗಿ ಮಹತ್ವದ ಯೋಜನೆಯಾಗಿದೆ. ನಮ್ಮ ಮಧ್ಯದ ಅಪರೂಪದ ಸಂಶೋಧಕರು, ಸಾಹಿತಿಗಳಾದ **ಡಾ. ರಘುಶಂಖ ಭಾತಂಬ್ರಾ** ಅವರು ಬರೆದ **ಶಿಕ್ಷಣ ಸಿರಿ ಡಾ. ಪೂರ್ಣಿಮಾ ಜಿ.** ಜೀವನ ಸಾಧನೆ ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. ಡಾ. ಪೂರ್ಣಿಮಾ ಜಿ.ಯವರು ಬೀದರನಲ್ಲಿ ಬಹುದೊಡ್ಡ ಶೈಕ್ಷಣಿಕ ಕ್ರಾಂತಿಗೈದವರು. ಸಮಸಮಾಜ ರೂಪಿಸಬೇಕೆಂಬ ದೇಶಿಚಿಂತನೆಯ ಸಾಂಸ್ಕೃತಿಕ ರಾಯಭಾರಿಗಳಾಗಿದ್ದಾರೆ. ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಮೂಲಕ ಅನೇಕರ ಬದುಕಿಗೆ ಬೆಳಕಾಗಿದ್ದಾರೆ. ಜೊತೆಗೆ ಕಲೆ ಸಾಹಿತ್ಯಕ್ಕೆ ಉದಾರ ಪ್ರೋತ್ಸಾಹ ನೀಡುತ್ತ ಬಂದಿದ್ದಾರೆ. ಅವರ ಜೀವನ ಸಾಧನೆ ಕುರಿತು ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ.

ಸಹೃದಯರು ಸಹಸ್ಪಂದಿಸಿ ಓದುವ ಮೂಲಕ ಅಕ್ಷರ ಪ್ರೀತಿ ಮೆರೆದರೆ ಪರಿಷತ್ತಿನ ಶ್ರಮ ಸಾರ್ಥಕವೆಂದು ಭಾವಿಸಲಾಗಿದೆ.

ಸುರೇಶ ಚನಶೆಟ್ಟಿ

ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ